


ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | ಜುಲೈ 25 ಗುರುವಾರ 2024

ಸಂಪುಟ: 45 | ಸಂಚಿಕೆ: 100 | ಪುಟಗಳು: 12 | ₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com



ಮುಡಾ ಹಗರಣ; ವಿಧಾನಸಭೆಯಲ್ಲಿ ಕೋಲಾಹಲ; ಚರ್ಚೆಗೆ ಅವಕಾಶ ಕೊಡಲು ವಿಪಕ್ಷಗಳ ಆಗ್ರಹ; ಸಭಾಧ್ಯಕ್ಷರ ನಿರಾಕರಣೆ; ಆಡಳಿತ–ವಿಪಕ್ಷಗಳ ನಡುವೆ ವಾಕ್ಸಮರ; ಎರಡು ಬಾರಿ ಸದನದ ಕಲಾಪ ಮುಂದೂಡಿಕೆ; ಕೊನೆಗೆ

ಉಭಯ ಸದನಗಳಲ್ಲಿ ಬಿಜೆಪಿ–ಜೆಡಿಎಸ್

ಅಹೋರಾತ್ರಿ ಧರಣಿ

ಬೆಂಗಳೂರು, ಜು.24(ಕೆಎಂಶಿ)–ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಬಿಡಿ ನಿವೇಶನಗಳ ಹಂಚಿಕೆ ವಿಧಾನ ಸಭೆಯಲ್ಲಿಂದು ಭಾರಿ ಕೋಲಾಹಲಕ್ಕೆ ಕಾರಣವಾಯಿತು.

ಚರ್ಚೆಗೆ ಅವಕಾಶ ನೀಡಲಿಲ್ಲವೆಂದು ಬಿಜೆಪಿ ಸದಸ್ಯರು ಎರಡೂ ಸದನಗಳಲ್ಲಿ ಅಹೋರಾತ್ರಿ ಧರಣಿ ಆರಂಭಿಸಿದ್ದಾರೆ.

ಇಂದು ಬೆಳಗ್ಗೆ ಸದನ ಸಮಾವೇಶಗೊಳ್ಳುತ್ತಿದ್ದಂತೆ ಆಡಳಿತ ಮತ್ತು ಪ್ರತಿಪಕ್ಷಗಳ ನಡುವೆ ಈ ಬಗ್ಗೆ ಭಾರಿ ವಾಕ್ ಸಮರ ನಡೆದು ಸಭಾಧ್ಯಕ್ಷರು ಎರಡು ಬಾರಿ ಸದನ ಮುಂದೂಡಿದರಾದರೂ ಈ ವಿಷಯವನ್ನು ನಿಲುವಳಿ ಸೂಚನೆಯಡಿ ಚರ್ಚೆಗೆ ತೆಗೆದುಕೊಳ್ಳಲು ನಿರಾಕರಿಸಿ ಪ್ರತಿಪಕ್ಷಗಳ ಮನವಿಯನ್ನು ತಳ್ಳಿಹಾಕಿದರು.

ಬೆಳಗ್ಗೆ ಸದನ ಆರಂಭಗೊಳ್ಳುತ್ತಿದ್ದಂತೆ ಪ್ರತಿಪಕ್ಷದ ನಾಯಕ ಆರ್.ಅಶೋಕ್ ಸೇರಿದಂತೆ ಬಿಜೆಪಿ ಸದಸ್ಯರು, ಮುಡಾದಲ್ಲಿ ಕೋಟ್ಯಾಂತರ ರೂ. ಹಗರಣ ನಡೆದಿದೆ, ಇದರಲ್ಲಿ ಮುಖ್ಯಮಂತ್ರಿ ಶಾಮೀಲಾಗಿದ್ದಾರೆ. ಈ ಬಗ್ಗೆ ವಿಸ್ತೃತ ಚರ್ಚೆ ನಡೆಸಲು ಪ್ರಶ್ನೋತ್ತರ ಅವಧಿ ಬದಿಗಿಟ್ಟು ನಿಲುವಳಿ ಸೂಚನೆಯಡಿ ಚರ್ಚೆಗೆ ಅವಕಾಶ ಮಾಡಿ ಕೊಡಬೇಕು ಎಂದು ಮನವಿ ಮಾಡಿದರು.

ಪ್ರಶ್ನೋತ್ತರ ಅವಧಿ ಮುಗಿಯುತ್ತಿದ್ದಂತೆ ನಿಮ್ಮ ನಿಲುವಳಿ ಸೂಚನೆ ಕುರಿತು ತೀರ್ಮಾನ ಕೈಗೊಳ್ಳುತ್ತೇನೆ. ಮೊದಲು ಪ್ರಶ್ನೋ ತ್ತರ ತೆಗೆದುಕೊಳ್ಳೋಣ ಎಂದರು. ಪ್ರಶ್ನೋತ್ತರ ಮತ್ತು ಶೂನ್ಯ ವೇಳೆ ಮುಗಿಯುತ್ತಿದ್ದಂತೆ ಪ್ರತಿಪಕ್ಷ ಸದಸ್ಯರು ಮುಡಾ ಹಗರಣ ಚರ್ಚೆಗೆ ಅವಕಾಶ ನೀಡುವಂತೆ ಸಭಾಧ್ಯಕ್ಷರಲ್ಲಿ ಮನವಿ ಮಾಡಿದರು.



ಬಿಜೆಪಿ ಸದಸ್ಯರು ಎರಡೂ ಸದನಗಳಲ್ಲಿ ಅಹೋರಾತ್ರಿ ಧರಣಿ ಆರಂಭಿಸಿದರು.

ಎಲ್ಲರ ಬಣ್ಣ ಬಯಲಾಗಲಿ: ಬಿಜೆಪಿಯ ಬಸನಗೌಡ ಪಾಟೀಲ್ ಯತ್ನಾಳ್ ಮಾತನಾಡಿ, ಮುಡಾ ಹಗರಣ ಇಡೀ ದೇಶದಲ್ಲಿ ಭಾರಿ ಸದ್ದು ಮಾಡುತ್ತಿದೆ. ಈ ಹಗರಣದಲ್ಲಿ ಬಿಜೆಪಿ, ಕಾಂಗ್ರೆಸ್, ಜೆಡಿಎಸ್‌ನ ಸದಸ್ಯರೂ, ಮುಖಂಡರೂ ಇದ್ದಾರೆ ಎಂಬ ಮಾಹಿತಿ ಇದೆ, ಎಲ್ಲರ ಬಣ್ಣ ಬಯಲಾಗಲಿ, ಚರ್ಚೆಗೆ ■6ನೇ ಪುಟಕ್ಕೆ



ಕೃಷ್ಣರಾಜ ಸಾಗರ ಜಲಾಶಯ ಭರ್ತಿ: ಗರಿಷ್ಟ 124.80 ಅಡಿಗೇರಿ ರಾರಾಜಿಸುತ್ತಿರುವ ಕಾವೇರಿ

- ಕೊಡಗಿನಲ್ಲಿ ಭಾರಿ ಮಳೆಯ ಕೊಡುಗೆ
- ಮಂಡ್ಯ ಜಿಲ್ಲೆಯ ರೈತರ ಮೊಗದಲ್ಲಿ ಮಂದಹಾಸ
- ಕುಡಿಯಲು, ಬೆಳೆಗೆ ನೀರಿನ ಸಮಸ್ಯೆ ಸದ್ಯಕ್ಕಿಲ್ಲ
- ನೆರೆಯ ತಮಿಳುನಾಡಿನ ನೀರಿನ ಕ್ಯಾತೆಗೂ ಸದ್ಯ ಬ್ರೇಕ್

ಮಂಡ್ಯ, ಜು.24(ಮೋಹನ್ ರಾಜ್)– ಪ್ರಸಿದ್ಧ ಕೃಷ್ಣರಾಜ ಸಾಗರ ಅಣೆಕಟ್ಟೆ ಭರ್ತಿಯಾಗಿದ್ದು, ಗರಿಷ್ಟ ಮಟ್ಟ 124.80 ಅಡಿಯನ್ನು ತಲುಪಿದೆ. ಈ ಮೂಲಕ ಮಂಡ್ಯ ಜಿಲ್ಲೆ ಹಾಗೂ ಕಾವೇರಿ ಕಣಿವೆಯ ಜನರಲ್ಲಿ ಮಂದಹಾಸ ಮೂಡಿದೆ.

ವರ್ಷಾರಂಭದಲ್ಲಿ ವ್ಯಾಪಕ ಬರ, ತಮಿಳುನಾಡಿನ ಕಿರಿಕಿರಿ, ಬೆಂಗಳೂರಿನಲ್ಲಿ ಕುಡಿಯುವ ನೀರಿಗೆ ಹಾಹಾಕಾರ ಎಲ್ಲಕ್ಕಿಂತ ಹೆಚ್ಚಾಗಿ ಕಾವೇರಿ ನೀರನ್ನೇ ನಂಬಿರುವ ಮಂಡ್ಯ ರೈತರು ಕಂಗಾಲಾಗಿದ್ದರು. ಈ ಎಲ್ಲಾ ಸಮಸ್ಯೆಗಳನ್ನು ಮಳೆರಾಯ ಒಂದೇ ಬಾರಿಗೆ ನೀಗಿಸಿದ್ದು, ಕಾವೇರಿ ಜಲಾನಯನ ಪ್ರದೇಶವಾದ ಕೊಡಗು ಭಾಗದಲ್ಲಿ ವ್ಯಾಪಕ ಮಳೆಯಿಂದ ಅಣೆಕಟ್ಟೆ ಜುಲೈ ಅಂತ್ಯದ ವೇಳೆಗೆ ಭರ್ತಿಯಾಗಿದೆ.

ನಿರಂತರ ಮಳೆ ಎಫೆಕ್ಟ್: ಮಂಡ್ಯ ಜಿಲ್ಲೆಯ ಕೆಆರ್‌ಎಸ್ ಅಣೆಕಟ್ಟೆ ಭರ್ತಿಯಾಗಬೇಕೆಂದರೆ ಕಾವೇರಿ ಉಗಮ ಸ್ಥಾನ ಕೊಡಗು ಜಿಲ್ಲೆಯಲ್ಲಿ ಮಳೆಯಾಗಬೇಕು. ಒಂದು ತಿಂಗಳು ಸತತವಾಗಿ ಸುರಿದ ಮಳೆಯಿಂದ ಕೆಆರ್‌ಎಸ್ ಜಲಾಶಯ ಇದೀಗ 124.80 ಅಡಿಗೆ ಬಂದು ನಿಂತಿದೆ. ಜಲಾಶಯ ತುಂಬಿ ತುಳುಕುತ್ತಿರುವುದು ಮಂಡ್ಯ ಜಿಲ್ಲೆ ಜನರಲ್ಲಿ ಮಂದಹಾಸ ಮೂಡಿಸಿದೆ.

ರಾಜ್ಯಕ್ಕೆ ನಿರಾಳ: ತಮಿಳುನಾಡಿಗೆ ಕರ್ನಾಟಕವು ಹರಿಸುತ್ತಿರುವ ಕಾವೇರಿ ನೀರಿನ ಪ್ರಮಾಣ ತೃಪ್ತಿಕರ ಎಂದು ಅಭಿಪ್ರಾಯಪಟ್ಟಿರುವ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ, ಹೊಸ ಆದೇಶ ನೀಡಲು ನಿರಾಕರಿಸಿದೆ. ಪ್ರಾಧಿಕಾರದ 32ನೇ ಸಭೆ ನವದೆಹಲಿಯಲ್ಲಿ ಬುಧವಾರ ನಡೆಯಿತು. ಸಭೆಯಲ್ಲಿ ಕರ್ನಾಟಕದ ಪ್ರತಿನಿಧಿಗಳು ವಾದ ಮಂಡಿಸಿ, ಜೂನ್‌ನಿಂದ ಜುಲೈ 22ರ ವರೆಗೆ ರಾಜ್ಯದ ನಾಲ್ಕು ಜಲಾಶಯಗಳಲ್ಲಿ ಸಂಚಿತ ಒಳಹರಿವು 118 ಟಿಎಂಸಿ ಇದೆ. ಆದರೆ, ಇದೇ ಅವಧಿಯಲ್ಲಿ 30 ವರ್ಷಗಳ ಸರಾಸರಿ (1989–90 ರಿಂದ 2018–19) ಒಳಹರಿವು ■6ನೇ ಪುಟಕ್ಕೆ

ಮುಡಾ ನಿವೇಶನ ಹಂಚಿಕೆ ಹಗರಣ

ನ್ಯಾಯಮೂರ್ತಿ ಪಿ.ಎನ್.ದೇಸಾಯಿ ವಿಚಾರಣಾ ಆಯೋಗದಿಂದ ಎಂಟು ಅಂಶಗಳ ಮಾಹಿತಿ ಕೋರಿಕೆ

ಆರು ತಿಂಗಳೊಳಗೆ ತನಿಖಾ ವರದಿ ಸಲ್ಲಿಕೆ



ಮೈಸೂರು, ಜು. 24(ಆರ್‌ಕೆ)– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದ ನಿವೇಶನ ಹಂಚಿಕೆ ಹಗರಣ ಸಂಬಂಧ ತನಿಖೆ ನಡೆಸಲು ರಚಿಸಿರುವ ಕರ್ನಾಟಕ ಉಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶರಾದ ನ್ಯಾಯಮೂರ್ತಿ ಪಿ.ಎನ್. ದೇಸಾಯಿ ನೇತೃತ್ವದ ಏಕಸದಸ್ಯ



ನ್ಯಾಯಮೂರ್ತಿ ಪಿ.ಎನ್.ದೇಸಾಯಿ ಏಕಸದಸ್ಯ ವಿಚಾರಣಾ ಆಯೋಗ

ವಿಚಾರಣಾ ಆಯೋಗವು ತನಿಖೆ ಆರಂಭಿಸಿದೆ. ಒಳಾಡಳಿತ ಇಲಾಖೆ (ಕಾನೂನು ಮತ್ತು ಸುವ್ಯವಸ್ಥೆ) ಅಧೀನ ಕಾರ್ಯದರ್ಶಿ ಎಸ್.ನಾಗರಾಜು ಜುಲೈ 23ರಂದು ಅಧಿಸೂಚನೆ ಹೊರಡಿಸಿದ್ದರು. ವಿಚಾರಣಾ ಆಯೋಗಕ್ಕೆ ವಹಿಸಬಹುದಾದ ಕಾರ್ಯ ವ್ಯಾಪ್ತಿ ಮತ್ತು ಷರತ್ತುಗಳನ್ನು ನಿಗದಿಪಡಿಸಿ ಆದೇಶಿಸಿದ್ದಾರೆ. ಅದರಂತೆ ವಿಚಾರಣೆಗೆ ಸಹಕಾರಿಯಾಗುವಂತೆ ಮುಡಾದಿಂದ 8 ಅಂಶಗಳ ಮಾಹಿತಿಯನ್ನು ನೀಡುವಂತೆಯೂ ಸೂಚನೆ ನೀಡಲಾಗಿದೆ.

■2006ರಿಂದ 2024, ಜುಲೈ 15ರ ಅವಧಿಯಲ್ಲಿ ಮುಡಾ ಎಷ್ಟು ಬಡಾವಣೆಗಳನ್ನು ರಚಿಸಿದೆ, ರಚಿಸಿದ ಬಡಾವಣೆಗಳಲ್ಲಿ ಭೂಸ್ವಾಧೀನ ಪ್ರಕ್ರಿಯೆಗೊಳಪಡಿಸದೇ ಭೂಸ್ವಾಧೀನ ಪ್ರಕ್ರಿಯೆಯಿಂದ ಕೈಬಿಟ್ಟಂತಹ ಎಷ್ಟು ಪ್ರಮಾಣದ ಜಮೀನನ್ನು ಬಡಾವಣೆ ರಚಿಸಲು ■6ನೇ ಪುಟಕ್ಕೆ

ದಿಢೀರ್ ರಾಜ್ಯಪಾಲರ ಭೇಟಿಯಾದ ಮುಖ್ಯಮಂತ್ರಿ ಸಿದ್ದರಾಮಯ್ಯ; ಕುತೂಹಲ ಮೂಡಿಸಿದ ಸಿಎಂ ನಡೆ



ಸಿಎಂ ಸಿದ್ದರಾಮಯ್ಯ ಬುಧವಾರ ಸಂಜೆ ರಾಜಭವನದಲ್ಲಿ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರನ್ನು ದಿಢೀರ್ ಭೇಟಿಯಾದರು.

ಬೆಂಗಳೂರು, ಜು.24– ಮಹತ್ವದ ಬೆಳವಣಿಗೆಯೊಂದರಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬುಧವಾರ ಸಂಜೆ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರನ್ನು ದಿಢೀರ್ ಭೇಟಿಯಾಗಿದ್ದು, ರಾಜ್ಯ ರಾಜಕಾರಣದಲ್ಲಿ ತೀವ್ರ ಕುತೂಹಲ ಮೂಡಿಸಿದೆ. ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣ ಮತ್ತು ಮುಡಾ ಅಕ್ರಮಗಳ ಬಗ್ಗೆ ತೀವ್ರ ಚರ್ಚೆ ನಡೆಯುತ್ತಿರುವ ಸಂದರ್ಭದಲ್ಲೇ ಸಿಎಂ ಸಿದ್ದರಾಮಯ್ಯ ಅವರು ರಾಜ್ಯಪಾಲರನ್ನು ಭೇಟಿ ಮಾಡಿರುವುದು ರಾಜಕೀಯ ವಲಯದಲ್ಲಿ ಸಂಚಲನ ಉಂಟು ಮಾಡಿದೆ.

ಇಂದು ಸಂಜೆ 6 ಗಂಟೆಗೆ ಸಿಎಂ ಸಿದ್ದರಾಮಯ್ಯ ಅವರು ರಾಜಭವನಕ್ಕೆ ತೆರಳಿ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರನ್ನು ಭೇಟಿಯಾಗಿ ಚರ್ಚೆ ನಡೆಸಿದ್ದಾರೆ. ಸುಮಾರು ಅರ್ಧಗಂಟೆ ಕಾಲ ರಾಜ್ಯಪಾಲರೊಂದಿಗೆ ಚರ್ಚೆ ನಡೆಸಿದ ಬಳಿಕ ಸಿದ್ದರಾಮಯ್ಯ ಅವರು ಅಲ್ಲಿಂದ ನಿರ್ಗಮಿಸಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ■6ನೇ ಪುಟಕ್ಕೆ



ಮೈಸೂರು ಹೊರ ವಲಯದಲ್ಲಿ ನಕಲಿ 'ಹನ್ಸ್' ತಯಾರಿಕಾ ಘಟಕ ಪತ್ತೆ

ಸಿಸಿಬಿ ಎಸಿಪಿ ಸಂದೇಶ್ ಕುಮಾರ್ ನೇತೃತ್ವದ ತಂಡದ ಚಾಣಾಕ್ಷ ಕಾರ್ಯಾಚರಣೆ



ಯಂತ್ರದಲ್ಲಿ ಪ್ಯಾಕ್ ಆಗಿ ಹೊರಬರುತ್ತಿರುವ ಹನ್ಸ್ ಪ್ಯಾಕೆಟ್‌ಗಳು



ನಕಲಿ ಹನ್ಸ್ ತಯಾರಿಕಾ ಘಟಕವನ್ನು ಪರಿಶೀಲಿಸುತ್ತಿರುವ ಸಿಸಿಬಿ ಎಸಿಪಿ ಸಂದೇಶ್‌ಕುಮಾರ್ (ಮಧ್ಯ ಇರುವವರು) ಹಾಗೂ ಇತರರು

ಮೈಸೂರು, ಜು.24(ಆರ್‌ಕೆ)–ಸಿಸಿಬಿ ಪೊಲೀಸರ ಟಾರ್ಗೆಟ್ ಸಾರ್ವಜನಿಕ ಸ್ಥಳದಲ್ಲಿ ಧೂಮಪಾನ ಮಾಡುವವರು. ಅವರನ್ನು ಹಿಡಿದು ವಿಚಾರಣೆ ವೇಳೆ ಬಯಲಾಗಿದ್ದು, ಆಘಾತಕಾರಿ ಮಾತ್ರವಲ್ಲ ವಿಷಕಾರಿ ನಕಲಿ ಹನ್ಸ್ ತಯಾರಿಕಾ ಘಟಕದ ಕಾರ್ಯಾಚರಣೆ.

ಸಿಸಿಬಿ ಎಸಿಪಿ ಸಂದೇಶ್ ಕುಮಾರ್ ನಿರ್ದೇಶನದಲ್ಲಿ ಪೊಲೀಸರು ಸಾರ್ವಜನಿಕ ಸ್ಥಳದಲ್ಲಿ ಧೂಮಪಾನ ಮಾಡುವವರನ್ನು ಹಿಡಿದು ಕೇಸ್ ಹಾಕಲು ಹೊರಟಿದ್ದರು. ಸಾಮಾನ್ಯವಾಗಿ ಟೀ ಅಂಗಡಿಗಳ ಮುಂದೆ ಧೂಮಪಾನ ಮಾಡುವವರೇ ಹೆಚ್ಚು. ಪೊಲೀಸರು ಅಂತಹ ಅಂಗಡಿಗಳನ್ನು ಗುರಿಯಾಗಿಟ್ಟುಕೊಂಡು ದಾಳಿ ನಡೆಸುತ್ತಾರೆ.

ಅದೇ ರೀತಿ ಮೈಸೂರಿನ ನಜರ್‌ಬಾದ್‌ನ ಟೀ ಅಂಗಡಿಯೊಂದಕ್ಕೆ ಸಿಸಿಬಿ ಪೊಲೀಸರು ದಾಳಿ ನಡೆಸಿ ಧೂಮಪಾನ ಮಾಡುತ್ತಿದ್ದವರನ್ನು ಹಿಡಿದು ಕೇಸ್ ಹಾಕಿದರು. ಆದರೆ, ಎಸಿಪಿ ಸಂದೇಶ್ ಕುಮಾರ್ ಅವರಿಂದ ತರಬೇತಿ ಹೊಂದಿರುವ ಪೊಲೀಸರು ತಮ್ಮದೆ ಹೊಸ ಆಯಾಮದಲ್ಲಿ ಅವರಿಗೆ ಕ್ಲಾಸ್ ತೆಗೆದುಕೊಂಡು, ಆ ಅಂಗಡಿಯಲ್ಲಿ ನೇತಾಡುತ್ತಿದ್ದ ಹನ್ಸ್ ಪ್ಯಾಕ್‌ಗಳ ಮೇಲೆ ಸೂಕ್ಷ್ಮವಾಗಿ ಕಣ್ಣಾಡಿಸಿದ್ದಾರೆ. ಅನುಮಾನಗೊಂಡು ಆ ಪ್ಯಾಕ್‌ಗಳನ್ನು ಕೈಗೆ ತೆಗೆದುಕೊಂಡು ನೋಡಿದಾಗ ಅವು ನಕಲಿ ಎಂಬುದು ಕಂಡು ಬಂದಿದೆ. ಅಂಗಡಿಯವನನ್ನು ವಿಚಾರಿಸಿದರೆ, ಆತ ತಮ್ಮ ಅಂಗಡಿಗೆ ಪ್ರತೀ ದಿನ ವ್ಯಕ್ತಿಯೋರ್ವ ಹನ್ಸ್ ಸರಬರಾಜು ಮಾಡುತ್ತಾನೆ ಎಂದು ಮಾಹಿತಿ ನೀಡಿದ್ದಾನೆ. ವಿಶೇಷವೆಂದರೆ ಅದು ನಕಲಿ ಹನ್ಸ್ ಎಂಬುದು ಅಂಗಡಿಯವನಿಗೂ ತಿಳಿದಿಲ್ಲ. ಆತನಿಂದ ಹನ್ಸ್ ಸರಬರಾಜು ಮಾಡುವವನ ಮೊಬೈಲ್ ನಂಬರ್ ಪಡೆದು ಸಿಸಿಬಿ ಕಚೇರಿಗೆ ಹಿಂತಿರುಗಿದ ಸಿಬ್ಬಂದಿ ನಕಲಿ ಹನ್ಸ್ ಮಾರಾಟದ ಬಗ್ಗೆ ಎಸಿಪಿ ಸಂದೇಶ್ ಕುಮಾರ್ ಅವರಿಗೆ ತಿಳಿಸಿದ್ದಾರೆ. ಹನ್ಸ್ ಸೇವನೆಯೇ ಆರೋಗ್ಯಕ್ಕೆ ಹಾನಿಕರ. ಅದರಲ್ಲೂ ನಕಲಿ ಹನ್ಸ್ ಸೇವಿಸಿದವರ ಆರೋಗ್ಯ ಏನಾಗಬೇಕು ಎಂದು ಚಿಂತಿಸಿದವರೇ ತಕ್ಷಣವೇ ಇನ್ಸ್‌ಪೆಕ್ಟರ್ ಪೂವಯ್ಯ ಒಳಗೊಂಡಂತೆ ತಂಡವೊಂದನ್ನು ರಚಿಸಿಕೊಂಡು ಅಂಗಡಿಗಳಿಗೆ ಹನ್ಸ್ ಸರಬರಾಜು ಮಾಡುತ್ತಿದ್ದ ವ್ಯಕ್ತಿಯ ಮೊಬೈಲ್‌ಗೆ ಕರೆ ಮಾಡಿ, ತಮಗೆ ಸಗಟಾಗಿ ಹನ್ಸ್ ಬೇಕಾಗಿದೆ ಎಂದು ಆರ್ಡರ್ ಮಾಡಿದ್ದಾರೆ ■6ನೇ ಪುಟಕ್ಕೆ





ಪತ್ರಕರ್ತರಿಂದ ವಾರ್ಷಿಕ ಪ್ರಶಸ್ತಿಗೆ ಅರ್ಜಿ ಆಹ್ವಾನ

ಮೈಸೂರು,ಜು.24–ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ವತಿಯಿಂದ 2023–24ನೇ ಸಾಲಿನ ಕನ್ನಡ ಮತ್ತು ಇಂಗ್ಲಿಷ್ ವರದಿ ವಾರ್ಷಿಕ ಪ್ರಶಸ್ತಿಗೆ ಅರ್ಜಿ ಆಹ್ವಾನಿಸಲಾಗಿದೆ. ಓರ್ವ ಪತ್ರಕರ್ತ ಒಂದೇ ವರದಿಯನ್ನು ಸಲ್ಲಿಸಬೇಕು. ಆಸಕ್ತರು ಮೂರು ನಕಲಿ ಪ್ರತಿಯ ಜೊತೆಗೆ ಒಂದು ಮೂಲಪ್ರತಿ ನೀಡಬೇಕು. ಅಂತೆಯೇ ವಿದ್ಯುನ್ಮಾನ ಹಾಗೂ ಪತ್ರಿಕಾ ಛಾಯಾ ಗ್ರಾಹಕರಿಂದ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತರು 2023ರ ಜೂ.1ರಿಂದ 2024ರ ಜೂ.30ರ ಅವಧಿಯಲ್ಲಿ ಪ್ರಕಟವಾದ 8x12 ಅಳತೆಯ ಮೂರು ಛಾಯಾಚಿತ್ರ ಮತ್ತು ಫೋಟೋ ಪ್ರಕಟಗೊಂಡ ಪತ್ರಿಕೆಯ ಮೂಲ ಪ್ರತಿಯನ್ನು ಸಲ್ಲಿಸಬೇಕು. ವಿದ್ಯುನ್ಮಾನ ವರದಿ ನೀಡುವವರು ಸುದ್ದಿ ಮತ್ತು ದೃಶ್ಯದ ಕ್ಲಿಪ್ಪಿಂಗ್ ಒಳಗೊಂಡ ಮೂರು ಸಿಡಿ ಪ್ರತಿ ನೀಡಬೇಕು. ಜು.31ರೊಳಗೆ ನಿಮ್ಮ ವರದಿಯನ್ನು ಪ್ರಧಾನ ಕಾರ್ಯದರ್ಶಿ ಹೆಸರಿಸಿ ಸಂಘದ ವಿಳಾಸಕ್ಕೆ ಕಳುಹಿಸಬೇಕು. ಆನಂತರ ಬರುವ ಯಾವುದೇ ವರದಿಗಳನ್ನು ಸ್ವೀಕರಿಸುವುದಿಲ್ಲ. ವಿವರಗಳಿಗೆ ವ್ಯವಸ್ಥಾಪಕ ಕೆ.ನಾಗೇಶ್, ಮೊ.97405 57277 ಸಂಪರ್ಕಿಸಬಹುದು.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ: ಮೈಸೂರು ಜಿಲ್ಲಾ ಪತ್ರಕರ್ತರ ಸಂಘವು 2023–2024ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ಪರೀಕ್ಷೆಯಲ್ಲಿ ತೇರ್ಗಡೆಯಾದ ಪತ್ರಕರ್ತರ ಮಕ್ಕಳನ್ನು ಪುರಸ್ಕರಿಸಲು ಉದ್ದೇಶಿಸಿ, ಅರ್ಜಿ ಆಹ್ವಾನಿಸಿದೆ. ಅರ್ಜಿ ಸಲ್ಲಿಸುವವರು ಪತ್ರಕರ್ತರ ಸಂಘದ ಸದಸ್ಯತ್ವ ಹೊಂದಿರುವವರ ಮಕ್ಕಳಾಗಿರಬೇಕು, ಆಧಾರ್ ಕಾರ್ಡ್ ನಕಲು ಪ್ರತಿ, ಕೆಯುಡಬ್ಲ್ಯುಜೆ ಗುರುತಿನ ಚೀಟಿಯ ನಕಲು ಇತ್ತೀಚಿನ 2 ಭಾವಚಿತ್ರ, ತೇರ್ಗಡೆಯಾದ ಪರೀಕ್ಷೆಯ ಅಂಕಪಟ್ಟಿಯ ನಕಲು, ಪ್ರತಿ ನೀಡಬೇಕು. ಕೈಬರಹದಲ್ಲಿ ಬರೆದ ಅರ್ಜಿಯೊಂದಿಗೆ ಅರ್ಜಿ ಸಲ್ಲಿಸಲು ಜು.27 ಕೊನೆಯ ದಿನ. ನಿಗದಿತ ದಿನಾಂಕದೊಳಗೆ ಅರ್ಜಿ ಸಲ್ಲಿಸಬೇಕು. ಮಾಹಿತಿಗೆ ಸಂಘದ ಅಧ್ಯಕ್ಷ ಕೆ.ದೀಪಕ್ ಮೊ.97415 11340, ಪ್ರಧಾನ ಕಾರ್ಯದರ್ಶಿ ಧರ್ಮಾಪುರ ನಾರಾಯಣ್ ಮೊ. 98456 53548 ಸಂಪರ್ಕಿಸಬಹುದು.

ಆ.7ರಂದು ಸಾಮೂಹಿಕ ವಿವಾಹ

ಸುತ್ತೂರು,ಜು.24–ನಂಜನಗೂಡು ತಾಲೂಕಿನ ಶ್ರೀ ಸುತ್ತೂರು ಕ್ಷೇತ್ರದಲ್ಲಿ ಆ.7ರಂದು ಮಾಸಿಕ ಸಾಮೂಹಿಕ ವಿವಾಹ ಏರ್ಪಡಿಸಲಾಗಿದೆ. ವಿವಾಹದಲ್ಲಿ ಭಾಗವಹಿಸುವ ವರನಿಗೆ 21 ವರ್ಷ, ವಧುವಿಗೆ 18 ವರ್ಷ ಪೂರ್ಣಗೊಂಡಿರಬೇಕು. ಅರ್ಜಿ ನಮೂನೆಯಲ್ಲಿ ವರ–ವಧುವಿನ ಭಾವಚಿತ್ರಗಳನ್ನು ಲಗತ್ತಿಸಿರಬೇಕು. ಜಾತಿ ದೃಢೀಕರಣ ಪತ್ರ ವಧುವರರ ವಯಸ್ಸಿನ ಬಗ್ಗೆ ಶಾಲೆಯಿಂದ ಪಡೆದ ದಾಖಲಾತಿ ಪತ್ರ ಪಡೆದ ದೃಢೀಕರಣ ಪತ್ರ ಲಗತ್ತಿಸಿರಬೇಕು. ಬಾಲ್ಯವಿವಾಹಕ್ಕೆ ಅವಕಾಶವಿರುವುದಿಲ್ಲ. ಆಸಕ್ತರು 8 ದಿನಗಳ ಮುಂಚಿತವಾಗಿ ಆಡಳಿತಾಧಿಕಾರಿಗಳು, ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳು, ಸುತ್ತೂರು ಇವರನ್ನು ಅಥವಾ ದೂರವಾಣಿ: 08221–232217, 232033, 9741 342222, ಸಂಪರ್ಕಿಸಿ ಮಾಹಿತಿ ಪಡೆದು ನೋಂದಣಿ ಮಾಡಿಕೊಳ್ಳಬಹುದು.

ಸರಸ್ವತಮ್ಮ ಅವರ ಪುಣ್ಯಸ್ಮರಣೆ



ಮೈಸೂರು ಒಂಟಿಕೊಪ್ಪಲಿನ ಶ್ರೀರಾಮಮಂದಿರ ಕಲ್ಯಾಣ ಮಂಟಪದಲ್ಲಿ ಬಿಜೆಪಿ ಹಿರಿಯ ಮುಖಂಡ ಹಾಗೂ ಕಾವೇರಿ ಕ್ರಿಯಾ ಸಮಿತಿ ಅಧ್ಯಕ್ಷ ಎಸ್.ಜಯಪ್ರಕಾಶ್ (ಜೆ.ಪಿ) ಅವರ ಮಾತೃಶ್ರೀ ಶ್ರೀಮತಿ ಸರಸ್ವತಮ್ಮ ಅವರ 3ನೇ ವರ್ಷದ ಪುಣ್ಯಸ್ಮರಣೆ ಏರ್ಪಡಿಸಲಾಗಿತ್ತು. ಈ ವೇಳೆ ಎಸ್.ಚೇತನ್, ರಮೇಶ್, ಮಹೇಶ್‌ಕುಮಾರ್, ನಾಗರಾಜು, ಸತೀಶ್, ಎನ್.ನಾಗರಾಜು ಮತ್ತಿತರರು ಉಪಸ್ಥಿತರಿದ್ದರು.

ಪೌರಕಾರ್ಮಿಕರಿಗೆ ಆರೋಗ್ಯ ತಪಾಸಣೆ



ಜೆಎಸ್‌ಎಸ್ ಮೆಡಿಕಲ್ ಕಾಲೇಜು ವತಿಯಿಂದ ಮೇಟಗಳ್ಳಿಯಲ್ಲಿ ಆರೋಗ್ಯ ತಪಾಸಣಾ ಶಿಬಿರವನ್ನು ಸೋಮವಾರ ಹಮ್ಮಿಕೊಳ್ಳಲಾಗಿತ್ತು.

ಮೈಸೂರು,ಜು.24–ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿಯ ಅಂಗ ಸಂಸ್ಥೆಯಾದ ಜೆಎಸ್‌ಎಸ್ ಮೆಡಿಕಲ್ ಕಾಲೇಜು ವತಿಯಿಂದ ಮೇಟಗಳ್ಳಿಯಲ್ಲಿ ಆರೋಗ್ಯ ತಪಾಸಣಾ ಶಿಬಿರವನ್ನು ಸಾರ್ವಜನಿಕರಿಗೆ ಹಾಗೂ ವಿಶೇಷವಾಗಿ ಪೌರ ಕಾರ್ಮಿಕರಿಗಾಗಿ ಹಮ್ಮಿಕೊಳ್ಳಲಾಗಿತ್ತು.

ಸಂಸ್ಥೆಯ ಶರೀರಶಾಸ್ತ್ರ ವಿಭಾಗದಿಂದ ನಡೆದ ಈ ಶಿಬಿರದಲ್ಲಿ 55ಕ್ಕೂ ಅಧಿಕ ಪೌರ ಕಾರ್ಮಿಕರ ರಕ್ತದೊತ್ತಡ, ಸಕ್ಕರೆ ಮಟ್ಟ, ಮತ್ತಿತರ ಆರೋಗ್ಯ ತಪಾಸಣೆಯನ್ನು ವಿಭಾಗದ ಮುಖ್ಯಸ್ಥೆ ಡಾ.ರಾಜೇಶ್ವರಿ ನಡೆಸಿದರು. ಈ ವೇಳೆ ಮಾತನಾಡಿದ ಅವರು, ಜನಾರೋಗ್ಯ ನಿರ್ವಹಣೆ, ಪೌಷ್ಟಿಕತೆ ಹಾಗೂ ಆರೋಗ್ಯ ರಕ್ಷಣೆ ಬಗ್ಗೆ ವಿವರಿಸಿ, ಪೌರ ಕಾರ್ಮಿಕರು ಆರೋಗ್ಯ ಕಾಪಾಡಿಕೊಳ್ಳಬೇಕು. ಅವರ ಆರೋಗ್ಯವೇ ಸಮುದಾಯದ ಆರೋಗ್ಯ ಎಂದು ಹೇಳಿ ಆರೋಗ್ಯ ರಕ್ಷಣೆಯಲ್ಲಿ ತೆಗೆದುಕೊಳ್ಳಬೇಕಾದ ಮುಂಜಾಗ್ರತಾ ಕ್ರಮಗಳನ್ನು ತಿಳಿಸಿದರು. ಶಿಬಿರದಲ್ಲಿ ಜೆಎಸ್‌ಎಸ್ ಫಾರ್ಮಸಿ ಕಾಲೇಜಿನ ಪ್ರಾಂಶುಪಾಲರಾದ ಡಾ.ಪ್ರಮೋದ್‌ಕುಮಾರ್, ವೈದ್ಯರಾದ ಡಾ.ವಿವೇಕ್, ಡಾ.ಪ್ರೀತಿ, ಡಾ.ಶ್ವೇತಾ ರೈ ಮತ್ತು ಡಾ.ಸಾಕ್ಷಿ ಹಾಜರಿದ್ದರು.

ಕಲಾವಿದರಿಗೆ ಸನ್ಮಾನ



ಮೈಸೂರಿನ ಶಾರದಾ ವಿಲಾಸ ಶತಮಾನೋತ್ಸವ ಭವನದಲ್ಲಿ ಅನೇಕಲ್ ರೇಣುಕಾರಾಧ್ಯ ಕಲಾವಿದರ ಬಳಗ ಏರ್ಪಡಿಸಿದ್ದ ಗುರುವಂದನಾ ಮಹೋತ್ಸವ ಮತ್ತು ರಂಗಗೀತೆಗಳ ಗಾಯನ ಕಾರ್ಯಕ್ರಮದಲ್ಲಿ ಕಲಾವಿದ ಹುಯಿಲಾಳು ರಾಮಸ್ವಾಮಿ ಮತ್ತಿತರರನ್ನು ಸನ್ಮಾನಿಸಲಾಯಿತು. ಈ ವೇಳೆ ಬಳಗದ ಅಧ್ಯಕ್ಷ ರೇಣುಕಾರಾಧ್ಯ, ಕುಪೇಂದ್ರಗೌಡ, ವಿಜಯಕುಮಾರ್, ಲೋಹಿತ್, ಕೆಬ್ಬೇಹುಂಡಿ ಶಿವಕುಮಾರ್, ಮೊಗಣ್ಣೇಗೌಡ, ತಮ್ಮಯ್ಯಣ್ಣ, ಜಟ್ಟಿಹುಂಡಿ ಸುನೀಲ್ ಇನ್ನಿತರರು ಉಪಸ್ಥಿತರಿದ್ದರು.

ಜು.28, 'ಸ್ವರಾಲಯ ಸಾಂಸ್ಕೃತಿಕ ಹಬ್ಬ'

ಮೈಸೂರು, ಜು.24– ಮೈಸೂರಿನ ರಾಮಕೃಷ್ಣನಗರದಲ್ಲಿರುವ 'ಸ್ವರಾಲಯ ಸಂಗೀತ ಸಂಸ್ಥೆ' ಬೆಂಗಳೂರಿನ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಸಹಯೋಗದೊಂದಿಗೆ ಜು.28ರಂದು ಭಾನುವಾರ ಸಂಜೆ 4 ಗಂಟೆಗೆ ಗಾನಭಾರತಿ (ವೀಣೆ ಶೇಷಣ್ಣ ಭವನ) ಸಭಾಂಗಣದಲ್ಲಿ 'ಸ್ವರಾಲಯ ಸಾಂಸ್ಕೃತಿಕ ಹಬ್ಬ' 2024 ಭಾಗ–3 ಅನ್ನು ಆಯೋಜಿಸಲಾಗಿದೆ.

ಕಾರ್ಯಕ್ರಮದ ಉದ್ಘಾಟನೆಯನ್ನು ಮೈಸೂರು ದೂರದರ್ಶನ ಹಾಗೂ ಆಕಾಶವಾಣಿಯ ಹಿರಿಯ ಶ್ರೇಣಿ ಕಲಾವಿದರಾದ ವಿದ್ವಾನ್ ವಿಶ್ವನಾಥ್ ನೆರವೇರಿಸಲಿದ್ದು, ಮುಖ್ಯ ಅತಿಥಿಯಾಗಿ ಮೈಸೂರಿನ ಸಂಗೀತ ಶಿಕ್ಷಕಿ ವಿದುಷಿ ಕ್ಷಮ ಕಟ್ವಾರ್ ಭಾಗವಹಿಸಲಿದ್ದಾರೆ.

ಅಧ್ಯಕ್ಷತೆಯನ್ನು 'ಸ್ವರಾಲಯ ಸಂಗೀತ ಸಂಸ್ಥೆ' ಸಂಸ್ಥಾಪಕ ಅಧ್ಯಕ್ಷೆ ಹಾಗೂ ಸಂಗೀತ ಶಿಕ್ಷಕಿ ವಿದುಷಿ ಡಾ.ಸುಮಾ ಹರಿನಾಥ್ ವಹಿಸಲಿದ್ದಾರೆ. ವೇದಿಕೆ ಕಾರ್ಯಕ್ರಮದ ನಂತರ ನಡೆಯುವ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಸಂಗೀತ ಶಿಕ್ಷಕಿ ಭಾನುನಿಶ್ಚಲ್ ಅವರಿಂದ ದಾಸರ ಪದಗಳ ಗಾಯನ, ನಂತರ ವಿದುಷಿ ಕಲ್ಪನಾ ಆನಂದ್ ಮತ್ತು ವೃಂದದವರು ಸಂಪ್ರದಾಯಕ ಹಾಡುಗಳನ್ನು ಪ್ರಸ್ತುತಪಡಿಸಲಿದ್ದಾರೆ. ವಾದ್ಯ ಸಹಕಾರದಲ್ಲಿ ವಯೋಲಿನ್‌ನಲ್ಲಿ ವಿದ್ವಾನ್ ಎಂ.ಆರ್.ಶ್ರೀಕಾಂತ್ ಹಾಗೂ ಮೃದಂಗದಲ್ಲಿ ವಿದ್ವಾನ್ ಎಂ.ಆರ್.ಉದಯ ಕುಮಾರ್ ಸಹಕಾರ ನೀಡಲಿದ್ದಾರೆ.

ಕೇಂದ್ರದ ವಿರುದ್ಧ ಖಾಲಿ ಚೊಂಬು ಹಿಡಿದು ಮಹಿಳಾ ಕಾಂಗ್ರೆಸ್ ಪ್ರತಿಭಟನೆ



ಕೇಂದ್ರ ಬಜೆಟ್‌ನಲ್ಲಿ ರಾಜ್ಯಕ್ಕೆ ಖಾಲಿ ಚೊಂಬು ನೀಡಲಾಗಿದೆ ಎಂದು ಆರೋಪಿಸಿ ಮೈಸೂರಿನ ಕಾಂಗ್ರೆಸ್ ಕಚೇರಿ ಆವರಣದಲ್ಲಿ ಮಹಿಳಾ ಕಾಂಗ್ರೆಸ್ ಕಾರ್ಯಕರ್ತರು ಖಾಲಿ ಚೊಂಬು, ಪಾತ್ರೆ ಪ್ರದರ್ಶಿಸಿ ಪ್ರತಿಭಟನೆ ನಡೆಸಿದರು.

ಮೈಸೂರು,ಜು.24(ಎಂಟಿವೈ)–ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್ ಮಂಡಿಸಿರುವ ಬಜೆಟ್‌ನಲ್ಲಿ ರಾಜ್ಯವನ್ನು ನಿರ್ಲಕ್ಷಿಸಿದ್ದಾರೆ ಎಂದು ಆರೋಪಿಸಿ ಮಹಿಳಾ ಕಾಂಗ್ರೆಸ್ ಕಾರ್ಯಕರ್ತರು ಖಾಲಿ ಚೊಂಬು, ಪಾತ್ರೆ ಪ್ರದರ್ಶಿಸಿ, ಪ್ರತಿಭಟನೆ ಮಾಡಿದರು.

ಮೈಸೂರಿನ ಕಾಂಗ್ರೆಸ್ ಕಚೇರಿ ಬಳಿ ಬುಧವಾರ ಪ್ರತಿಭಟನೆ ನಡೆಸಿದ ಮಹಿಳಾ ಕಾಂಗ್ರೆಸ್ ಕಾರ್ಯಕರ್ತರು, ಕೇಂದ್ರ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿದೆ ಎಂಬ ಕಾರಣಕ್ಕೆ ಕೇಂದ್ರದ ಬಿಜೆಪಿ ಸರ್ಕಾರ ಮಲತಾಯಿ ಧೋರಣೆ ತಾಳುತ್ತಾ ಬಂದಿದೆ. ಈ ಹಿಂದೆ ತೆರಿಗೆ ಪಾಲು ನೀಡುವುದರಲ್ಲೂ ರಾಜ್ಯಕ್ಕೆ ಅನ್ಯಾಯ ಮಾಡಿದ್ದ ಕೇಂದ್ರ ಸರ್ಕಾರ ಈಗ ಬಜೆಟ್‌ನಲ್ಲೂ ಕರ್ನಾಟಕವನ್ನು ಕಡೆಗಣಿಸಿದೆ ಎಂದು ಆರೋಪಿಸಿದರು.

ಈ ವೇಳೆ ಕೆಪಿಸಿಸಿ ಮಹಿಳಾ ಘಟಕದ ಅಧ್ಯಕ್ಷೆ ಡಾ.ಪುಷ್ಪ ಅಮರನಾಥ್ ಮಾತನಾಡಿ, ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್ ಮಂಡಿಸಿರುವ ಬಜೆಟ್‌ನಲ್ಲಿ ಕನ್ನಡಿಗರಿಗೆ ಮೋಸವಾಗಿದೆ. ಬಜೆಟ್‌ನಲ್ಲಿ ಕರ್ನಾಟಕಕ್ಕೆ ಒಂದೇ ಒಂದು ಯೋಜನೆಗೂ ಅನುದಾನ ನೀಡಿಲ್ಲ ರಾಜ್ಯದಲ್ಲಿ ಬಿಜೆಪಿ ಮತ್ತು ಜೆಡಿಎಸ್‌ನಿಂದ 19 ಸಂಸದರಿದ್ದರೂ, ರಾಜ್ಯಕ್ಕೆ ನ್ಯಾಯ ಒದಗಿಸುವಲ್ಲಿ ಪ್ರಯತ್ನಿಸಲಿಲ್ಲ. ಕರ್ನಾಟಕಕ್ಕೆ ಮೋಸ ಆಗಿದ್ದರೂ ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಸುಮ್ಮನಿರುವುದು ಖಂಡನೀಯ. ಈ ಬಜೆಟ್ ಕರ್ನಾಟಕಕ್ಕೆ ಖಾಲಿ ಚೊಂಬು ಕೊಟ್ಟಿದೆ. ನೀರು, ಭಾಷೆ, ಅಭಿವೃದ್ಧಿ ವಿಚಾರ ಯೋಜನೆಗೆ ಅನುದಾನ ನೀಡಿಲ್ಲ ಎಂದು ಆರೋಪಿಸಿದರು.

ಅವರ ಮಿತ್ರ ಪಕ್ಷಗಳು ಆಡಳಿತ ನಡೆಸುತ್ತಿರುವ ರಾಜ್ಯಗಳಿಗೆ ಮಾತ್ರ ಕೇಂದ್ರ ಬಿಜೆಪಿ ಸರ್ಕಾರ ಅನುದಾನ ನೀಡಿದೆ. ಕರ್ನಾಟಕದಿಂದ ಹೆಚ್ಚು ತೆರಿಗೆ ಕಟ್ಟುತ್ತೇವೆ. ಕೇಂದ್ರ ಸರ್ಕಾರದ ಮಲತಾಯಿ ಧೋರಣೆ, ನಿರ್ಲಕ್ಷ್ಯ ಧೋರಣೆ ಖಂಡಿಸಿ ಕಾಂಗ್ರೆಸ್ ಸಂಸದರು ಸಂಸತ್ತಿನಲ್ಲಿ ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿ ನೇತೃತ್ವದಲ್ಲಿ ಪ್ರತಿಭಟನೆ ಹಮ್ಮಿಕೊಂಡಿದ್ದಾರೆ. ಕೇಂದ್ರ ಮಂತ್ರಿಯಾಗಿರುವ ಹೆಚ್.ಡಿ.ಕುಮಾರಸ್ವಾಮಿ ಏನೂ ಮಾತನಾಡುತ್ತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಪ್ರತಿಭಟನೆಯಲ್ಲಿ ಕೆಪಿಸಿಸಿ ಮಹಿಳಾ ಘಟಕದ ಉಪಾಧ್ಯಕ್ಷೆ ಪುಷ್ಪವಲ್ಲಿ, ನಗರ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಪುಷ್ಪಲತಾ ಟಿ.ಬಿ.ಚಿಕ್ಕಣ್ಣ, ಗ್ರಾಮಾಂತರ ಅಧ್ಯಕ್ಷೆ ಲತಾ ಸಿದ್ದಶೆಟ್ಟಿ, ಮಾಜಿ ಮೇಯರ್‌ಗಳಾದ ಮೋದಾಮಣಿ, ಎಂ.ಸಿ.ರಾಜೇಶ್ವರಿ ಪುಟ್ಟಸ್ವಾಮಿ, ಪುಷ್ಪಲತಾ ಜಗನ್ನಾಥ್, ಮುಖಂಡರಾದ ನಾಗರತ್ನ, ಮಂಜುಳಾ, ಸುಶೀಲಾ ನಂಜಪ್ಪ, ಭವ್ಯ, ಇಂದ್ರ, ರಾಧಾಮಣಿ ಇನ್ನಿತರರು ಪಾಲ್ಗೊಂಡಿದ್ದರು.


ಆ.3ರಿಂದ ಮೈಸೂರಲ್ಲಿ ಸ್ಫೂರ್ತಿ ಉತ್ಸವ

ಮೈಸೂರು, ಜು.24(ಜಿಎ)–ಬಿಲ್ಡರ್ ಅಸೋಸಿಯೇಷನ್ ಆಫ್ ಇಂಡಿಯಾದ ಮೈಸೂರು ಶಾಖೆಯ ಸ್ಫೂರ್ತಿ ಮಹಿಳಾ ಘಟಕದ ವತಿಯಿಂದ ಆಗಸ್ಟ್ 3 ಮತ್ತು 4ರಂದು ಕುವೆಂಪುನಗರ ಜಯಮ್ಮ ಗೋವಿಂದೇಗೌಡ ಸಮುದಾಯ ಭವನದಲ್ಲಿ ಸ್ಫೂರ್ತಿ ಉತ್ಸವ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಸ್ಫೂರ್ತಿ ಘಟಕದ ಅಧ್ಯಕ್ಷೆ ರಮಾದೇವಿ ಶ್ರೀಕಾಂತ್ ಈ ವಿಷಯ ತಿಳಿಸಿ, ಉತ್ಸವಕ್ಕೆ ಆ.3ರಂದು ಬೆಳಗ್ಗೆ 9.30ಕ್ಕೆ ಸುನಿತಾ ಚಂದ್ರಕುಮಾರ್, ಎಸ್.ಎಸ್. ಯೋಗಾನರಸಿಂಹ ಚಾಲನೆ ನೀಡಲಿದ್ದಾರೆ. ಉತ್ಸವದಲ್ಲಿ ಸೀರೆ, ಸಲ್ವಾರ್, ಕುರ್ತಾ, ಆಭರಣ, ಗೃಹಾಲಂಕಾರ, ಅಡುಗೆ ಮನೆ ವಸ್ತುಗಳು, ಉಡುಗೊರೆ ವಸ್ತುಗಳು, ಪಾಟರಿ, ಕರಕುಶಲ ವಸ್ತು, ಆಹಾರ ಉತ್ಪನ್ನ, ಜೊತೆಗೆ, ಬಾಯಲ್ಲಿ ನೀರೂರಿಸುವ ಆಹಾರಗಳ ಮಳಿಗೆ ಇರಲಿವೆ. ಎಲ್ಲರಿಗೂ ಉಚಿತ ಪ್ರವೇಶವಿದ್ದು ಉತ್ಸವವು ಎರಡೂ ದಿನ ಬೆಳಗ್ಗೆ 10ರಿಂದ ರಾತ್ರಿ 8.30ರವರೆಗೆ ತೆರೆದಿರಲಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಜಾಹ್ನವಿ ದಿನೇಶ್, ಕವಿತಾ ಗುರುರಾಜ್, ವೀಣಾ ಅಶೋಕ್, ಲಲಿತಾ ಶ್ರೀನಾಥ್ ಉಪಸ್ಥಿತರಿದ್ದರು.

ನಾಳೆ ಹಿರಿಯ ವಕೀಲ ಎ.ಎಸ್.ನಟರಾಜ್ ಸುವರ್ಣ ಸಂಭ್ರಮ, ಗುರುವಂದನೆ

ಮೈಸೂರು, ಜು.24(ಎಂಕೆ)–ಮೈಸೂರಿನ ದಟ್ಟಗಳ್ಳಿಯಲ್ಲಿರುವ ಸಾ.ರಾ. ಕನ್ವೆನ್ಷನ್ ಹಾಲ್‌ನಲ್ಲಿ ಜು.26 ರಂದು ಸಂಜೆ 6.30ಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ಹಿರಿಯ ವಕೀಲ ಎ.ಎಸ್.ನಟರಾಜ್ ಅವರ ವೃತ್ತಿ ಬದುಕಿನ ಸಾಧನೆಯ ಸುವರ್ಣ ಸಂಭ್ರಮ ಮತ್ತು ಗುರುವಂದನೆ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.



ಉಡುಪಿಯಲ್ಲಿ ಚಂಪಕ ಅಕಾಡೆಮಿ ತಂಡದಿಂದ ಪ್ರದರ್ಶನ



ಮೈಸೂರು, ಜು.24–ಮೈಸೂರಿನ ಚಂಪಕ ಅಕಾಡೆಮಿಯ ವಿದುಷಿ ಡಾ.ನಾಗಲಕ್ಷ್ಮಿ ನಾಗರಾಜನ್ ಅವರು ತಮ್ಮ 20 ಮಂದಿ ಶಿಷ್ಯರೊಂದಿಗೆ ಜು.28 ರಂದು ಸಂಜೆ 6.45ಕ್ಕೆ ಉಡುಪಿಯ ಶ್ರೀ ಕೃಷ್ಣ ಮಠದ ರಾಜಾಂಗಣದಲ್ಲಿ ಶ್ರೀಮದ್ ಭಾಗವತ ಕಥೆಯನ್ನು ಆಧರಿಸಿ ಪದ್ಮಭೂಷಣ ಡಿ.ವಿ.ಗುಂಡಪ್ಪನವರು ರಚಿಸಿರುವ "ಶ್ರೀ ಕೃಷ್ಣ ಲೀಲಾ ವಿಭೂತಿ" ಗೇಯ ನೃತ್ಯ ರೂಪಕವನ್ನು ಪ್ರದರ್ಶಿಸಲಿದ್ದಾರೆ. ಇವರಿಗೆ ಸಂಗೀತ ಸಂಯೋಜನೆ ಮತ್ತು ಗಾಯನದಲ್ಲಿ ವಿದುಷಿ ಚೇತನ ನಾಗರಾಜ್, ಕೊಳಲಿನಲ್ಲಿ ವಿದ್ವಾನ್ ಗಣೇಶ್ ಕೆ ಎಸ್, ಮೃದಂಗಂನಲ್ಲಿ ವಿದ್ವಾನ್ ಕಿರಣ್ ಹಾಗೂ ಸಂಭಾಷಣೆ ಮತ್ತು ಗಮಕದಲ್ಲಿ ವಿದುಷಿ ಪಾವನ ಅವರು ಸಹಕರಿಸಲಿದ್ದಾರೆ.

ಮೈಸೂರು ಯೋಗ ಒಕ್ಕೂಟದ ನೂತನ ಪದಾಧಿಕಾರಿಗಳು


ಮೈಸೂರು,ಜು.24–ಮೈಸೂರು ಯೋಗ ಒಕ್ಕೂಟದ ಸಭೆಯಲ್ಲಿ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು.

ಟಿ.ಜಲೇಂದ್ರಕುಮಾರ್–ಸಂಸ್ಥಾಪಕರು, ಡಾ.ಎ.ಎಸ್. ಚಂದ್ರಶೇಖರ್–ಗೌರವ ಅಧ್ಯಕ್ಷ, ಕೆ.ಜಿ.ದೇವರಾಜು–ಅಧ್ಯಕ್ಷ, ಬಿ.ಶಾಂತರಾಮ್, ಡಾ.ಬಿ.ಪಿ.ಮೂರ್ತಿ, ಎಂ.ಎಸ್.ಶಿವಪ್ರಕಾಶ್–ಕಾರ್ಯಾಧ್ಯಕ್ಷರು, ಎಂ.ಎಸ್.ರಮೇಶ್‌ಕುಮಾರ್, ಶ್ರೀಮತಿ ಎನ್.ಆಶಾದೇವಿ–ಉಪಾಧ್ಯಕ್ಷರು, ಯೋಗ ಕುಮಾರ್–ಪ್ರಧಾನ ಕಾರ್ಯದರ್ಶಿ, ನರಸಿಂಹ–ಖಜಾಂಚಿ, ಶ್ರೀಮತಿ ಶುಭಲಕ್ಷ್ಮಿ, ಎಸ್.ಪುರುಷೋತ್ತಮ್, ಶ್ರೀಮತಿ ಶಿಲ್ಪಾ–ಸಹ ಕಾರ್ಯದರ್ಶಿಗಳು, ಕೆ.ಚಂದ್ರು, ಶ್ರೀಮತಿ ಕುಮುದಾ, ಮಣಿಕಂಠನ್, ರಾಜಶೇಖರಮೂರ್ತಿ–ಸಂಘಟನಾ ಕಾರ್ಯದರ್ಶಿಗಳು, ಶ್ರೀಮತಿ ಎ.ಲಕ್ಷ್ಮಮ್ಮ, ಶ್ರೀಮತಿ ಮಧುಬಾಲಾ ಗುಪ್ತ, ಶ್ರೀಮತಿ ಬಿ.ಎಸ್. ಲಕ್ಷ್ಮಿ–ನಿರ್ದೇಶಕರು.

ಜು.28ಕ್ಕೆ ಪುಸ್ತಕ ಲೋಕಾರ್ಪಣೆ

ಮೈಸೂರು,ಜು.24–ಸ್ಪಂದನಾ ಸಾಂಸ್ಕೃತಿಕ ಪರಿಷತ್ತು, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಕದಂಬ ಕಲಾಪೀಠ, ಉದಯಗಿರಿ ಕನ್ನಡ ಸಂಘದ ಸಂಯುಕ್ತ ಆಶ್ರಯದಲ್ಲಿ ಜು.28ರಂದು ಸಂಜೆ 5 ಗಂಟೆಗೆ ನಗರದ ಇನ್ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಂಸ್ಥೆ ಸಭಾಂಗಣದಲ್ಲಿ ಲೇಖಕಿ ಸುಜಯ ಸುರೇಶ್ ಅವರ 'ಶುಭ ಮುಹೂರ್ತಗಳು' ಲೋಕಾರ್ಪಣೆ ಸಮಾರಂಭ ನಡೆಯಲಿದೆ. ಸಮಾರಂಭವನ್ನು ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಉದ್ಘಾಟಿಸಲಿದ್ದು, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್ ಅಧ್ಯಕ್ಷತೆ ವಹಿಸುವರು. ಸ್ಪಂದನಾ ಸಾಂಸ್ಕೃತಿಕ ಪರಿಷತ್ತಿನ ಅಧ್ಯಕ್ಷ ಟಿ.ಸತೀಶ್ ಜವರೇಗೌಡ ಆಶಯ ನುಡಿಗಳನ್ನಾಡುವರು. ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಮಾನಸ ಪುಸ್ತಕ ಲೋಕಾರ್ಪಣೆ ಮಾಡುವರು. ಅಂಕಣಕಾರ್ತಿ ಹೆಚ್.ನಿವೇದಿತಾ ಪುಸ್ತಕ ಕುರಿತು ಮಾತನಾಡುವರು.

ಕ್ರಾಫರ್ಡ್ ಭವನದ ಆವರಣದಲ್ಲಿ ಸಿಂಡಿಕೇಟ್ ಸದಸ್ಯರ ಲಾಂಜ್ ಉದ್ಘಾಟನೆ



ಮೈಸೂರು ವಿಶ್ವವಿದ್ಯಾನಿಲಯದ ಕಾರ್ಯಸೌಧದ ಹಿಂಭಾಗದಲ್ಲಿರುವ ಪರೀಕ್ಷಾ ಭವನದಲ್ಲಿ ಸಿಂಡಿಕೇಟ್ ಸದಸ್ಯರ ಲಾಂಜ್ ಅನ್ನು ಉದ್ಘಾಟಿಸಲಾಯಿತು.

ಮೈಸೂರು,ಜು.24–ಮೈಸೂರು ವಿಶ್ವವಿದ್ಯಾನಿಲಯದ ಕಾರ್ಯಸೌಧ ಕ್ರಾಫರ್ಡ್ ಭವನದ ಹಿಂಭಾಗದ ಪರೀಕ್ಷಾ ಭವನದಲ್ಲಿ ಸಿಂಡಿಕೇಟ್ ಸದಸ್ಯರ ಲಾಂಜ್ ಅನ್ನು ಉದ್ಘಾಟಿಸಲಾಯಿತು.

ಯಾವುದೇ ಪೂಜೆ ಪುನಸ್ಕಾರ ಇಲ್ಲದೇ ನಾಲ್ವಡಿ ಕೃಷ್ಣರಾಜ ಒಡೆಯರ್ ಹಾಗೂ ರಾಷ್ಟ್ರಕವಿ ಕುವೆಂಪು ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಉದ್ಘಾಟಿಸಲಾಯಿತು.

ಸಿಂಡಿಕೇಟ್ ಸದಸ್ಯ ಡಾ.ಬಸವರಾಜು ಜಟ್ಟಿಹುಂಡಿ ಮಾತನಾಡಿ, ಅಧ್ಯಾಪಕರು, ಅಧ್ಯಾಪಕೇತರರು ಹಾಗೂ ವಿದ್ಯಾರ್ಥಿಗಳ ಅಹವಾಲುಗಳನ್ನು ಸ್ವೀಕರಿಸಿ, ಕುಲಪತಿ ಹಾಗೂ ಕುಲಸಚಿವರ ಗಮನಕ್ಕೆ ತಂದು ಪರಿಹರಿಸುವ ಉದ್ದೇಶದಿಂದ ಈ ಕಚೇರಿ ಆರಂಭಿಸಲಾಗಿದೆ ಎಂದರು.

ಬೆಳಗ್ಗೆ 10.30ರಿಂದ ಸಂಜೆ 5.30ರವರೆಗೆ ಕಚೇರಿ ತೆರೆದಿರುತ್ತದೆ. ಸಮಯ ಇದ್ದರೆ ಸಿಂಡಿಕೇಟ್ ಸದಸ್ಯರು ಕಚೇರಿಗೆ ಭೇಟಿ ನೀಡುತ್ತಾರೆ. ಇಲ್ಲವೇ ಅಲ್ಲಿರುವ ಸಿಬ್ಬಂದಿ ಬಳಿ ಅಹವಾಲು ಸಲ್ಲಿಸಬಹುದು. ನಂತರ ನಾವೆಲ್ಲಾ ಸಿಂಡಿಕೇಟ್ ಸದಸ್ಯರು ಚರ್ಚಿಸಿ, ಸಂಬಂಧಿಸಿದವರ ಗಮನಕ್ಕೆ ಬಂದು ಪರಿಹರಿಸಲಾಗುವುದು ಎಂದರು. ಸಿಂಡಿಕೇಟ್ ಸದಸ್ಯರಾದ ಡಾ.ಟಿ.ಆರ್. ಚಂದ್ರಶೇಖರ್ ಮಾತನಾಡಿ, ರಾಜ್ಯಪಾಲರು ಹಾಗೂ ಸರ್ಕಾರದಿಂದ ನಾಮಕರಣಗೊಂಡಿರುವ ನಾವು ವಿಶ್ವವಿದ್ಯಾನಿಲಯದ ಕಸ್ಟೋಡಿಯನ್‌ಗಳಾಗಿ ಕೆಲಸ ಮಾಡಬೇಕಾಗಿದೆ. ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್ ಹಾಗೂ ಮಾನಸಗಂಗೋತ್ರಿಯನ್ನು ಕಟ್ಟಿದ ರಾಷ್ಟ್ರಕವಿ ಕುವೆಂಪು ಅವರ ಆಶಯಕ್ಕೆ ತಕ್ಕಂತೆ ನಾವು ಕೆಲಸ ಮಾಡಬೇಕಾಗಿದೆ. ಆ ಮೂಲಕ ಮೈಸೂರು ವಿವಿಯ ಘನತೆ, ಗೌರವ ಉಳಿಸಿ, ಬೆಳೆಸಬೇಕಾಗಿದೆ ಎಂದು ಹೇಳಿದರು.

ಕುಲಪತಿಗಳ ವಿಶೇಷಾಧಿಕಾರಿ ಕುಮಾರ್ ಮಾತನಾಡಿ, ಕಾನೂನು ವ್ಯಾಪ್ತಿಯಲ್ಲಿ ಆಗಬೇಕಾದ ಎಲ್ಲಾ ಕೆಲಸಗಳನ್ನು ಕುಲಪತಿ ಹಾಗೂ ಕುಲಸಚಿವರ ಮಾರ್ಗದರ್ಶನದಲ್ಲಿ ಮಾಡಿಕೊಡಲಾಗುವುದು ಎಂದು ಭರವಸೆ ನೀಡಿದರು.

ಮುಖ್ಯ ಅತಿಥಿ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಮಾತನಾಡಿ, ಈ ಕಚೇರಿಯು ವಿವಿ ಆಡಳಿತಕ್ಕೆ ಪೂರಕವಾಗಿರಲಿ. ಇಲ್ಲಿನ ಅಧ್ಯಾಪಕರು, ಅಧ್ಯಾಪಕೇತರರು ಹಾಗೂ ವಿದ್ಯಾರ್ಥಿಗಳ ಸಮಸ್ಯೆಗಳ ಪರಿಹಾರದ ಜೊತೆಗೆ ರಾಜ್ಯಪಾಲರು ಹಾಗೂ ಸರ್ಕಾರದಿಂದ ನಾಮ ನಿರ್ದೇಶನವಾಗಿರುವ ನೀವು ಸರ್ಕಾರದ ಮಟ್ಟದಲ್ಲಿ ವಿವಿಗೆ ಆಗಬೇಕಾದ ಕೆಲಸ ಕಾರ್ಯಗಳು, ಬರಬೇಕಾದ ಸೌಲಭ್ಯಗಳನ್ನು ಕೊಡಿಸಲು ಪ್ರಯತ್ನಿಸಬೇಕು ಎಂದು ಸಲಹೆ ಮಾಡಿದರು.

ಸಿಂಡಿಕೇಟ್ ಸದಸ್ಯರಾದ ಮಹದೇಶ್, ಗೋಕುಲ್ ಗೋವರ್ಧನ್, ಡಾ.ಜೆ.ಶಿಲ್ಪಾ, ನಟರಾಜ್ ಶಿವಣ್ಣ, ಪ್ರೊ.ಶಬ್ಬೀರ್ ಮಹಮದ್ ಇತರರು ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

25.07.2024 ಗುರುವಾರ, ಮಳೆ ನಕ್ಷತ್ರ: ಪುಷ್ಯ, 20.07.2024 ರಿಂದ 02.08.2024
ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ಗ್ರೀಷ್ಮ ಋತು, ಆಷಾಢ ಮಾಸ, ಕೃಷ್ಣ ಪಕ್ಷ,
ತಿಥಿ: ಚೌತಿ, ನಕ್ಷತ್ರ: ಪೂಭಾ, ರಾಹುಕಾಲ: ಮಧ್ಯಾಹ್ನ 1.30 ರಿಂದ 3 ಗಂಟೆಯವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಮಧುಮೇಹ ತೊಂದರೆ ಮತ್ತು ಚರ್ಮರೋಗಿಗಳಿಗೆ ಆಯುರ್ವೇದ ಪಂಚಕರ್ಮ ಪ್ರತ್ಯೇಕ ಚಿಕಿತ್ಸಾ ಶಿಬಿರ. ಸ್ಥಳ: ಆಸ್ಪತ್ರೆ ಆವರಣ, ಆಲನಹಳ್ಳಿ, ಬೆಳಗ್ಗೆ 9 ಗಂಟೆಯಿಂದ.

■ **ಕಾವೇರಿ ಆಯುರ್ವೇದ ಆಸ್ಪತ್ರೆ:** ಸೈನೊಸೈಟಿಸ್, ತಲೆನೋವಿಗೆ ಉಚಿತ ಚಿಕಿತ್ಸಾ ಶಿಬಿರ. ಸ್ಥಳ: ಆಸ್ಪತ್ರೆ ಆವರಣ, ದೇವೇಗೌಡ ಸರ್ಕಲ್, ಕೆಬಿಎಲ್ ಲೇಔಟ್. ಬೆಳಗ್ಗೆ 10ರಿಂದ ಸಂಜೆ 4ರವರೆಗೆ.

■ **ಪ್ರೀತಿ ಕ್ಯಾನ್ಸರ್ ಸೆಂಟರ್:** ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ, ಸ್ಥಳ: ಪ್ರೀತಿ ಕ್ಯಾನ್ಸರ್ ಸೆಂಟರ್, ಲಕ್ಷ್ಮೀಪುರಂ, ಎಂ.ಜಿ.ರಸ್ತೆ, ಬೆಳಗ್ಗೆ 10ರಿಂದ.

■ **ಗೋಪಾಲಗೌಡ ಶಾಂತವೇರಿ ಸ್ಮಾರಕ ಆಸ್ಪತ್ರೆ:** ವಿಶ್ವ ಹೆಪಟೈಟಿಸ್ ದಿನದ ಪ್ರಯುಕ್ತ ಉಚಿತ ಆರೋಗ್ಯ ತಪಾಸಣಾ ಶಿಬಿರ, ಸ್ಥಳ: ಗ್ಯಾಸ್ಟ್ರೋ ಓಪಿಡಿ ಕೊಠಡಿ ಸಂಖ್ಯೆ 10, ಬೆಳಗ್ಗೆ 10ರಿಂದ.

■ **ಸಿರಿಕ್ಯಾರಿ ಐವಿಎಫ್ ಸೆಂಟರ್ :** ವಿಶ್ವ ಐವಿಎಫ್ ದಿನದ ಪ್ರಯುಕ್ತ ಉಚಿತ ಐವಿಎಫ್ ಶಿಬಿರ, ಸ್ಥಳ: ಗೋಪಾಲಗೌಡ ಶಾಂತವೇರಿ ಸ್ಮಾರಕ ಆಸ್ಪತ್ರೆ ಆವರಣ, ಬೆಳಗ್ಗೆ 10ರಿಂದ.

■ **ಸುವರ್ಣ ರಾಜ್ಯ ಶಿವಾರ್ಚಕ ಪ್ರಗತಿಪರ ಸಂಘ:** ನಿವೃತ್ತ ಯೋಧರಿಗೆ ಮತ್ತು ಸಾಧಕರಿಗೆ ಸನ್ಮಾನ, ಪ್ರತಿಭಾ ಪುರಸ್ಕಾರ, ಸಾನ್ನಿಧ್ಯ: ಶ್ರೀ ಕ್ಷೇತ್ರ ಶನಿಮಠದ ಅಧ್ಯಕ್ಷ ಡಾ.ರುದ್ರೇಶ್ ಪ್ರಸಾದ್ ಗುರೂಜಿ, ಸಮ್ಮುಖ: ಸರ್ಕಾರಿ ಮಹಾರಾಜ ಸಂಸ್ಕೃತ ಕಾಲೇಜು ನಿವೃತ್ತ ಪ್ರಾಧ್ಯಾಪಕ ಶಿವಾರ್ಚಕ ಮಲ್ಲಣ್ಣ, ಅಧ್ಯಕ್ಷತೆ: ಬನ್ನೂರು ನಾಗರಾಜು, ಉದ್ಘಾಟನೆ: ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್, ಆಶಯ ನುಡಿ: ವಿಶ್ವ ಹಿಂದೂ ಪರಿಷತ್ ಅಧ್ಯಕ್ಷ ಸೋಮಣ್ಣ, ಉಪಸ್ಥಿತರು: ಪ್ರದೀಪ್, ಅಂಬಳೆ ಶಿವಣ್ಣ, ಪುಟ್ಟಬಸಪ್ಪ, ಸುಬ್ರಹ್ಮಣ್ಯ, ಬಸವರಾಜಪ್ಪ, ಸ್ಥಳ: ರೋಟರಿ ಭವನ, ಜೆಎಲ್‌ಬಿ ರಸ್ತೆ, ಮುಡಾ ಎದುರು, ಬೆಳಗ್ಗೆ 10.30ಕ್ಕೆ.

■ **ಮೈಸೂರು ಮಕ್ಕಳ ಕೂಟ ಮತ್ತು ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಬಾಲಕಿಯರ ಪದವಿಪೂರ್ವ ಕಾಲೇಜು:** ವಿದ್ಯಾರ್ಥಿ ಸಂಘದ ಉದ್ಘಾಟನಾ ಸಮಾರಂಭ, ಉದ್ಘಾಟನೆ: ಉಜಿರೆ ಎಸ್‌ಡಿಎಂಇ ಸೊಸೈಟಿ ಕಾರ್ಯದರ್ಶಿ ಡಾ.ಎಸ್.ಸತೀಶ್‌ಚಂದ್ರ, ಗೌರವ ಅತಿಥಿಗಳು: ಎಂಎಂಕೆ–ಎಸ್‌ಡಿಎಂ ಮಹಿಳಾ ಮಹಾವಿದ್ಯಾ ಲಯ ಪ್ರಭಾರ ಪ್ರಾಂಶುಪಾಲ ಪ್ರೊ.ಕೆ.ಎಸ್.ಸುಕೃತ, ಅಧ್ಯಕ್ಷತೆ: ಎಂಎಂಕೆ–ಎಸ್‌ಡಿಎಂ ಬಾಲಕಿಯರ ಪದವಿ ಪೂರ್ವ ಕಾಲೇಜು ಪ್ರಾಂಶುಪಾಲರಾದ ನಯನಕುಮಾರಿ, ಸ್ಥಳ: ಕಾಲೇಜು ಆವರಣ, ಮಧ್ಯಾಹ್ನ 2ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ:** ಜನೋರ್ತ್ರಿ–24, ಮಾಧ್ಯಮ ಹಬ್ಬ ಸಮಾರೋಪ ಸಮಾರಂಭ, ಬಹುಮಾನ ವಿತರಣೆ, ಮುಖ್ಯ ಅತಿಥಿಗಳು: ಟಿವಿ5 ಕನ್ನಡ ಪ್ರಧಾನ ಸಂಪಾದಕ ರಮಾಕಾಂತ್ ಆರ್ಯನ್, ವಿಶೇಷ ಆಹ್ವಾನಿತರು: ಹಾಯ್ ಬೆಂಗಳೂರು ವಾರ ಪತ್ರಿಕೆ ಸಂಪಾದಕರಾದ ಭಾವನಾ ಬೆಳಗೆರೆ, ವಿಕ್ರಾಂತ್‌ಗೌಡ ಹೆಚ್.ಎಂ.ಫೌಂಡೇಷನ್ ಸಂಸ್ಥಾಪಕ ಅಧ್ಯಕ್ಷ ಮುತ್ತುರಾಜು, ಗಣೇಶ್, ಕೆ.ಮಧುಸೂದನ್, ಅಧ್ಯಕ್ಷತೆ: ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ಅಧ್ಯಕ್ಷರಾದ ಪ್ರೊ.ಎಂ.ಎಸ್.ಸಪ್ನಾ, ಪ್ರಾಧ್ಯಾಪಕರಾದ ಪ್ರೊ.ಸಿ.ಕೆ.ಪುಟ್ಟಸ್ವಾಮಿ, ಪ್ರೊ.ಎನ್. ಮಮತ, ಸ್ಥಳ: ರಾಣಿ ಬಹದ್ದೂರ್ ಸಭಾಂಗಣ, ಮೈಸೂರು ವಿಶ್ವವಿದ್ಯಾನಿಲಯ, ಮಧ್ಯಾಹ್ನ 3.30ಕ್ಕೆ.

■ **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಶ್ರೀ ಮದ್ಭಗವದ್ಗೀತಾ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ದಿವ್ಯ ಜೀವನ ಸಂಘ, ಮಹಿಳಾ ಶಾಖೆ:** ಗುರು ಪೂರ್ಣಿಮೆ. ಸಾಧನಾ ಸಪ್ತಾಹ ಹಾಗೂ ಆರಾಧನಾ ಕಾರ್ಯಕ್ರಮ. ಚಿನ್ಮಯ ಮಿಷನ್‌ನ ಗುರುಸರ್ವಸ್ವ ಪೂಜ್ಯ ಸ್ವಾಮಿನಿ ಕಾಶಿಕಾನಂದ ಅವರಿಂದ ಪ್ರವಚನ. ಸ್ಥಳ: ಶಿವಾನಂದ ಜ್ಞಾನಾಲಯ, ಜೆಎಲ್‌ಬಿ ರಸ್ತೆ, ಲಕ್ಷ್ಮೀಪುರಂ. ಸಂಜೆ: 6.30ರಿಂದ 7.30ರವರೆಗೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಸಂವಹನ–ಸಮಾಚಾರ, ಬಾನುಲಿ ಸರಣಿ, ಪ್ರಸ್ತುತಿ: ಅಲಕಾ ಕಟ್ಟೆಮನೆ 6.40 ಅರಿವಿನ ಶಿಖರ: ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ: ಡಿ.ಪುರುಷೋತ್ತಮ್, ಅಮೃತಾ ನಿತಿನ್ ಶಾಸ್ತ್ರಿ, ವ್ಯಾಖ್ಯಾನ: ಡಾ.ಹೆಚ್.ಎಂ.ಕಲಾಶ್ರೀ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ: ಜಯಂತಿ ಮೋಹನ್–ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ನೇರ ಫೋನ್ ಇನ್ ಕಾರ್ಯಕ್ರಮ–ಕಾಡಿನಲ್ಲಿನ ಕಥೆಗಳು, ಪ್ರಸ್ತುತಿ: ಜಿ.ಶಾಂತಕುಮಾರ್

ಮಧ್ಯಾಹ್ನ: 12.30 ದೇವರನಾಮ–ಹರೀಶ್ ಆಚಾರ್ಯ, 12.45 ಚಟ್‌ಪಟ್ ಚುರುಮುರಿ, ಪ್ರಸ್ತುತಿ: ಪ್ರಭುಸ್ವಾಮಿ ಮಳಿಮಠ್ ಹಾಗೂ ಕೆ.ಬಿ.ಮೀನಾ, 1.20 ಭಾವಗೀತೆಗಳು–ಅಮೃತಾ ಚಂದ್ರಶೇಖರ್, 4.00 ಜನಪದ ಸಂಗೀತ, 4.30 ಕನ್ನಡ ಭಾರತೀ: ನವ್ಯ ಸಾಹಿತ್ಯದ ಮನೋಧರ್ಮ. ಮಾತನಾಡುತ್ತಾರೆ ಡಾ.ಸಿ.ಜಿ.ಉಪಾಧ್ಯ, ಪ್ರಾಚೀನ ಹಸ್ತ ಪ್ರತಿಯಲ್ಲಿ ಶಕುನಶಾಸ್ತ್ರ, ಮಾತನಾಡುತ್ತಾರೆ ಡಾ.ವೈ.ಸಿ. ಭಾನುಮತಿ, 6.10 ಸಂವಹನ ಸಮಾಚಾರ–ಬಾನುಲಿ ಸರಣಿ. ಪ್ರಸ್ತುತಿ: ಅಲಕಾ ಕಟ್ಟೆಮನೆ, 6.50 ಕೃಷಿರಂಗ–ಕಿಸಾನ್‌ವಾಣಿ, ಪ್ರಾಯೋಜಕರು: ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ನಮ್ ಕಂಪನಿ–ರೈತ ಉತ್ಪಾದಕ ಸಂಸ್ಥೆಗಳ ಸಬಲೀಕರಣ ಕುರಿತ ಬಾನುಲಿ ಸರಣಿ. ಸುಸ್ಥಿರ ಕಬ್ಬು ಬೆಳೆ ಮತ್ತು ಆರೋಗ್ಯಕರ ಬೆಲ್ಲ ಉತ್ಪಾದನೆ ಕುರಿತು ಸಂವಾದ. ಭಾಗವಹಿಸುತ್ತಾರೆ: ಮಂಡ್ಯ ಬೆಲ್ಲ ರೈತ ಉತ್ಪಾದಕರ ಕಂಪನಿಯ ಅಧ್ಯಕ್ಷರಾದ ಕೆ.ಎನ್.ಮಹದೇವು ಹಾಗೂ ನಿರ್ದೇಶಕರಾದ ಕೃಷ್ಣಪ್ಪ, ಪ್ರಸ್ತುತಿ: ಎನ್.ಕೇಶವಮೂರ್ತಿ, 7.45 ವಿಧಾನಮಂಡಲದಲ್ಲಿ ಇಂದು, 8.00 ಸಂಸತ್ತಿನ ಉಭಯ ಕಲಾಪಗಳ ಸಮೀಕ್ಷೆ, 8.15 ಯುವವಾಣಿ, 8.30 ಹಿಂದಿ ಚಿತ್ರಗೀತೆಗಳು, 10.00 ನಾಟಕ: ಚೋಳರ ಕಾಲದ ರಾಜದಂಡ, ರಚನೆ: ಅಪರಂಜಿ ಶಿವು, ನಿರ್ಮಾಣ: ಉಮೇಶ್ ಎಸ್.ಎಸ್, 10.30 ಸವಿನೆನಪು

ಹೆಚ್.ಡಿ.ಕುಮಾರಸ್ವಾಮಿ ಮುಡಾದಲ್ಲಿ ಬದಲಿ ನಿವೇಶನ ಪಡೆದಿಲ್ಲ

ಮಾಜಿ ಶಾಸಕ ಸಾ.ರಾ.ಮಹೇಶ್ ಸ್ಪಷ್ಟನೆ

ಹೆಚ್‌ಡಿಕೆಗೆ ಕೈಗಾರಿಕಾ ನಿವೇಶನ ಮಂಜೂರಾಗಿತ್ತು; ಅದರ ಭಾಗಶಃ ಭಾಗ ಮತ್ತೊಬ್ಬರಿಗೆ ನೀಡಲಾಗಿತ್ತು; ಹಾಗಾಗಿ ಅವರಿಗೆ ಬದಲಿ ನಿವೇಶನ ಮಂಜೂರು ಮಾಡಲು ಮುಡಾದಲ್ಲಿ ನಿರ್ಣಯವಾಗಿತ್ತು; ಆದರೆ ದಕ್ಕಿಲ್ಲ ; ಕಾಂಗ್ರೆಸ್‌ನವರಿಂದ ಜನರಿಗೆ ತಪ್ಪು ಮಾಹಿತಿ



ಮೈಸೂರಿನ ರಮಾವಿಲಾಸ ರಸ್ತೆಯ ಕಚೇರಿಯಲ್ಲಿ ಬುಧವಾರ ಮಾಜಿ ಶಾಸಕ ಸಾ.ರಾ.ಮಹೇಶ್ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದರು.

ಮೈಸೂರು, ಜು.24(ಬಿಎಲ್‌ಯು)– ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಮುಡಾದಿಂದ ಬದಲಿ ನಿವೇಶನ ಪಡೆದಿದ್ದಾರೆಂಬ ಕಾಂಗ್ರೆಸ್ ಆರೋಪ ಶುದ್ಧ ಸುಳ್ಳು ಎಂದು ಮಾಜಿ ಶಾಸಕ ಸಾ.ರಾ.ಮಹೇಶ್ ಸ್ಪಷ್ಟಪಡಿಸಿದ್ದಾರೆ.

ಮೈಸೂರಿನ ರಮಾವಿಲಾಸ ರಸ್ತೆಯ ತಮ್ಮ ಕಚೇರಿಯಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರಿನಲ್ಲಿ ಕುಮಾರಸ್ವಾಮಿ ಬದಲಿ ನಿವೇಶನ ಪಡೆದಿದ್ದಾರೆ ಎಂದು ಕಾಂಗ್ರೆಸ್‌ನವರು ಜನರಿಗೆ ತಪ್ಪು ಮಾಹಿತಿ ನೀಡುತ್ತಿದ್ದಾರೆ ಎಂದು ದೂರಿದರು.

ಕೈಗಾರಿಕಾ ನಿವೇಶನಕ್ಕಾಗಿ ಕುಮಾರಸ್ವಾಮಿ ಮುಡಾಗೆ ಅರ್ಜಿ ಸಲ್ಲಿಸಿದ್ದರು. ಈ ಹಿನ್ನೆಲೆಯಲ್ಲಿ ಮೈಸೂರಿನ ವಿಶ್ವೇಶ್ವರ ನಗರದ ಇಂಡಸ್ಟ್ರಿಯಲ್ ಸಬರ್ಬ್ 3ನೇ ಹಂತದಲ್ಲಿ 75X280 ವಿಸ್ತೀರ್ಣದ 21,000 ಚದರಡಿ ಕೈಗಾರಿಕಾ ನಿವೇಶನ ನವೆಂಬರ್ 7, 1984ರಲ್ಲಿ ಮಂಜೂರಾಗಿತ್ತು. ತರುವಾಯ ಜನವರಿ 16, 1985 ರಲ್ಲಿ ಈ ನಿವೇಶನದ ಸ್ವಾಧೀನ ಪತ್ರವನ್ನು ಕೂಡ ಮುಡಾ ನೀಡಿತ್ತು. ಆದರೆ ಕುಮಾರಸ್ವಾಮಿ ಅವರಿಗೆ ಹಂಚಿಕೆಯಾಗಿದ್ದ ನಿವೇಶನದ ಭಾಗಶಃ ಭಾಗವನ್ನು ಮತ್ತೊಬ್ಬರಿಗೆ ಮಂಜೂರು ಮಾಡಲಾಗಿತ್ತು. ಇದರಿಂದ 21 ಸಾವಿರ ಚದರಡಿಯಲ್ಲಿ 13,064 ಚದರಡಿಯ ನಿವೇಶನ ಉಳಿದಿತ್ತು. ಈ ಹಿನ್ನೆಲೆಯಲ್ಲಿ ಕುಮಾರಸ್ವಾಮಿ ಅವರಿಗೆ ಮಂಜೂರಾದ ಪೂರ್ತಿ ನಿವೇಶನ ಭೌತಿಕವಾಗಿ ಇಲ್ಲದ ಕಾರಣ ಬದಲಿ ನಿವೇಶನ ನೀಡುವ ಸಂಬಂಧ ಮುಡಾ ಮುಂದೆ ಪ್ರಸ್ತಾವನೆ ಸಲ್ಲಿಸಲಾಗಿತ್ತು ಎಂದು ವಿವರಿಸಿದರು.

ಈ ಸಂಬಂಧ ಜನವರಿ 7, 2023 ರಂದು ನಡೆದ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಸಭೆಯಲ್ಲಿ ಕುಮಾರಸ್ವಾಮಿ ಅವರ ಕೋರಿಕೆ ಮೇರೆಗೆ ಬದಲಿ ನಿವೇಶನ ಮಂಜೂರು ಮಾಡಲು ತೀರ್ಮಾನವನ್ನು ಕೈಗೊಳ್ಳಲಾಗಿತ್ತು ಎಂದು ತಿಳಿಸಿದರು. ಆದರೆ ಈ ತನಕ ಕುಮಾರಸ್ವಾಮಿ ಅವರಿಗೆ ಬದಲಿ ನಿವೇಶನ ನೀಡಿಲ್ಲ. ಎರಡು ಬಾರಿ ಮುಖ್ಯಮಂತ್ರಿ ಆಗಿದ್ದ ವೇಳೆ ತಮ್ಮ ಪ್ರಭಾವ ಬಳಸಿ ಕುಮಾರಸ್ವಾಮಿ ಅವರು ಬದಲಿ ನಿವೇಶನ ಪಡೆಯಬಹುದಿತ್ತು ಆದರೆ ಕುಮಾರಸ್ವಾಮಿ ಅವರು ಮುಖ್ಯಮಂತ್ರಿ ಸ್ಥಾನವನ್ನು ಸ್ವಾರ್ಥಕ್ಕಾಗಿ ಬಳಸಿಕೊಂಡಿಲ್ಲ ಎಂದು ಸ್ಪಷ್ಟನೆ ನೀಡಿದರು.

ಕೈಗಾರಿಕಾ ನಿವೇಶನ ಹೊರತುಪಡಿಸಿ ಕುಮಾರಸ್ವಾಮಿ ಅವರ ಹೆಸರಲ್ಲಾಗಲಿ, ಪತ್ನಿ ಅನಿತಾ ಕುಮಾರಸ್ವಾಮಿ ಹೆಸರಲ್ಲಾಗಲಿ, ಪುತ್ರ ನಿಖಿಲ್ ಹೆಸರಲ್ಲಾಗಲಿ ಮುಡಾದಲ್ಲಿ ವಾಣಿಜ್ಯ ಅಥವಾ ವಸತಿ ನಿವೇಶನವಿಲ್ಲ. ಆದರೆ ವಾಸ್ತವ ತಿಳಿಯದ ಕಾಂಗ್ರೆಸ್ ನಾಯಕರು ಕುಮಾರಸ್ವಾಮಿ ವಿರುದ್ಧ ಆಧಾರರಹಿತ ಆರೋಪ ಮಾಡುತ್ತಿದ್ದು, ಜನರಿಗೆ ತಪ್ಪು ಮಾಹಿತಿ ನೀಡುತ್ತಿದ್ದಾರೆ ಎಂದು ಸಾರಾ ಮಹೇಶ್ ಕಿಡಿಕಾರಿದರು.

ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಜೆಡಿಎಸ್ ನಗರಾಧ್ಯಕ್ಷ ಕೆ.ಟಿ.ಚಲುವೇಗೌಡ, ಮಾಜಿ ಮೇಯರ್ ಎಂ.ಜೆ.ರವಿಕುಮಾರ್, ಮಾಜಿ ಕಾರ್ಪೊರೇಟರ್ ಎಸ್‌ಬಿಎಂ ಮಂಜು, ಕೆ.ವಿ.ಶ್ರೀಧರ್ ಉಪಸ್ಥಿತರಿದ್ದರು.

ಕೆಲವು ಆರ್‌ಟಿಐ ಕಾರ್ಯಕರ್ತರಿಂದ ಸುಲಿಗೆ

ಆರ್‌ಟಿಐ ಹೆಸರಿನಲ್ಲಿ ಸಾರ್ವಜನಿಕರ ಸುಲಿಗೆ ಮಾಡುತ್ತಿರುವ ವ್ಯಕ್ತಿಗಳ ವಿರುದ್ಧ ಪೊಲೀಸರು ಕ್ರಮ ಕೈಗೊಳ್ಳಬೇಕು ಎಂದು ಮಾಜಿ ಶಾಸಕ ಸಾ.ರಾ.ಮಹೇಶ್ ಒತ್ತಾಯಿಸಿದರು. ಕೆಲವು ಆರ್‌ಟಿಐ ಕಾರ್ಯಕರ್ತರು ಇದನ್ನೆ ಮೂಲ ವೃತ್ತಿಯಾಗಿ ಮಾಡಿಕೊಂಡು ಸಾರ್ವಜನಿಕರಿಂದ ಹಣ ಸುಲಿಗೆ ಮಾಡುತ್ತಿದ್ದಾರೆ. ಪೊಲೀಸರು ಇದಕ್ಕೆ ಕಡಿವಾಣ ಹಾಕಬೇಕು ಎಂದು ಆಗ್ರಹಿಸಿದರು.

ಆರ್‌ಟಿಐನಲ್ಲಿ ಅರ್ಜಿ ಸಲ್ಲಿಸುತ್ತಾರೆ. ತರುವಾಯ ಅದನ್ನು ವಾಪಸು ಪಡೆಯುತ್ತಾರೆ. ಅರ್ಜಿ ಕೊಟ್ಟು, ವಾಪಸು ಪಡೆಯುವುದರ ನಡುವೆ ನಡೆಯುವ ವ್ಯವಹಾರ ಪ್ರಮುಖವಾಗಿದೆ. ಇಂತಹ ವ್ಯಕ್ತಿಗಳು ಆರ್‌ಟಿಐ ಅನ್ನು ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ ಎಂದು ಕಿಡಿಕಾರಿದರು. ಹಗರಣಗಳನ್ನು ಬಯಲಿಗೆಳೆಯುವ ಪ್ರಾಮಾಣಿಕ ಆರ್‌ಟಿಐ ಕಾರ್ಯಕರ್ತರಿಗೆ ನಮ್ಮ ಬೆಂಬಲವಿದೆ. ಆದರೆ ಹಣ ವಸೂಲಿಗೆ ಆರ್‌ಟಿಐ ಕಾಯ್ದೆ ಬಳಕೆ ಮಾಡುತ್ತಿರುವುದಕ್ಕೆ ನಮ್ಮ ವಿರೋಧವಿದೆ ಎಂದರು.

ರಾಜಕಾರಣಿಯೊಬ್ಬರು ಖಾಸಗಿ ಕಾರ್ಯಕ್ರಮವೊಂದರಲ್ಲಿ ನೃತ್ಯ ಮಾಡಿರುವ ಬಗ್ಗೆ ಪ್ರತಿಕ್ರಿಯೆ ನೀಡಿದ ಸಾ.ರಾ.ಮಹೇಶ್, ರಾಜಕಾರಣಿಗಳೇನು ಮನುಷ್ಯರಲ್ಲವೆ? ಅವರಿಗೆ ವೈಯಕ್ತಿಕ ಜೀವನವಿಲ್ಲವೆ? ಅಂಬಾನಿ ಕುಟುಂಬದ ಮದುವೆಯಲ್ಲೇ ಅಷ್ಟೊಂದು ಜನರು ಡ್ಯಾನ್ಸ್ ಮಾಡಿದಾಗ ಏಕೆ ಪ್ರಶ್ನಿಸಿಲ್ಲ ಎಂದು ಕೇಳಿದರು.

ನೀವು ನಿವೇಶನ ವಾಪಸ್ಸು ನೀಡದೇ ಮುಡಾ ಹಗರಣ ತಾರ್ಕಿಕ ಅಂತ್ಯ ಕಾಣದು!

ಮುಖ್ಯಮಂತ್ರಿ ಸಿದ್ದರಾಮಯ್ಯರಿಗೆ ಮಾಜಿ ಸಂಸದ ಪ್ರತಾಪ್‌ಸಿಂಹ ಕಿವಿಮಾತು

- 40 ವರ್ಷದ ರಾಜಕಾರಣದಲ್ಲಿ ನಿಮ್ಮ ಆಸ್ತಿ ಏನೇನು ಅಲ್ಲ
- ಯಕಶ್ಚಿತ್ 14 ನಿವೇಶನಕ್ಕಾಗಿ ವರ್ಚಸ್ಸಿಗೆ ಧಕ್ಕೆ ತಂದುಕೊಳ್ಳಬೇಡಿ
- ಈಗ ನಿಮ್ಮಂತೆ ಅಕ್ರಮವಾಗಿ ನಿವೇಶನ ಪಡೆದವರಿಗೆ ಧೈರ್ಯ ಬಂದಿದೆ
- ನ್ಯಾಯಮೂರ್ತಿ ಸಂತೋಷ್ ಹೆಗ್ಡೆ ಇಲ್ಲವೇ ನ್ಯಾಯಮೂರ್ತಿ ಎನ್.ಕುಮಾರ್‌ರಿಂದ ಇಡೀ ಹಗರಣದ ತನಿಖೆ ಮಾಡಿಸಿ





ಮಾಜಿ ಸಂಸದ ಪ್ರತಾಪ್‌ಸಿಂಹ

ಮೈಸೂರು, ಜು.24(ಬಿಎಲ್‌ಯು)– ಮುಖ್ಯಮಂತ್ರಿ ಸಿದ್ದರಾಮಯ್ಯರ ಪತ್ನಿ ಶ್ರೀಮತಿ ಪಾರ್ವತಿ ಅಕ್ರಮವಾಗಿ ಪಡೆದಿರುವ ನಿವೇಶನಗಳನ್ನು ವಾಪಸ್ಸು ನೀಡದ ಹೊರತು ಮುಡಾ ಹಗರಣ ತಾರ್ಕಿಕ ಅಂತ್ಯ ಕಾಣದು ಎಂದು ಅಭಿಪ್ರಾಯಪಟ್ಟಿರುವ ಮಾಜಿ ಸಂಸದ ಪ್ರತಾಪ್ ಸಿಂಹ, ಸಿದ್ದರಾಮಯ್ಯ ನಿವೇಶನಗಳ ಹಿಂದಕ್ಕೆ ನೀಡದೇ ಹೋದಲ್ಲಿ ಅಕ್ರಮವಾಗಿ ನಿವೇಶನ ಪಡೆದವರು ನಾವು ಬಚಾವಾಗುತ್ತೇವೆ ಎಂಬ ಧೈರ್ಯದಲ್ಲಿದ್ದಾರೆ ಎಂದು ಮಾಜಿ ಸಂಸದ ಪ್ರತಾಪ್ ಸಿಂಹ ತಿಳಿಸಿದ್ದಾರೆ.

ಮೈಸೂರು ಬಿಜೆಪಿ ಕಚೇರಿಯಲ್ಲಿ ಇಂದು ಪತ್ರಕರ್ತರ ಜೊತೆ ಮಾತನಾಡಿದ ಅವರು, ಕಳೆದ 40 ವರ್ಷದ ರಾಜಕಾರಣದಲ್ಲಿ ಹಗರಣದ ಕಪ್ಪು ಚುಕ್ಕೆ ಇಲ್ಲದ ಸಿದ್ದರಾಮಯ್ಯ, ಮುಡಾ ನಿವೇಶನ ಹಗರಣದಿಂದ ಹೆಸರು ಕೆಡಿಸಿಕೊಳ್ಳಬಾರದು. ಯಕಶ್ಚಿತ್ 14 ನಿವೇಶನಕ್ಕೆ ಸಿದ್ದರಾಮಯ್ಯ ತಮ್ಮ ವರ್ಚಸ್ಸಿಗೆ ಧಕ್ಕೆ ತಂದುಕೊಳ್ಳುತ್ತಿದ್ದಾರೆ ಎಂದು ಟೀಕಿಸಿದರು. ಈಗಲೂ ಕಾಲ ಮಿಂಚಿಲ್ಲ. ನಿಮ್ಮ ಪತ್ನಿ ಹೆಸರಿನಲ್ಲಿ ಪಡೆದಿರುವ ನಿವೇಶನವನ್ನು ಮುಡಾಗೆ ವಾಪಸು ನೀಡಿ. ಈ ಮೂಲಕ ನಿಮ್ಮ ವರ್ಚಸ್ಸು ಮತ್ತು ಘನತೆ ಉಳಿಸಿಕೊಳ್ಳಿ ಎಂದು ಸಿದ್ದರಾಮಯ್ಯರಿಗೆ ಸಲಹೆ ನೀಡಿದರು.

ನಿಮ್ಮ ಗಮನಕ್ಕೆ ತಾರದೆ ನಿಮ್ಮ ಬಾಮೈದ ತಪ್ಪು ಮಾಡಿರಬಹುದು. ಆದರೆ ಈಗ ನಿವೇಶನ ಹಿಂತಿರುಗಿಸಿ ರಾಜಕಾರಣದಲ್ಲಿ ಮೇಲ್ಪಂಕ್ತಿ ಹಾಕಿಕೊಡಿ. ನಿಮ್ಮ ತೀರ್ಮಾನದಿಂದ ಮುಡಾದಲ್ಲಿ ನಡೆಯುತ್ತಿರುವ ಬಹಳಷ್ಟು ಹಗರಣಗಳು ಹೊರ ಬರುತ್ತವೆ. ಜೊತೆಗೆ 4 ಸಾವಿರ ನಿವೇಶನ ಮತ್ತೆ ಮುಡಾ ವಶಕ್ಕೆ ಬರಲಿವೆ ಎಂದು ಪ್ರತಾಪ್ ಸಿಂಹ ಹೇಳಿದರು.

ಇಲ್ಲದಿದ್ದರೆ ಸಿದ್ದರಾಮಯ್ಯ ಕುಟುಂಬದ ಪ್ರಕರಣ ಮುಂದಿಟ್ಟುಕೊಂಡು ಅಕ್ರಮವಾಗಿ ನಿವೇಶನ ಪಡೆದಿರುವ ಇತರರು ಬಚಾವಾಗುತ್ತಾರೆ. ಹಾಗಾಗಬಾರದು, ಮುಡಾಗೆ ಮೊದಲು ನಿವೇಶನ ಹಿಂತಿರುಗಿಸಿ. ಇಲ್ಲವೆಂದರೆ ಮುಂದಿನ ಮೂರೂವರೆ ವರ್ಷ ಮುಖ್ಯಮಂತ್ರಿ ಆಗಿರುವ ನೀವು ಕೊನೆ ತನಕ ಈ ಆರೋಪ ಎದುರಿಸಬೇಕಾಗುತ್ತದೆ ಎಂದು ಪ್ರತಾಪ್ ಸಿಂಹ ಎಚ್ಚರಿಸಿದರು. ನನ್ನ ಹಾಗೂ ಸಿದ್ದರಾಮಯ್ಯ ನಡುವೆ ಸೈದ್ಧಾಂತಿಕವಾಗಿ ಕೆಲವು ಭಿನ್ನಾಭಿಪ್ರಾಯ ಇರಬಹುದು. ಆದರೆ ಕಳೆದ 20 ವರ್ಷದಿಂದ ಈಚೆಗೆ ಅಧಿಕಾರದಲ್ಲಿರುವ ಮುಖ್ಯಮಂತ್ರಿಗಳ ಆಸ್ತಿಯನ್ನು ಹೋಲಿಸಿ ನೋಡಿದರೆ ಸಿದ್ದರಾಮಯ್ಯನವರ ಆಸ್ತಿ ಏನು ಅಲ್ಲ. ಈ ಹಿನ್ನೆಲೆಯಲ್ಲಿ ನಿಮ್ಮ ವರ್ಚಸ್ಸಿಗೆ ಧಕ್ಕೆ ತಂದುಕೊಳ್ಳಬಾರದೆಂಬ ಮನೋಭಾವ ನಿಮಗಿದ್ದರೆ ಕೂಡಲೇ ನಿಮ್ಮ ಪತ್ನಿ ಪಡೆದಿರುವ ನಿವೇಶನವನ್ನು ವಾಪಸ್ಸು ನೀಡಿ ಎಂದು ಮನವಿ ಮಾಡಿದರು.

ನೀವು ನಿವೇಶನ ವಾಪಸು ನೀಡಿದರೆ ಈ ಹಗರಣ ತಾರ್ಕಿಕ ಅಂತ್ಯ ತಲುಪುತ್ತದೆ. ಜೊತೆಗೆ ರಾಜಕಾರಣ ಶುದ್ಧೀಕರಣ ಆಗಲು ಆರಂಭವಾಗುತ್ತದೆ. ಈಗ ನೀವು ನಡೆಸುತ್ತಿರುವ ತನಿಖೆಯಿಂದ ಯಾವುದೇ ಪ್ರಯೋಜನವಾಗುವುದಿಲ್ಲ. ಮುಖ್ಯಮಂತ್ರಿಯಾದ ನಿಮ್ಮನ್ನು ಕಟಕಟೆಗೆ ತಂದು ನಿಲ್ಲಿಸಿ ಅಧಿಕಾರಿಗಳು ಹೇಗೆ ತನಿಖೆ ನಡೆಸಲು ಸಾಧ್ಯವಾಗುತ್ತದೆ. ಈ ಹಿನ್ನೆಲೆಯಲ್ಲಿ ಮುಡಾ ಹಗರಣದ ಬಗ್ಗೆ ಘನತೆವೆತ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ ಅಥವಾ ನ್ಯಾಯಮೂರ್ತಿ ಎನ್.ಕುಮಾರ್ ಅವರ ನೇತೃತ್ವದಲ್ಲಿ ನ್ಯಾಯಾಂಗ ತನಿಖೆ ಮಾಡಿಸಿ ಎಂದು ಪ್ರತಾಪ್ ಸಿಂಹ ಆಗ್ರಹಿಸಿದರು.

ಮುಡಾ ಅಧ್ಯಕ್ಷ ಮರೀಗೌಡ ತಿಳಿಗೇಡಿ

ನಾನು ಮನೆ ನಿರ್ಮಾಣ ಮಾಡಿರುವ ನಿವೇಶನದ ಸಿಆರ್ ರದ್ದು ಮಾಡಿರುವುದರಿಂದ ಮುಂದೆ ಕಾನೂನು ಪ್ರಕಾರ ಪ್ರಕ್ರಿಯೆಗಳು ನಡೆಯುತ್ತವೆ. ಆದರೆ, ನನ್ನ ಮನೆಯ ಸಿಆರ್ ವಿಚಾರಕ್ಕೂ, ಹಾಲಿ ಮುಡಾ ಹಗರಣಕ್ಕೂ ತಳಕು ಹಾಕುತ್ತಿರುವ ಮುಡಾ ಅಧ್ಯಕ್ಷ ಮರೀಗೌಡ ತಿಳಿಗೇಡಿ ಎಂದು ಮಾಜಿ ಸಂಸದ ಪ್ರತಾಪ್ ಸಿಂಹ ಏಕವಚನದಲ್ಲೇ ಲೇವಡಿ ಮಾಡಿದರು. ನಿವೇಶನವನ್ನು ಹಿಂತಿರುಗಿಸಿ ಎಂದು ಸಿದ್ದರಾಮಯ್ಯನವರ ಮೇಲಿನ ಪ್ರೀತಿ, ಗೌರವ, ಕಾಳಜಿಯಿಂದ ಸಲಹೆ ನೀಡಿದ್ದೇನೆ. ಆದರೆ ಇದನ್ನು ಅರ್ಥಮಾಡಿಕೊಳ್ಳದ ಮರೀಗೌಡ, ಅಸಂಬದ್ಧವಾಗಿ ಮಾತನಾಡುತ್ತಿದ್ದಾರೆ. ಮೈಸೂರಿನ ಹಿಂದಿನ ಜಿಲ್ಲಾಧಿಕಾರಿ ಶಿಖಾ ಅವರಿಗೆ ಅವಾಚ್ಯ ಶಬ್ದಗಳಿಂದ ನಿಂದಿಸಿ ಒಂದೂವರೆ ತಿಂಗಳು ತಲೆಮರೆಸಿಕೊಂಡಿದ್ದರು. ಅಂತಹ ವ್ಯಕ್ತಿಯನ್ನು ಮುಡಾ ಅಧ್ಯಕ್ಷನಾಗಿ ಮಾಡಿದ್ದೀರಾ ಎಂದು ಟೀಕಿಸಿದರು. ಕನಿಷ್ಠ ಜ್ಞಾನ ಇಲ್ಲದ ಮರೀಗೌಡರಂತಹವರಿಂದ ಸಿದ್ದರಾಮಯ್ಯರಿಗೆ ಕೆಟ್ಟ ಹೆಸರು ಬರುತ್ತಿದೆ. ತಿಳಿಗೇಡಿ ಮರೀಗೌಡ ಮುಡಾ ಹಗರಣಕ್ಕೂ, ನನ್ನ ಮನೆಯ ಸಿಆರ್ ವಿಚಾರಕ್ಕೂ ಹೋಲಿಕೆ ಮಾಡಿ ಆರೋಪ ಮಾಡುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಯಾವಾಗ, ಏನು ಮಾಡುತ್ತೇನೆ ಅಂತ ಈಗಲೇ ಹೇಳಲ್ಲ

ರಾಜಕಾರಣದಲ್ಲಿ ಮುಂದೆ ನಾನು ಯಾವಾಗ, ಏನು ಮಾಡುತ್ತೇನೆ ಎಂದು ಈಗಲೇ ಬಹಿರಂಗ ಮಾಡಲ್ಲ ಎಂದು ಮಾಜಿ ಸಂಸದ ಪ್ರತಾಪ್ ಸಿಂಹ ಅಚ್ಚರಿ ಹೇಳಿಕೆ ನೀಡಿದರು. ಪಾಲಿಟಿಕ್ಸ್‌ನಲ್ಲಿ ಮುಂದೆ ಏನು ಮಾಡುತ್ತೇವೆ ಎಂದು ಹೇಳಬಾರದು. ಹಾಗೆ ಹೇಳಿದರೆ ಕೆಲವರು ಅದಕ್ಕೆ ಬೇರೆ ಸ್ಕೀಂ ಹಾಕಿಕೊಂಡು ಬಿಡುತ್ತಾರೆ ಎಂದರು. ತಾಯಿ ಚಾಮುಂಡೇಶ್ವರಿ ನನಗೆ ಮುಂದಿನ ದಾರಿ ತೋರಿಸುತ್ತಾಳೆ. ನಾನೇನು ಜನರಿಂದ ತಿರಸ್ಕೃತನಾದ ವ್ಯಕ್ತಿಯಲ್ಲ, ಕೆಲವರಿಂದ ಟಿಕೆಟ್ ತಪ್ಪಿದೆ. ಹಾಗೆಂದ ಮಾತ್ರಕ್ಕೆ ಇದೇ ಅಂತಿಮವಲ್ಲ ಎಂದರು.

ವಯಸ್ಸಾಗಿರುವ ಬಹಳಷ್ಟು ರಾಜಕಾರಣಿಗಳು ನನಗೆ ಇನ್ನು ಪ್ರಾಯ ಇದೆ ಎಂದು ರಾಜಕಾರಣ ಮಾಡುತ್ತಾರೆ. ಹೀಗಿರುವಾಗ ನಾನು ರಾಜಕಾರಣ ಮಾಡದೆ ಸುಮ್ಮನೆ ಕೂರಲು ಸಾಧ್ಯವೆ ಎಂದು ಪ್ರತಾಪ್ ಸಿಂಹ ಪ್ರಶ್ನಿಸಿದರು.

ಮುಡಾ ನೌಕರರನ್ನು ಕೂರಿಸಿ ಸಂಬಳ ಕೊಡ್ತೀರಾ...

ಮುಡಾದಲ್ಲಿ ಬಹುಕೋಟಿ ಹಗರಣ ಬೆಳಕಿಗೆ ಬಂದ ಮೇಲೆ ದೈನಂದಿನ ಕೆಲಸ ಕಾರ್ಯಗಳು ಸ್ಥಗಿತಗೊಂಡಿವೆ. ಸಾರ್ವಜನಿಕರಿಗೆ ತೊಂದರೆ ನೀಡುತ್ತಿರುವ ಸರ್ಕಾರದ ನಿಲುವಿಗೆ ಮಾಜಿ ಶಾಸಕ ಸಾ.ರಾ.ಮಹೇಶ್ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಮುಡಾ ಹಗರಣಗಳ ಬಗ್ಗೆ ಐಎಎಸ್ ಅಧಿಕಾರಿ ನೇತೃತ್ವದ ತನಿಖೆ ಹಾಗೂ ನಿವೃತ್ತ ನ್ಯಾಯಮೂರ್ತಿ ನೇತೃತ್ವದಲ್ಲಿ ನ್ಯಾಯಾಂಗ ತನಿಖೆಗೆ ಸರ್ಕಾರ ಆದೇಶಿಸಿದೆ. ಈಗ ತನಿಖೆಗಳು ನಡೆಯುತ್ತಿದ್ದು, ತಪ್ಪಿತಸ್ಥರಿಗೆ ಶಿಕ್ಷೆಯಾಗಲಿದೆ. ಆದರೆ ಈಗ ತನಿಖೆ ಉಲ್ಲೇಖಿಸಿ ಮುಡಾದ ದೈನಂದಿನ ಕಾರ್ಯಗಳಿಗೆ ತಡೆ ನೀಡಿರುವುದು ಎಷ್ಟು ಸರಿ ಎಂದು ಪ್ರಶ್ನಿಸಿದರು.

ಮನೆ ನಿರ್ಮಾಣಕ್ಕೆ ನಕ್ಷೆ ಮಂಜೂರಾತಿ ಸೇರಿದಂತೆ ಬಹಳಷ್ಟು ಕೆಲಸ ಕಾರ್ಯಗಳು ಮುಡಾದಲ್ಲಿ ನಡೆಯುತ್ತಿಲ್ಲ. ಇದರಿಂದ ಸಾರ್ವಜನಿಕರು ತೀವ್ರ ತೊಂದರೆಗೆ ಸಿಲುಕಿದ್ದಾರೆ. ಯಾರೋ ಮಾಡಿದ ತಪ್ಪಿಗೆ ಅಮಾಯಕ ಜನರಿಗೆ ಏಕೆ ತೊಂದರೆ ನೀಡುತ್ತೀರಾ ಎಂದು ಪ್ರಶ್ನಿಸಿದರು. ಅಲ್ಲದೆ ಮುಡಾ ನೌಕರರಿಗೆ ಕೂರಿಸಿ ಸಂಬಳ ಕೊಡುತ್ತೀರಾ ಎಂದರು. ಇದು ಬಹುಕೋಟಿ ಹಗರಣವಾದ ಕಾರಣ ಸಿಬಿಐಗೆ ವಹಿಸಬೇಕು. ಕೇಂದ್ರ ಸರ್ಕಾರ ಸ್ವಯಂ ಪ್ರೇರಣೆಯಿಂದ ಸಿಬಿಐ ತನಿಖೆ ನಡೆಸಲು ಸಾಧ್ಯವಾಗದ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರವೇ ಸಿಬಿಐ ತನಿಖೆಗೆ ಆದೇಶಿಸಬೇಕು ಎಂದು ಸಾ.ರಾ.ಮಹೇಶ್ ಆಗ್ರಹಿಸಿದರು.

ನೀರಿಗೆ ಶಿಕ್ಷೆಗೆ ಖಂಡನೆ: ನಾಲೆ ನೀರು ಕದ್ದರೆ 2 ವರ್ಷ ಜೈಲು, 2 ಲಕ್ಷ ದಂಡ ವಿಧಿಸುವ ವಿಧೇಯಕಕ್ಕೆ ಸಾ.ರಾ.ಮಹೇಶ್ ತೀವ್ರವಾಗಿ ವಿರೋಧಿಸಿದರು. ರೈತರು ಮೊದಲೇ ಸಂಕಷ್ಟದಲ್ಲಿದ್ದಾರೆ. ನಾಲೆಗೆ ನೀರಿನ ಪೈಪ್ ಲೈನ್ ಹಾಕುವುದಕ್ಕೆ ತಡೆಯೊಡ್ಡಿದ್ದಾರೆ. ಜಮೀನು ಪಕ್ಕದಲ್ಲಿರುವ ನಾಲೆಯಿಂದ ರೈತರು ನೀರು ಪಡೆದರೆ ತಪ್ಪೇನು ಎಂದು ಪ್ರಶ್ನಿಸಿದರು. ಬರ, ಅತಿವೃಷ್ಟಿಯಿಂದ ಬಳಲಿರುವ ರೈತರಿಗೆ ಮತ್ತೆ ಬರೆ ಹಾಕುವ ಕೆಲಸ ಮಾಡಬೇಡಿ ಎಂದು ರಾಜ್ಯ ಸರ್ಕಾರಕ್ಕೆ ಸಲಹೆ ನೀಡಿದರು.

ಪರಿಶಿಷ್ಟರಿಗೆ ನ್ಯಾಯ ಸಿಗಬೇಕು; ಮುಡಾ ಅಕ್ರಮ ನಿವೇಶನ ಹಂಚಿಕೆ ರದ್ದಾಗಬೇಕು!



ವಿಜಯೇಂದ್ರ

ಬೆಂಗಳೂರು, ಜು.24(ಕೆಎಂಶಿ)– ರಾಜ್ಯ ವಿಧಾನಸಭೆ ಮತ್ತು ವಿಧಾನಪರಿಷತ್ತಿನಲ್ಲಿ ಅಹೋರಾತ್ರಿ ಧರಣಿ ಮಾಡಿದ್ದೇವೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಮತ್ತು ಶಾಸಕ ಬಿ.ವೈ. ವಿಜಯೇಂದ್ರ ಪ್ರಕಟಿಸಿದರು.

ವಿಧಾನಸೌಧದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಅನ್ಯಾಯ ಆಗಲು ಬಿಡುವುದಿಲ್ಲ. ಮುಖ್ಯಮಂತ್ರಿಗಳ ಕುಟುಂಬಕ್ಕೆ ಮೈಸೂರಿನಲ್ಲಿ ಮುಡಾದಿಂದ ಕೊಟ್ಟ 14 ನಿವೇಶನಗಳು ವಾಪಸ್ ಬರಬೇಕು. ಈ ಸರ್ಕಾರವು ಅಧಿಕಾರಕ್ಕೆ ಬಂದ ಬಳಿಕ 5 ಸಾವಿರಕ್ಕೂ ಹೆಚ್ಚು ನಿವೇಶನಗಳನ್ನು ಹಂಚಿದೆ. ಆ ಹಂಚಿಕೆಯನ್ನು ರದ್ದು ಮಾಡಬೇಕಿದೆ ಎಂದು ಆಗ್ರಹಿಸಿದರು. ಚುನಾಯಿತ ಪ್ರತಿನಿಧಿಗಳು ಬಡವರಿಗೆ ಸಲ್ಲಬೇಕಾದ ನಿವೇಶನಗಳನ್ನು ಮನಸ್ಸೋ ಇಚ್ಛೆ ಹಂಚಿದ ಕುರಿತು ಜನರು ನಮ್ಮನ್ನು ಕೇಳುತ್ತಿದ್ದಾರೆ. ಮುಡಾದಲ್ಲಿ ಮುಖ್ಯಮಂತ್ರಿಗಳ ಕುಟುಂಬವು ನಿವೇಶನ ಪಡೆದ ಕುರಿತು ಚರ್ಚಿಸಲು ಮುಂದಾದರೆ, ತನಿಖಾ ಆಯೋಗದ ಮುಂದೆ ಹೋಗಿ ಎಂದು ಕಾನೂನು ಸಚಿವರು ಹೇಳುತ್ತಾರೆ. ಯಾವ ತನಿಖಾ ಆಯೋಗದ ಬಗ್ಗೆ ಮಾತನಾಡುತ್ತೀರಿ ಎಂದು ಕೇಳಿದರು.

ಹಿಂದೆ ಸಿದ್ದರಾಮಯ್ಯನವರು ಅಧಿಕಾರದಲ್ಲಿ ಇದ್ದಾಗ ಯಾವ್ಯಾವ ತನಿಖಾ ಆಯೋಗದ ಪರಿಸ್ಥಿತಿ ಏನಾಗಿದೆ ಎಂದು ರಾಜ್ಯದ ಜನತೆಗೆ ಗೊತ್ತಿದೆ ಎಂದು ನುಡಿದರು.

ಮುಖ್ಯಮಂತ್ರಿಗಳು ಯಾಕೆ ಪಲಾಯನವಾದ ಮಾಡುತ್ತಿದ್ದಾರೆ ಎಂದು ಅರ್ಥವಾಗುತ್ತಿಲ್ಲ. ಧೈರ್ಯಸ್ಥರಾದ ಮುಖ್ಯಮಂತ್ರಿಗಳು ಚರ್ಚೆಗೆ ಅವಕಾಶ ನೀಡುವರೆಂಬ ವಿಶ್ವಾಸದಲ್ಲಿದ್ದೆವು. ಆದರೆ, ಸಿದ್ದರಾಮಯ್ಯನವರು ದಿವ್ಯಮೌನ ತಾಳಿದ್ದಾರೆ ಎಂದು ಆಕ್ಷೇಪಿಸಿದರು. ಕೆಲವು ಸಚಿವರು ಸಿಎಂ ಅವರನ್ನು ನಿನ್ನೆ ಭೇಟಿ ಮಾಡಲು ಹೋಗಿದ್ದಾಗ ಮುಖ್ಯಮಂತ್ರಿಯವರು ಅವರನ್ನು ತರಾಟೆಗೆ ತೆಗೆದುಕೊಂಡ ಮಾಹಿತಿ ಇದೆ ಎಂದು ತಿಳಿಸಿದರು.

ಅದೇ ಕಾರಣಕ್ಕೆ ಇವತ್ತು ಕೆಲವು ಶಾಸಕರು ಹಾರಾಡುವ ಪ್ರಯತ್ನ ಮಾಡಿದ್ದಾರೆ ಎಂದು ಹೇಳಿದರು.

ಇದು ಪ್ರಜಾಪ್ರಭುತ್ವದ ಕಗ್ಗೊಲೆ: ಮುಡಾ ಹಗರಣದ ಕುರಿತು ಚರ್ಚಿಸಲು ನಿಲುವಳಿ ಸೂಚನೆ ಮಂಡಿಸಿದ್ದೆವು. ಕಾನೂನು ಸಚಿವರಾದ ಎಚ್.ಕೆ. ಪಾಟೀಲರು ಮಾತನಾಡಿ, ತನಿಖಾ ಆಯೋಗ ರಚಿಸಿದ್ದೇವೆ. ಅದರ ಮುಂದೆ ಹೇಳಿಕೆ ಕೊಡಿ ಎಂದು ತಿಳಿಸಿದ್ದಾರೆ. ಇದು ಪ್ರಜಾಪ್ರಭುತ್ವದ ಕಗ್ಗೊಲೆ ಎಂದು ವಿಜಯೇಂದ್ರ ಟೀಕಿಸಿದರು.

ಬಡವರಿಗೆ ನ್ಯಾಯ ಸಿಗುವವರೆಗೆ ನಮ್ಮ ಹೋರಾಟ ಮುಂದುವರೆಯಲಿದೆ. ವಾಲ್ಮೀಕಿ ನಿಗಮದ ಹಗರಣದಲ್ಲಿ ಇ.ಡಿ. ವಿರುದ್ಧ ಎಫ್‌ಐಆರ್ ದಾಖಲಿಸಿದ ರಾಜ್ಯ ಸರ್ಕಾರದ ಕ್ರಮಕ್ಕೆ ರಾಜ್ಯ ಹೈಕೋರ್ಟ್ ಛೀಮಾರಿ ಹಾಕಿದೆ. ರಾಜ್ಯ ಸರ್ಕಾರಕ್ಕೆ ಮುಖಭಂಗ ಆಗಿದೆ. ವಿಪಕ್ಷ ನಾಯಕ ಆರ್.ಅಶೋಕ್ ಮಾತನಾಡಿ, ಮುಡಾ ಹಗರಣದಲ್ಲಿ ಕಾಂಗ್ರೆಸ್ ಪಕ್ಷವು 4 ಸಾವಿರ ಕೋಟಿ ಲೂಟಿ ಮಾಡಿದೆ ಎಂದು ಆರೋಪಿಸಿದರು. ಈ ಕುರಿತ ನಿಲುವಳಿ ಸೂಚನೆ ತಂದಿದ್ದು, ಸರ್ಕಾರ ಹೆದರಿ ಓಡಿ ಹೋಗಿದೆ ಎಂದು ಟೀಕಿಸಿದರು. ಇದೇ ವೇಳೆ ಹಲವು ಮಸೂದೆಗಳಿಗೆ ಒಪ್ಪಿಗೆ ನೀಡಿದೆ ಎಂದು ದೂರಿದರು.

ಸರ್ಕಾರವು ಹೇಡಿಗಳಂತೆ ವರ್ತಿಸಿದೆ. ಸಿಎಂ ಅವರಿಗೆ ಧೈರ್ಯ, ಮಾನ–ಮರ್ಯಾದೆ ಇದ್ದರೆ 14 ನಿವೇಶನಗಳನ್ನು ನ್ಯಾಯಯುತವಾಗಿ ಪಡೆದುದಾಗಿ ಅವರು ತಿಳಿಸಬೇಕಿತ್ತು ಎಂದು ಸವಾಲು ಹಾಕಿದರು. ವಾಲ್ಮೀಕಿ ನಿಗಮದಲ್ಲಿ 187 ಕೋಟಿ ಹಣವನ್ನು ಚೆಕ್‌ಗಳ ಮೂಲಕ ಲೂಟಿ ಮಾಡಿದ್ದಾರೆ. ಪರಿಶಿಷ್ಟ ಪಂಗಡದ ಅಭಿವೃದ್ಧಿಗೆ ಮೀಸಲಿಟ್ಟ 25 ಸಾವಿರ ಕೋಟಿ ಹಣವನ್ನು ಲೂಟಿ ಮಾಡಿದ್ದಾರೆ. ಈಗ ಮುಡಾದಲ್ಲಿ ಪರಿಶಿಷ್ಟರ ಜಮೀನಿನ ವಿಚಾರದಲ್ಲೂ ಅನ್ಯಾಯವಾಗಿದೆ. ಅವರು ಕೇಂದ್ರದ ಎಸ್‌ಸಿ, ಎಸ್‌ಟಿ ಇಲಾಖೆಗೆ ದೂರು ನೀಡಿದ್ದಾರೆ ಎಂದು ತಿಳಿಸಿದರು.

ಕಾಂಗ್ರೆಸ್ಸಿನ ಬ್ರಹ್ಮಾಂಡ ಭ್ರಷ್ಟಾಚಾರ. ಮೋಸದಿಂದ ಜಮೀನಿನ ಲೂಟಿ ಕುರಿತು ದೂರನ್ನು ಜಿಲ್ಲಾಧಿಕಾರಿಗಳಿಗೂ ನೀಡಿದ್ದಾರೆ. ಅದರ ದೂರಿನ ಪ್ರತಿ ನನ್ನ ಬಳಿ ಇದೆ ಎಂದರು. ಏಕಾಏಕಿ ಜಮೀನಿನ ಭೂಪರಿವರ್ತನೆ, ಡಿನೋಟಿಫಿಕೇಶನ್ ಮಾಡಿದ್ದಾರೆ. ಕಾಂಗ್ರೆಸ್ಸಿನ ಬ್ರಹ್ಮಾಂಡ ಭ್ರಷ್ಟಾಚಾರವನ್ನು ರಾಜ್ಯದ ಜನತೆ ನೋಡುತ್ತಿದ್ದಾರೆ ಎಂದು ಆರ್. ಅಶೋಕ್ ಅವರು ಟೀಕಿಸಿದರು.

ಮಂಡ್ಯ ಕನ್ನಡ ಜಾತ್ರೆಗೆ 100 ಕೋಟಿ ಮೀಸಲು

30 ಕೋಟಿ ಬಿಡುಗಡೆಗೆ ಪ್ರಸ್ತಾವನೆ



ಶಿವರಾಜ್ ತಂಗಡಗಿ

ಬೆಂಗಳೂರು, ಜು.24(ಕೆಎಂಶಿ)– ಮಂಡ್ಯದಲ್ಲಿ ನಡೆಯಲಿರುವ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ 100 ಕೋಟಿ ರೂ. ಮೀಸಲಿದ್ದು, 30 ಕೋಟಿ ರೂ. ಬಿಡುಗಡೆಗೆ ಪ್ರಸ್ತಾವನೆ ಸಲ್ಲಿಕೆಯಾಗಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಖಾತೆ ಸಚಿವ ಶಿವರಾಜ್ ತಂಗಡಗಿ ವಿಧಾನ ಸಭೆಯಲ್ಲಿಂದು ತಿಳಿಸಿದ್ದಾರೆ. ರವಿ ಕುಮಾರ್ ಗಣಿಗ ಅವರ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ಡಿಸೆಂಬರ್‌ನಲ್ಲಿ ಆಯೋಜಿಸಿರುವ ಸಾಹಿತ್ಯ ಸಮ್ಮೇಳನಕ್ಕೆ ಅನುದಾನ ಬಿಡುಗಡೆ ಕುರಿತು ಪರಿಶೀಲಿಸಲಾಗುತ್ತಿದೆ ಎಂದರು.

ಪ್ರತಾಪ್ ಸಿಂಹರದ್ದು ಕೀಳುಮಟ್ಟದ ರಾಜಕೀಯ ಸಂಸ್ಕೃತಿ

ಮುಡಾ ಅಧ್ಯಕ್ಷ ಮರೀಗೌಡ ತಿರುಗೇಟು



ಮುಡಾ ಅಧ್ಯಕ್ಷ ಮರೀಗೌಡ

ಮೈಸೂರು, ಜು.24(ಬಿಎಲ್‌ಯು)– ತಮ್ಮನ್ನು ಏಕವಚನದಲ್ಲಿ ನಿಂದಿಸಿರುವ ಮಾಜಿ ಸಂಸದ ಪ್ರತಾಪ್ ಸಿಂಹ ನಡವಳಿಕೆ ಅವರ ಕೀಳುಮಟ್ಟದ ರಾಜಕೀಯ ಸಂಸ್ಕೃತಿ ಬಿಂಬಿಸುತ್ತದೆ ಎಂದು ಮುಡಾ ಅಧ್ಯಕ್ಷ ಮರೀಗೌಡರು ತಿರುಗೇಟು ನೀಡಿದ್ದಾರೆ.

ಪ್ರತಾಪ್ ಸಿಂಹ ಬಿಜೆಪಿ ಹೈಕಮಾಂಡ್‌ನಲ್ಲಿ ಹೆಚ್ಚಾಗಿ ಗುರುತಿಸಿಕೊಂಡಿದ್ದರೂ ಈ ರೀತಿಯ ನಡವಳಿಕೆಗಳಿಂದ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಟಿಕೆಟ್ ಕೈ ತಪ್ಪಲು ಕಾರಣವಾಯಿತು ಎಂದು ಟೀಕಿಸಿದ್ದಾರೆ. ಜನಾಶೀರ್ವಾದದಿಂದ ಎರಡು ಬಾರಿ ಮುಖ್ಯಮಂತ್ರಿ ಆಗಿರುವ ಸಿದ್ದರಾಮಯ್ಯ ಅವರ ರಾಜಕೀಯ ಏಳ್ಗೆ ಸಹಿಸದೆ, ಅವರ ತೇಜೋವಧೆ ಮಾಡುವ ಉದ್ದೇಶದಿಂದ ಪ್ರತಾಪ್ ಸಿಂಹ ಆಧಾರ ರಹಿತ ಆರೋಪ ಮಾಡುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪಾರ್ವತಿ ಅವರ ಭೂಮಿ ಸ್ವಾಧೀನ ಮಾಡಿಕೊಂಡಾಗ ಸೂಕ್ತ ಪರಿಹಾರ ನೀಡುವಂತೆ 2014ರಲ್ಲಿ ಮುಡಾಗೆ ಅರ್ಜಿ ಸಲ್ಲಿಸಿದ್ದರು. ಆ ಸಂದರ್ಭದಲ್ಲಿ ಸಿದ್ದರಾಮಯ್ಯ ಮುಖ್ಯಮಂತ್ರಿ ಆಗಿದ್ದರೂ ತಮ್ಮ ಪತ್ನಿಗೆ ಪರಿಹಾರ ನೀಡುವ ವಿಚಾರದಲ್ಲಿ ಯಾವುದೇ ಪ್ರಭಾವ ಬೀರಿಲ್ಲ ಎಂದು ಮರೀಗೌಡರು ಸ್ಪಷ್ಟಪಡಿಸಿದ್ದಾರೆ. ತರುವಾಯ ಬಿಜೆಪಿ ಸರ್ಕಾರದ ಅವಧಿಯ 2021ರಲ್ಲಿ ಶೇಕಡ 50:50 ಅನುಪಾತದಲ್ಲಿ ನಿವೇಶನ ನೀಡಲಾಗಿದೆ ಎಂದು ಹೇಳಿದ್ದಾರೆ.

ಮುಡಾದಲ್ಲಿ ತಮ್ಮ ಪತ್ನಿಗೆ ನಿವೇಶನ ನೀಡಲು ಸಿದ್ದರಾಮಯ್ಯ ತಮ್ಮ ರಾಜಕೀಯ ಪ್ರಭಾವ ಬಳಸಿಲ್ಲ. ಆದರೂ ನಿವೇಶನ ಹಿಂತಿರುಗಿಸುವಂತೆ ಪ್ರತಾಪ್ ಸಿಂಹ ಒತ್ತಾಯ ಮಾಡುತ್ತಿದ್ದಾರೆ. ಸಿದ್ದರಾಮಯ್ಯ ಪ್ರತಿಷ್ಠೆಗೆ ಧಕ್ಕೆ ತರಲು, ರಾಜಕೀಯ ಪಿತೂರಿ ದೃಷ್ಟಿಯಿಂದ ತಂತ್ರ ರೂಪಿಸುತ್ತಿದ್ದಾರೆ ಎಂದು ಆರೋಪಿಸಿದ್ದಾರೆ.

ಮನೆ ನಿರ್ಮಾಣದ ಕಟ್ಟಡ ಪೂರ್ಣಗೊಂಡ ವರದಿ ಪಡೆಯಲು ವಾಮಮಾರ್ಗ ಅನುಸರಿಸಿರುವುದನ್ನು ನೋಡಿದರೆ, ಯಾರು ನಿಜವಾಗಿ ಅಕ್ರಮ ನಡೆಸಿದ್ದಾರೆ ಎಂಬುದು ತಿಳಿಯುತ್ತದೆ ಎಂದು ಚಾಟಿ ಬೀಸಿದ್ದಾರೆ. ಮುಡಾ ಹಗರಣದ ಬಗ್ಗೆ ಈಗಾಗಲೇ ತನಿಖೆ ನಡೆಯುತ್ತಿದೆ. ನಂತರ ಮುಡಾದಲ್ಲಿ ಯಾವ ಯಾವ ಸರ್ಕಾರದ ಅವಧಿಯಲ್ಲಿ ಎಷ್ಟು ಭ್ರಷ್ಟಾಚಾರವಾಗಿದೆ ಎಂಬುದನ್ನು ಎಳೆ ಎಳೆಯಾಗಿ ಬಯಲಿಗೆ ತರುತ್ತೇನೆ ಎಂದು ಮರೀಗೌಡರು ಎಚ್ಚರಿಸಿದ್ದಾರೆ.

ಕೇಂದ್ರ ಸಚಿವ ನಿತಿನ್ ಗಡ್ಕರಿ ಭೇಟಿಯಾದ ಸಂಸದ ಯದುವೀರ್ ಒಡೆಯರ್ ; ವಿಮಾನ ನಿಲ್ದಾಣ ರನ್‌ವೇ ವಿಸ್ತರಣೆ ಬಗ್ಗೆ ಚರ್ಚೆ

ಹೆದ್ದಾರಿ ಸ್ಥಳಾಂತರ ಡಿಪಿಆರ್ ಶೀಘ್ರ ಸಿದ್ಧಪಡಿಸಲು ಮನವಿ



ದೆಹಲಿಯಲ್ಲಿ ಕೇಂದ್ರ ಸಚಿವ ನಿತಿನ್ ಗಡ್ಕರಿ ಅವರನ್ನು ಮೈಸೂರು–ಕೊಡಗು ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಭೇಟಿ ಮಾಡಿ, ವಿವಿಧ ಅಭಿವೃದ್ಧಿ ಕಾಮಗಾರಿಗಳ ಸಂಬಂಧ ಮನವಿ ಸಲ್ಲಿಸಿದರು.

ಮೈಸೂರು,ಜು.24(ಪಿಎಂ)– ಮೈಸೂರು ಮಂಡಕಳ್ಳಿ ವಿಮಾನ ನಿಲ್ದಾಣದ ರನ್‌ವೇ ವಿಸ್ತರಣೆಗಾಗಿ ರಾಷ್ಟ್ರೀಯ ಹೆದ್ದಾರಿ 766ರ ಸ್ಥಳಾಂತರ ಕಾಮಗಾರಿ ಸಂಬಂಧ ಡಿಪಿಆರ್ ಅನ್ನು ಶೀಘ್ರ ಸಿದ್ಧಪಡಿಸಬೇಕೆಂಬುದೂ ಸೇರಿದಂತೆ ವಿವಿಧ ಹೆದ್ದಾರಿಗಳ ಅಭಿವೃದ್ಧಿಗೆ ಕ್ರಮ ವಹಿಸಬೇಕೆಂದು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಅವರಲ್ಲಿ ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಮನವಿ ಮಾಡಿದ್ದಾರೆ.

ನಿತಿನ್ ಗಡ್ಕರಿ ಅವರನ್ನು ದೆಹಲಿ ಅವರ ಕಚೇರಿಯಲ್ಲಿ ಭೇಟಿ ಮಾಡಿದ ಸಂಸದರು, ಮೈಸೂರಿನ ಬೆಳವಣಿಗೆಗೆ ಪ್ರಮುಖ ಮೂಲಸೌಕರ್ಯ ಯೋಜನೆಗಳ ಕುರಿತು ಚರ್ಚೆ ನಡೆಸಿ, ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್–ವೇನಲ್ಲಿ ರಸ್ತೆ ಸುರಕ್ಷತೆಗಾಗಿ ಹೆಚ್ಚುವರಿ ಕಾಮಗಾರಿ ಮಂಜೂರಾತಿ, ಮೈಸೂರು–ಕುಶಾಲನಗರ ಹೆದ್ದಾರಿ ಕಾಮಗಾರಿಗೆ ಭೂಸ್ವಾಧೀನ ಪ್ರಕ್ರಿಯೆಗೆ ಅನುಮತಿ ನೀಡಬೇಕು. ಅಲ್ಲದೆ, ಕೇರಳದಿಂದ ಕೊಳ್ಳೆಗಾಲದವರೆಗೆ 6 ಪಥಗಳ ಹೆದ್ದಾರಿಯನ್ನು ಮೇಲ್ದರ್ಜೆಗೇರಿಸಬೇಕೆಂದು ಕೇಂದ್ರ ಸಚಿವರಿಗೆ ಮನವಿ ಮಾಡಿದ್ದಾರೆಂದು ಸಂಸದರ ಕಚೇರಿಯ ಪ್ರಕಟಣೆ ತಿಳಿಸಿದೆ. ಎನ್‌ಹೆಚ್ 275ರ ವ್ಯಾಪ್ತಿಯಲ್ಲಿ ಬೆಂಗಳೂರಿನಿಂದ ಮೈಸೂರಿನವರೆಗಿನ ಎಕ್ಸ್‌ಪ್ರೆಸ್ ವೇನಲ್ಲಿ ರಸ್ತೆ ಬಳಕೆದಾರರ ಸುರಕ್ಷತೆ ದೃಷ್ಟಿಯಿಂದ ಹೆಚ್ಚುವರಿ ಕಾಮಗಾರಿಗಳ ಮಂಜೂರಾತಿ ನೀಡಬೇಕು. ಬೆಂಗಳೂರು–ಮೈಸೂರು ಹೆದ್ದಾರಿಯೊಂದಿಗೆ ಮೈಸೂರು ರಿಂಗ್ ರಸ್ತೆ ಸಂಚಾರವನ್ನು ವಿಲೀನಗೊಳಿಸಲು ಮಣಿಪಾಲ್ ಆಸ್ಪತ್ರೆ ಜಂಕ್ಷನ್‌ನಲ್ಲಿ ಫ್ಲೈಓವರ್ ನಿರ್ಮಿಸುವ ಮೂಲಕ ಜಂಕ್ಷನ್ ಅಭಿವೃದ್ಧಿಗೊಳಿಸಬೇಕೆಂದು ಸಚಿವರಲ್ಲಿ ಕೋರಿದರು.

ಸದರಿ ಎಕ್ಸ್‌ಪ್ರೆಸ್ ವೇನಲ್ಲಿ ಟೋಲ್ ಬೂತ್‌ಗಳ ಸ್ಥಾಪನೆ ಮೂಲಕ ಪ್ರಯಾಣಿಕರ ದಟ್ಟಣೆ ನಿಯಂತ್ರಿಸಬಹುದೆಂದು ಸಚಿವರಿಗೆ ಮನವಿ ಮಾಡಿದ ಸಂಸದರು, ಮೈಸೂರು–ಕುಶಾಲನಗರದ ಎನ್‌ಹೆಚ್ 275ರ ಕಾಮಗಾರಿ ಪ್ರಾರಂಭಿಸಲು ಭೂಸ್ವಾಧೀನಕ್ಕೆ ಅನುಮತಿಯನ್ನು ಶೀಘ್ರ ನೀಡಬೇಕು. ಇದರಿಂದ ಭೂಸ್ವಾಧೀನದ ಪರಿಹಾರದ ವಿತರಣೆ ತ್ವರಿತವಾಗಲಿದೆ. ಹಾಗಾಗಿ ಈ ಸಂಬಂಧ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳಿಗೆ ಸೂಕ್ತ ಸೂಚನೆಗಳನ್ನು ನೀಡಬೇಕೆಂದು ಸಂಸದರು ವಿನಂತಿಸಿದರು.

ಎನ್‌ಹೆಚ್–766 (ಹಳೆಯ ಎನ್‌ಹೆಚ್ 212) ಹೆದ್ದಾರಿಯು ಕೇರಳದಿಂದ ಕೊಳ್ಳೇಗಾಲದವರೆಗೆ ಟಿ.ನರಸೀಪುರ, ಮೈಸೂರು, ನಂಜನಗೂಡು, ಗುಂಡ್ಲುಪೇಟೆ, ಕೋಝಿಕೋಡ್ ಮೂಲಕ ಹಾದುಹೋಗುತ್ತದೆ. ಈ ಹೆದ್ದಾರಿ ಸಂಬಂಧ ಎರಡು ಅಂಡರ್‌ಪಾಸ್ ಜೊತೆಗೆ ಎರಡು ಲೇನ್ ಟ್ರಾಫಿಕ್ ಮತ್ತು ಉಳಿದ ಎರಡು ಲೇನ್ ರಸ್ತೆಯನ್ನು ಜಂಕ್ಷನ್ ಸುಧಾರಣೆ ಕ್ರಮಗಳ ಬಗ್ಗೆ ಸದ್ಯ ಪ್ರಸ್ತಾಪಿಸಲಾಗಿದೆ. ಆದರೆ ರಸ್ತೆ ಸುರಕ್ಷತೆಗಾಗಿ ಇದು ದೀರ್ಘಕಾಲೀನ ಪರಿಹಾರವಲ್ಲ. ಆದ್ದರಿಂದ ಈ ಎರಡನ್ನೂ ಮತ್ತೊಮ್ಮೆ ಪರಿಶೀಲಿಸಲು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ ನಿರ್ದೇಶನ ನೀಡುವಂತೆ ಮನವಿ ಮಾಡಿದರು. ಮೈಸೂರಿನಿಂದ ನಂಜನಗೂಡಿಗೆ 20 ಕಿಮೀ ಉದ್ದದ ಸಂಚಾರದ ತೀವ್ರತೆ ಹೆಚ್ಚಿದೆ. ಆದ್ದರಿಂದ ಸದರಿ ಹೆದ್ದಾರಿ ಈ ಭಾಗವನ್ನು 6 ಲೇನ್‌ಗೆ ನವೀಕರಿಸುವ ಅಗತ್ಯವಿದೆ. ಈ ಸಂಬಂಧ ಹೆಚ್ಚಿನ ಅಧ್ಯಯನಕ್ಕಾಗಿ ಸಂಬಂಧಿಸಿದ ಅಧಿಕಾರಿಗಳಿಗೆ ಅಗತ್ಯ ಸೂಚನೆ ನೀಡಲು ವಿನಂತಿಸಿದರು. ಯದುವೀರ್ ಅವರ ಮನವಿ ಸ್ವೀಕರಿಸಿದ ನಿತಿನ್ ಗಡ್ಕರಿಯವರು ಸಹಕಾರ ನೀಡುವುದಾಗಿ ಭರವಸೆ ನೀಡಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ನಕ್ಕರೆ ಅದೇ ಸ್ವರ್ಗ

ಹೆಂಡತಿ : (ಗಂಡನಿಗೆ) ನಿಮಗೆ ಎಷ್ಟು ಸಾರಿ ಹೇಳೋದು ಕೆಲಸ ಮಾಡಬೇಕಾದರೆ ಮುತ್ತು ಕೊಡಬೇಡಿ ಅಂತ...

ಕೆಲಸದವಳು : ಹೌದು ಅಮ್ಮಾವ್ರೇ... ಇವರಿಗೆ ಎಷ್ಟು ಹೇಳಿದರೂ ಅಷ್ಟೇನೆ, ನನಗಂತೂ ಹೇಳಿ, ಹೇಳಿ ಸಾಕಾಯ್ತು

ಮೈಸೂರು ಮಿತ್ರ

ಗುರುವಾರ, 25 ಜುಲೈ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

ನಾನು ದೇವರಲ್ಲಿ ಬೇಡುವುದು ಒಂದೇ. ಕಿತ್ತುಕೊಳ್ಳುವುದಾದರೆ ಯಾವುದನ್ನೂ ಕೊಡಬೇಡ. – ನುಡಿಮುತ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಬಡವರ ಕಣ್ಣೀರಿಗೆ ಕರುಣೆ ಬಂದೀತೆ ಬೆಣ್ಣೆಗೆ?

ನಿಮ್ಮ ಪತ್ರಗಳು

■ ಬಿಡಾಡಿ ದನಗಳ ಹಾವಳಿ ತಪ್ಪಿಸಿ



ಮಾನ್ಯರೆ,

ಮೈಸೂರಿನ ಪ್ರಮುಖ ರಸ್ತೆಗಳಲ್ಲಿ ಬಿಡಾಡಿ ದನಗಳ ಹಾವಳಿ ಜಾಸ್ತಿಯಾಗಿದೆ. ಅದರಲ್ಲೂ ಭಾರೀ ಜನದಟ್ಟಣೆಯಿಂದ ಕೂಡಿರುವ ನ್ಯೂ ಸಯ್ಯಾಜಿರಾವ್ ರಸ್ತೆಯ ಸರ್ಕಾರಿ ಆಯುರ್ವೇದ ಆಸ್ಪತ್ರೆಯಿಂದ ಹೈವೇ ಸರ್ಕಲ್ ಮತ್ತು ಎಲ್‌ಐಸಿ ಸರ್ಕಲ್‌ವರೆಗೆ ಬಿಡಾದಿ ದನಗಳ ಹಾವಳಿ ಜಾಸ್ತಿಯಾಗಿದ್ದು, ರಸ್ತೆ ಮಧ್ಯದಲ್ಲೇ ದನಗಳು ಕುಳಿತುಕೊಳ್ಳುವುದರಿಂದ ವಾಹನ ಸವಾರರಿಗೆ ಅದರಲ್ಲೂ ದ್ವಿಚಕ್ರ ವಾಹನ ಸವಾರರಿಗೆ ತೀವ್ರ ತೊಂದರೆಯಾಗುತ್ತಿದೆ.

ರಾತ್ರಿ ವೇಳೆಯೂ ಜಾನುವಾರುಗಳು ಓಡಾಡುವುದರಿಂದ ಅಪಘಾತಗಳು ಸಂಭವಿಸಿರುವುದುಂಟು. ಅದರಲ್ಲೂ ದ್ವಿಚಕ್ರ ವಾಹನ ಸವಾರರಿಗೆ ಅನಾಹುತಕ್ಕೆ ಆಹ್ವಾನ ನೀಡಿದಂತಿದೆ. ಪ್ರಾಣಿಗಳು ಮತ್ತು ಮನುಷ್ಯರ ಕೈಕಾಲು ಮತ್ತು ಪ್ರಾಣಹಾನಿಗೆ ಯಾರು ಹೊಣೆ? ಜಾನುವಾರುಗಳನ್ನು ರಸ್ತೆಗಳಲ್ಲಿ ಬಿಡುವುದರಿಂದ ಆಗುವ ಅಪಾಯವನ್ನು ದನದ ಮಾಲೀಕರು ಅರಿತು ಕೊಳ್ಳಬೇಕು. ಅಲ್ಲದೆ ಸಂಬಂಧಪಟ್ಟ ಅಧಿಕಾರಿಗಳು ಈ ಬಗ್ಗೆ ಕ್ರಮ ಕೈಗೊಳ್ಳಬೇಕು.

– ನೊಂದ ನಾಗರಿಕರು, ಮೈಸೂರು.

■ ರಸ್ತೆ ಬದಿ ನಿಂತರೆ ಸಾಕು ಮುತ್ತುತ್ತಿವೆ ಸೊಳ್ಳೆಗಳು; ಪಾಲಿಕೆಯ ಆರೋಗ್ಯ ವಿಭಾಗಕ್ಕಿಲ್ಲ ಅರಿವು

ಮಾನ್ಯರೆ,

ಮೈಸೂರು ಮಹಾನಗರ ಪಾಲಿಕೆಯ ಆರೋಗ್ಯ ವಿಭಾಗ ಎಷ್ಟರ ಮಟ್ಟಿಗೆ ವಿಫಲವಾಗಿದೆ ಎಂಬುದಕ್ಕೆ ಮೈಸೂರು ನಗರದ ಯಾವುದೇ ರಸ್ತೆ ಬದಿ ಒಂದು ಸೆಕೆಂಡ್ ನಿಂತರೆ ಸಾಕು ಸೊಳ್ಳೆಗಳು ಮುತ್ತಿಕೊಳ್ಳುತ್ತವೆ. ದುರದೃಷ್ಟವಶಾತ್ ಆರೋಗ್ಯ ಸಮಸ್ಯೆ ಇರುವವರಿಗೆ ಹೀಗೆ ಸೊಳ್ಳೆ ಮುತ್ತಿದರೆ ತಕ್ಷಣ ಮಹಾಮಾರಿ ಡೆಂಗ್ಯೂ ಇನ್ನಿತರೆ ಸಾಂಕ್ರಾಮಿಕ ರೋಗ ಹರಡುವುದು ಖಚಿತ. ಇದರ ಅರಿವು ಇರುವವರು ಪ್ರತಿಷ್ಠಿತ ಮಹಾನಗರ ಪಾಲಿಕೆಯ ಆರೋಗ್ಯಾಧಿಕಾರಿ ಆಗಿರಬೇಕಿತ್ತು ಹಾಗೂ ಇಷ್ಟರಲ್ಲಿ ಫಾಗಿಂಗ್ ಇಲ್ಲವೇ ಫುಟ್‌ಪಾತ್ ಗಿಡಗಂಟಿ, ಕಸ ತೆರವು ಮಾಡಿ ಜನರ ಆರೋಗ್ಯ ಕಾಪಾಡುವ ಕೆಲಸ ಮಾಡಬೇಕಿತ್ತು. ಆದರೆ ರಾಜ್ಯಾದ್ಯಂತ ನಾನಾ ಸಾಂಕ್ರಾಮಿಕ ರೋಗಗಳು ತಾಂಡವವಾಡುತ್ತಿರುವ ವೇಳೆ ಈ ರೀತಿ ಮೈಮರೆತಿರುವುದನ್ನು ನೋಡಿದರೆ ಜನರೇ ಎಚ್ಚರ ವಹಿಸಬೇಕಿದೆ. ಇಲ್ಲ, ಜಿಲ್ಲಾಧಿಕಾರಿ ಲಕ್ಷ್ಮೀಕಾಂತರೆಡ್ಡಿ ಅವರ ಮೊರೆ ಹೋಗಬೇಕಾಗಿ ಬಂದಿದೆ.

– ರಮೇಶ್, ಯಾದವಗಿರಿ, ಮೈಸೂರು.

■ ಆರ್‌ಎಸ್‌ಎಸ್ ಕಾರ್ಯಕ್ರಮಗಳಲ್ಲಿ ಸರ್ಕಾರಿ ನೌಕರರು ಭಾಗಿ: ಸ್ವಾಗತಾರ್ಹ

ಮಾನ್ಯರೆ,

ರಾಷ್ಟ್ರೀಯ ಸ್ವಯಂಸೇವಕ ಸಂಘ(ಆರ್‌ಎಸ್‌ಎಸ್) ಕಾರ್ಯಕ್ರಮಗಳಲ್ಲಿ ಸರಕಾರಿ ನೌಕರರು ಭಾಗವಹಿಸಲು ಇದ್ದ ನಿರ್ಬಂಧವನ್ನು ಕೇಂದ್ರ ಸರ್ಕಾರವು ಹಿಂಪಡೆದಿದ್ದು, ಈ ಸಂಬಂಧ ಸಿಬ್ಬಂದಿ, ಸಾರ್ವಜನಿಕ ಕುಂದುಕೊರತೆ ಹಾಗೂ ಪಿಂಚಣಿ ಸಚಿವಾಲಯವು ಆದೇಶ ಹೊರಡಿಸಿರುವುದು ಸ್ವಾಗತಾರ್ಹವಾಗಿದೆ. ದೇಶ ಅನುಭವಿಸಿದ ಅನೇಕ ಕಷ್ಟಕರ ಸನ್ನಿವೇಶಗಳಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘವು ಮಹತ್ವದ ಕಾಯಕಗಳನ್ನು ನಡೆಸಿದೆ. ಭಾರತದ ಪ್ರಮುಖ ಜನ ಸಮುದಾಯವಾದ ಹಿಂದೂಗಳಲ್ಲಿ ಜಾಗೃತಿಯನ್ನು ಮೂಡಿಸಿದೆ.

ಈ ಆರ್‌ಎಸ್‌ಎಸ್ ಸಂಘವು ದೇಶಕ್ಕೆ ಉತ್ತಮ ಕಾರ್ಯಕರ್ತರನ್ನು, ಉತ್ತಮ ನೇತಾರರನ್ನು ಕೊಟ್ಟಿದೆ ಎಂದರೆ ತಪ್ಪಾಗಲಾರದು. ಇಂತಹ ನಿಸ್ವಾರ್ಥ ಸ್ವಯಂ ಸೇವಾ ಸಂಘವನ್ನು ಸ್ಥಾಪಿಸಿದ ಕೀರ್ತಿ ಕೇಶವ ಬಲಿರಾಂ ಹೆಡಗೇವಾರ್ ಅವರಿಗೆ ಸಲ್ಲುತ್ತದೆ. ದೇಶ ಕಂಡ ಹಲವು ಮಹನೀಯರಲ್ಲಿ ಇವರು ಕೂಡ ಪ್ರಮುಖರಾಗಿದ್ದಾರೆ. ಇವರು ನಮ್ಮ ನಾಡು ಕಂಡ ಅಪ್ರತಿಮ ಹೋರಾಟಗಾರರು ಮತ್ತು ಶ್ರೇಷ್ಠ ಸಮಾಜ ಸೇವಕರು ಹಾಗೂ ಸುಧಾರಕರು ಆಗಿದ್ದವರು. ಅಲ್ಲದೇ ಕೋಟ್ಯಾಂತರ ಯುವ ಪೀಳಿಗೆಗೆ ಮಾದರಿ ಹಾಗೂ ಪ್ರೇರಣೆಯಾಗಿದ್ದವರು. ತಮ್ಮ ವೈಯಕ್ತಿಕ ಜೀವನಕ್ಕಿಂತ ಸಮಾಜದ ಅಭಿವೃದ್ಧಿಗೆ ಶ್ರಮಿಸಿದ್ದವರು. ಜಾತಿ ವ್ಯವಸ್ಥೆ ಹಾಗೂ ಅಸ್ಪೃಶ್ಯತೆಯಂತಹ ದೊಡ್ಡ ಸಮಸ್ಯೆಗಳಿಗೆ ಪರಿಹಾರ ಹುಡುಕಲು ಕರೆ ನೀಡಿದ್ದವರು.

ಆರ್‌ಎಸ್‌ಎಸ್‌ನಂತಹ ಒಂದು ದೊಡ್ಡ ಸಂಘಟನೆಯನ್ನು ಹೆಡಗೆವಾರ್ ಕಟ್ಟಿ ನಮ್ಮ ನಾಡಿಗೆ ಕೊಡುಗೆಯಾಗಿ ನೀಡಿದ್ದಾರೆ. ಇಂತಹ ಮಹಾನ್ ವ್ಯಕ್ತಿಯು ಸ್ಥಾಪಿಸಿದ ಆರ್‌ಎಸ್‌ಎಸ್‌ನ ಕಾರ್ಯಕ್ರಮಗಳಲ್ಲಿ ಸರ್ಕಾರಿ ನೌಕರರು ಭಾಗವಹಿಸಬಾರದೆಂಬ ಈ ಹಿಂದೆ ಇದ್ದ ನಿರ್ಬಂಧವನ್ನು ತೆರವುಗೊಳಿಸಿದ ಕೇಂದ್ರ ಸರ್ಕಾರಕ್ಕೆ ತುಂಬು ಹೃದಯದ ಧನ್ಯವಾದಗಳು.

–ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.

ಕಾಂಪೌಂಡಿಗೆ ಹಾರ?



ಮಾನ್ಯರೆ,

ಇದು ಯಾರ ಸಮಾಧಿಯೂ ಅಲ್ಲ. ಗದ್ದಿಗೆಯೂ ಅಲ್ಲ! ಸನ್ಮಾನಿತರೊಬ್ಬರು ತಮ್ಮ ಅಭಿಮಾನಿಗಳು ತಮಗೆ ಅರ್ಪಿಸಿದ ಬೃಹತ್ ಹಾರವನ್ನು ಕಾಂಪೌಂಡಿಗೆ ಅರ್ಪಿಸಿ ಧನ್ಯರಾದ ರೀತಿಯಿದು.

–ಪಿ.ಜೆ.ರಾಘವೇಂದ್ರ, ನ್ಯಾಯವಾದಿ, ಮೈಸೂರು



ಡಾ. ವಿ. ರಂಗನಾಥ್
ಲೇಖಕರು ಹಾಗೂ ನಿವೃತ್ತ ತಹಸೀಲ್ದಾರರು
ಮೊ: 94482 08746/ 97421 79000

ಚಿಂತನೆ

ದುಡಿಮೆಗೂ ಇತಿ-ಮಿತಿ ಇರಬೇಕು...!!

ಇತ್ತೀಚಿಗೆ ಪತ್ರಿಕೆಗಳು ಹಾಗೂ ಇತರೆಡೆಗಳಲ್ಲಿ ಮುಖ್ಯವಾಗಿ ಚರ್ಚಿತವಾಗುತ್ತಿರುವ ವಿಷಯವೆಂದರೆ ಐಟಿ ಉದ್ಯೋಗಿಗಳು ದಿನಕ್ಕೆ 14 ಗಂಟೆ ಕೆಲಸ ಮಾಡಬೇಕು ಬಗ್ಗೆ ಕಾನೂನು ಜಾರಿಯಾಗಬೇಕೆಂಬ ವಿಷಯ. ಐಟಿ ಕಂಪನಿಗಳು ತನ್ನ ನೌಕರರು ದಿನಕ್ಕೆ 14 ಗಂಟೆಗಳು (ವಾರದ 5 ದಿನ) ಕೆಲಸ ಮಾಡಬೇಕು ಎಂಬ ಬಗ್ಗೆ ಮಾಡಿದ ಒತ್ತಾಯದ ಮೇರೆಗೆ ರಾಜ್ಯ ಸರ್ಕಾರ ಕಾನೂನು ಜಾರಿ ಮಾಡಲು ಹೊರಟಿದೆ ಎಂಬ ವಿಷಯ ಬಾರಿ ಚರ್ಚೆಗೆ ಗ್ರಾಸವಾಗಿದೆ. ಈ ಸಂಬಂಧ ಕರ್ನಾಟಕ ಅಂಗಡಿಗಳು ಮತ್ತು ವಾಣಿಜ್ಯ ಸಂಸ್ಥೆಗಳ ಕಾಯಿದೆಗೆ ತಿದ್ದುಪಡಿ ತರುವ ಬಗ್ಗೆ ಚರ್ಚೆ ನಡೆಯುತ್ತಿದೆ. ಇದು ದುಡಿಯುವ ವರ್ಗಗಳ ಮೇಲಿನ ದಾಳಿ ಎಂದು ಐಟಿ ಉದ್ಯೋಗಿಗಳ ಸಂಘಟನೆ ವಿರೋಧ ವ್ಯಕ್ತಪಡಿಸಿದೆ. ಈ ವಿಷಯ ರಾಜ್ಯ ಸಚಿವ ಸಂಪುಟದಲ್ಲೂ ಚರ್ಚೆಯಾಗಿದೆ ಎಂಬುದು ಸುದ್ದಿಯಾಗಿದೆ. ಈ ರೀತಿಯಾಗಿ ಐಟಿ ಉದ್ಯೋಗಿಗಳು ದಿನಕ್ಕೆ 14 ಗಂಟೆ ಕೆಲಸ ಮಾಡಬೇಕೆಂಬ ಕಾನೂನು ತರುವ ಬಗ್ಗೆ ಸರ್ಕಾರದ ಮೇಲೆ ಐಟಿ ಉದ್ಯಮ ಒತ್ತಡ ಹೇರುತ್ತಿದೆ ಎಂದು ರಾಜ್ಯ ಕಾರ್ಮಿಕ ಸಚಿವರು ಬಹಿರಂಗವಾಗಿಯೇ ಹೇಳಿಕೆ ನೀಡಿದ್ದಾರೆ. ಈ ಬಗ್ಗೆ ಸಂಬಂಧಿಸಿದವರೊಡನೆ ಮುಕ್ತವಾಗಿ ಚರ್ಚಿಸಿ ಸರ್ಕಾರ ಒಂದು ಸೂಕ್ತ ನಿರ್ಧಾರಕ್ಕೆ ಬರುವುದಾಗಿಯೂ ಹೇಳಿದ್ದಾರೆ.

ಈ ಹಿಂದೆ ನೌಕರರು 10 ಗಂಟೆ ಕೆಲಸ ಮಾಡಬೇಕು, ಅದರ ನಂತರವೂ ಅವರು ಕೆಲಸ ಮಾಡಿದರೆ ಅದನ್ನು ಓವರ್‌ಟೈಮ್ ಎಂದು ಪರಿಗಣಿಸಿ ಹೆಚ್ಚಿನ ಆರ್ಥಿಕ ಸೌಲಭ್ಯ ನೀಡಲಾಗುತ್ತಿತ್ತು. ಅಂದರೆ ಹಣದ ಆಸೆಗಾಗಿ ಹಾಗೂ ಕೆಲವೊಂದು ಅನಿವಾರ್ಯತೆಗಾಗಿ ಕೆಲವು ನೌಕರರು ಓವರ್‌ಟೈಮ್ ಕೆಲಸ ಮಾಡುತ್ತಿದ್ದರು. ಅಂದರೆ ಅವರು ಹತ್ತು ಗಂಟೆಗಳಿಗೂ ಮೀರಿ ಕೆಲಸ ಮಾಡಬಲ್ಲರು. ಆದ್ದರಿಂದ ಅವರಿಗೆ ಓವರ್‌ಟೈಮ್ ಸೌಲಭ್ಯ ಕೊಡದೆ 14 ಗಂಟೆ ಕೆಲಸ ಮಾಡಬೇಕೆಂಬ ಕಾಯಿದೆ ತಂದರೆ ಕಂಪನಿಗಳಿಗೆ ಅನುಕೂಲ ಎಂಬುದು ಕಂಪನಿಗಳ ಆಂತರ್ಯ ಇರುವಂತೆ ಕಂಡುಬರುತ್ತದೆ. ಈ ಕಾನೂನನ್ನು ಜಾರಿಗೆ ತರಬೇಕೆಂಬ ಉದ್ದೇಶ ಸರ್ಕಾರಕ್ಕಿಲ್ಲ. ಆದರೆ ಉದ್ಯಮ ಒತ್ತಡ ತರುತ್ತಿದೆ ಎಂದು ಸಚಿವರು ಹೇಳಿರುವುದನ್ನು ವಿಶೇಷವಾಗಿ ಗಮನಿಸಬೇಕಾಗುತ್ತದೆ. ಈ ರೀತಿ ಕಾನೂನು ಜಾರಿಯಾದರೆ ಐಟಿ ಉದ್ಯೋಗಿಗಳು ವಾರಕ್ಕೆ 70 ಗಂಟೆಗಳಿಗೂ ಮೀರಿ ಕೆಲಸ ಮಾಡಬೇಕಾಗುತ್ತದೆ. ದಿನಕ್ಕೆ 14 ಗಂಟೆ ಕೆಲಸ ಎಂದರೆ ಅದರಲ್ಲಿ ಅವರು ಕಂಪನಿಗಳಿಗೆ ಹೋಗಿ ಬರುವ ಸಮಯ ಸೇರಿಲ್ಲ. ಬೆಂಗಳೂರಿನಂತಹ ಜನ ಹಾಗೂ ವಾಹನ ದಟ್ಟಣೆವುಳ್ಳ ನಗರಗಳಲ್ಲಿ ಐಟಿ ನೌಕರರು ತಮ್ಮ ಕಾರ್ಯಸ್ಥಾನ ಕಂಪನಿ ತಲುಪಲು ಕೆಲವೊಮ್ಮೆ ಎರಡು ಗಂಟೆ ತೆಗೆದುಕೊಳ್ಳುತ್ತದೆ. ಕೆಲವು ಸಂದರ್ಭದಲ್ಲಿ ಅದು ಮತ್ತೊಂದು ಗಂಟೆಗೆ ವಿಸ್ತಾರವಾದರೂ ಆಶ್ಚರ್ಯವಿಲ್ಲ. ಅಂದರೆ ಹೋಗಿ ಬರಲು ನಾಲ್ಕೈದು ಗಂಟೆಗಳು. ಇದೂ ಸೇರಿದರೆ ಅವರು ಮನೆಯಿಂದ ಹೊರಗೆ ಸುಮಾರು 19–20 ಗಂಟೆಗಳಿರಬೇಕಾಗುತ್ತದೆ. ಇದು ಒಂದು ದಿನದ ಸರ್ಕಸ್ ಅಲ್ಲ. ಸತತವಾಗಿ ವಾರದ ಐದು ದಿನ ಹೀಗೆ ಮಾಡಬೇಕಾಗುತ್ತದೆ. ಇದನ್ನು ಗಂಭೀರವಾಗಿ ಪರಿಗಣಿಸಬೇಕಾಗುತ್ತದೆ.

ಐಟಿ ಉದ್ಯೋಗ ಎಂದರೆ ಸಾಕಷ್ಟು ಸಂಬಳ, ಸೌಲಭ್ಯಗಳಿರುತ್ತವೆ, ಎಸಿ ಕೋಣೆಯಲ್ಲಿ ಆರಾಮವಾಗಿ ಕಾಲ ಕಳೆಯುತ್ತಾರೆ. ಆದ್ದರಿಂದ ಕೆಲಸ ಮಾಡುವುದರಲ್ಲಿ ತಪ್ಪಿಲ್ಲ ಎಂದು ಆ ಕ್ಷೇತ್ರದಿಂದ ಹೊರಗಿರುವವರು ಭಾವಿಸುತ್ತಾರೆ. ಆದರೆ ತಮ್ಮ ಕೆಲಸದಿಂದ ತಾವು ಹಲವು ಸಮಸ್ಯೆಗಳನ್ನು, ಅದರಲ್ಲೂ ಆರೋಗ್ಯ ಸಮಸ್ಯೆ ಎದುರಿಸುತ್ತಿರುವುದಾಗಿ ಅಲ್ಲಿನ ನೌಕರರು ಅಳಲು ತೋಡಿಕೊಳ್ಳುತ್ತಾರೆ. ಅವರಿಗೆ ಮುಖ್ಯವಾಗಿ ಬೆನ್ನು ನೋವು,



> ಐಟಿ ಉದ್ಯೋಗ ಎಂದರೆ ಸಾಕಷ್ಟು ಸಂಬಳ, ಸೌಲಭ್ಯಗಳಿರುತ್ತವೆ, ಎಸಿ ಕೋಣೆಯಲ್ಲಿ ಆರಾಮವಾಗಿ ಕಾಲ ಕಳೆಯುತ್ತಾರೆ. ಆದ್ದರಿಂದ ಕೆಲಸ ಮಾಡುವುದರಲ್ಲಿ ತಪ್ಪಿಲ್ಲ ಎಂದು ಆ ಕ್ಷೇತ್ರದಿಂದ ಹೊರಗಿರುವವರು ಭಾವಿಸುತ್ತಾರೆ. ಆದರೆ ತಮ್ಮ ಕೆಲಸದಿಂದ ತಾವು ಹಲವು ಸಮಸ್ಯೆಗಳನ್ನು, ಅದರಲ್ಲೂ ಆರೋಗ್ಯ ಸಮಸ್ಯೆ ಎದುರಿಸುತ್ತಿರುವುದಾಗಿ ಅಲ್ಲಿನ ನೌಕರರು ಅಳಲು ತೋಡಿಕೊಳ್ಳುತ್ತಾರೆ. ಅವರಿಗೆ ಮುಖ್ಯವಾಗಿ ಬೆನ್ನು ನೋವು, ಅಸಿಡಿಟಿ, ಕಣ್ಣಿನ ಹಾಗೂ ನರಗಳಿಗೆ ಸಂಬಂಧಿಸಿದ ಸಮಸ್ಯೆ ಹೆಚ್ಚಾಗಿ ಕಾಡುತ್ತದೆ. ನಾವು ಈ ಸಮಸ್ಯೆಗಳನ್ನು ಇಟ್ಟುಕೊಂಡು ಎಷ್ಟು ವರ್ಷ ದುಡಿಯಲು ಸಾಧ್ಯ? ಕೇವಲ ಹತ್ತಿಪ್ಪತ್ತು ವರ್ಷಗಳಲ್ಲಿ ನಾವು ವಯಸ್ಸಾದವರಂತೆ ದೈಹಿಕ ಹಾಗೂ ಮಾನಸಿಕ ದೌರ್ಬಲ್ಯಕ್ಕೊಳಗಾಗುತ್ತೇವೆ ಎಂಬುದು ಅವರ ಅಳಲು.

ಅಸಿಡಿಟಿ, ಕಣ್ಣಿನ ಹಾಗೂ ನರಗಳಿಗೆ ಸಂಬಂಧಿಸಿದ ಸಮಸ್ಯೆ ಹೆಚ್ಚಾಗಿ ಕಾಡುತ್ತದೆ. ನಾವು ಈ ಸಮಸ್ಯೆಗಳನ್ನು ಇಟ್ಟುಕೊಂಡು ಎಷ್ಟು ವರ್ಷ ದುಡಿಯಲು ಸಾಧ್ಯ? ಕೇವಲ ಹತ್ತಿಪ್ಪತ್ತು ವರ್ಷಗಳಲ್ಲಿ ನಾವು ವಯಸ್ಸಾದವರಂತೆ ದೈಹಿಕ ಹಾಗೂ ಮಾನಸಿಕ ದೌರ್ಬಲ್ಯಕ್ಕೊಳಗಾಗುತ್ತೇವೆ ಎಂಬುದು ಅವರ ಅಳಲು.

ನಾವು ಗಮನಿಸುವಂತೆ ಐಟಿ ಉದ್ಯೋಗದಲ್ಲಿರುವವರು ಸಾಮಾನ್ಯವಾಗಿ ಪತಿ, ಪತ್ನಿ ಇಬ್ಬರೂ ದುಡಿಯುತ್ತಾರೆ. ಇಬ್ಬರೂ ಹೀಗೆ ಹೊರಗೆ ದುಡಿಯುವುದರಿಂದ ಅವರ ಆರ್ಥಿಕ ಸ್ಥಿತಿ ಖಂಡಿತಾ ಉತ್ತಮವಾಗಿರುತ್ತದೆ. ಆದರೆ ಆರೋಗ್ಯದ ಸಮಸ್ಯೆ ಜೊತೆಗೆ ಕೌಟುಂಬಿಕ ಜೀವನದಲ್ಲಿನ ಏರು–ಪೇರು ಅವರನ್ನು ಕಾಡುತ್ತದೆ. ಒಂದು ಅಪಾರ್ಟ್‌ಮೆಂಟ್‌ನಲ್ಲಿ ಸ್ವಚ್ಛತೆ ಕೆಲಸ ಮಾತು ನನಗಿಲ್ಲಿ ನೆನಪಿಗೆ ಬರುತ್ತದೆ. ಇವರಿಬ್ಬರೂ ಹೊರಗೆ ದುಡಿಯುತ್ತಾರೆ. ಯಾವಾಗಲೋ ಬರುತ್ತಾರೆ; ಹೋಗುತ್ತಾರೆ. ಹಾಗಾಗಿ ಅವರು ಮನೆಯಲ್ಲಿ ಸರಿಯಾಗಿ ಅಡುಗೆಯನ್ನೇ ಮಾಡುವುದಿಲ್ಲ. ಮಧ್ಯಾಹ್ನ ತಮ್ಮ ಕಂಪನಿ (ಕ್ಯಾಂಟಿನ್)ಗಳಲ್ಲೇ ತಿನ್ನುವ ಇವರು, ರಾತ್ರಿ ಹೋಟೆಲಿಂದ ಆಹಾರ ತರಿಸಿಕೊಳ್ಳುತ್ತಾರೆ. ಶನಿವಾರ ಹಾಗೂ ಭಾನುವಾರ ಅವರು ವಿಶ್ರಾಂತಿಯ ನೆಪದಲ್ಲಿ ಇಡೀ ದಿನ ಮಲಗಿರುತ್ತಾರೆ (ಅರ್ಥಾತ್ ಬಿದ್ದು ಕೊಂಡಿರುತ್ತಾರೆ!) ಆಗಲೂ ಅಡುಗೆ ಮಾಡುವುದಿಲ್ಲ. ಆ ದಿನಗಳಲ್ಲಿ ಎರಡು ಹೊತ್ತಿಗೂ (ಮತ್ತು ತಿಂಡಿಗೂ) ಅವರು ಹೋಟೆಲ್‌ಗಳನ್ನೆ ಅವಲಂಬಿಸುತ್ತಾರೆ. ಹಾಗಾಗಿ ನಮಗೆ ವಾರದ ಕೆಲಸದ ದಿನಗಳಿಗಿಂತ ರಜಾ ದಿನದ ನಂತರದ ದಿನ ಕ್ಲೀನ್ ಮಾಡುವುದು ಬಹಳ ತ್ರಾಸದಾಯಕ. ಅಂತಹ ದಿನಗಳಲ್ಲಿ ಎರಡು ಪಟ್ಟು ಕಸ ಹೊರಬಂದಿರುತ್ತದೆ ಎಂದು ಬೇಸರದಿಂದಲೇ ಹೇಳಿದರು. ಇದೂ ನಿಜವೇ. ಈ ಕೆಲಸದಲ್ಲಿ ದೈಹಿಕ ಶ್ರಮಕ್ಕಿಂತ ಮಾನಸಿಕ ಶ್ರಮ ಹೆಚ್ಚಾಗಿರುತ್ತದೆ. ದೈಹಿಕ ಶ್ರಮ ಒಂದು ನಿದ್ರೆಗೆ ಸರಿಹೋಗಬಹುದು. ಆದರೆ ಮಾನಸಿಕ ಶ್ರಮ ಆರೋಗ್ಯಕ್ಕೆ ಹಾನಿ ಉಂಟುಮಾಡದೇ ಇರದು. ಒಟ್ಟಾರೇ ಐಟಿ ಕೆಲಸಗಾರರದ್ದು, ಡಿಜಿಟಲ್ ಜೀವನ ಎಂದರೂ ತಪ್ಪಲ್ಲ ಅಲ್ಲವೇ!?.

ನಾವು ಮುಖ್ಯವಾಗಿ ದುಡಿಯುವುದು ಜೀವನ ನಿರ್ವಹಣೆಗಾಗಿ ಎಂದು ಹೇಳುತ್ತೇವೆ. ಅದನ್ನು ಷಾರ್ಟಾಗಿ, ಸ್ವಾರಸ್ಯಕರವಾಗಿ ಹೊಟ್ಟೆಗಾಗಿ, ಗೇಣು ಬಟ್ಟೆಗಾಗಿ ಎಂದೂ ಹೇಳುತ್ತೇವೆ ಎಂದರೂ ತಪ್ಪಲ್ಲ ಅಲ್ಲವೇ!? ಇವೆರಡನ್ನು ಪೂರೈಸಲು ಇಷ್ಟು ಶ್ರಮ ಪಡಬೇಕೆ? ಎಂಬ ಪ್ರಶ್ನೆಯೂ ಉದ್ಭವಿಸುತ್ತದೆ. ಆದರೆ ನಮಗೆ ಕೆಲಸದ ಹೊರತಾದ ಜೀವನವೂ ಇರುತ್ತದೆ ಎಂಬುದನ್ನು ಮರೆಯಬಾರದು. ಕೆಲಸ ಮಾಡಿದ ನಂತರ, ದೇಹ ಮತ್ತು ಮನಸ್ಸು ನಿರಾಳಗೊಳ್ಳಲು ಒಂದಷ್ಟು ವಿಶ್ರಾಂತಿ ಹಾಗೂ ಮನರಂಜನೆ ಬೇಕಾಗುತ್ತದೆ. ದುಡಿದಿದ್ದನ್ನು ಧಕ್ಕಿಸಿಕೊಂಡು ನಮ್ಮ ಹಿತ ಸಾಧನೆ ಮಾಡಿಕೊಳ್ಳದಿದ್ದರೆ ಅಂತಹ ದುಡಿತವಾದರೂ ಏಕೆ ಬೇಕು? ಎಂಬ ಪ್ರಶ್ನೆಯೂ ಉದ್ಭವಿಸುತ್ತದೆ. ಇಲ್ಲದೇ ಹೋದಲ್ಲಿ ಹಣಕ್ಕಾಗಿ ಆಯಸ್ಸನ್ನೇ ಖರ್ಚು ಮಾಡಿದಂತೆ ಅಲ್ಲವೇ? ದುಡಿಯುವ ಹಂತದಲ್ಲಿಯೇ ಬದುಕಿನ ಸೊಬಗನ್ನೂ ಕಾಣಬೇಕು. ಆನಂತರ ಎಷ್ಟೇ ಹಣವಿದ್ದರೂ, ಆಯಸ್ಸು ಮೀರಿ, ಅನಾರೋಗ್ಯಕ್ಕೆ ತುತ್ತಾದರೆ, ಆ ಹಣವನ್ನು ತಮ್ಮ ಸಂತಸಕ್ಕಿಂತ ಆರೋಗ್ಯ ಸುಧಾರಣೆಗೆ ಖರ್ಚು ಮಾಡಬೇಕಾಗುತ್ತದೆ. ಒಮ್ಮೆ ಅನಾರೋಗ್ಯಕ್ಕೀಡಾದ ದೇಹ ಮತ್ತೆ ಮೊದಲಿನಂತೆ ಆಗುವುದು ಕಷ್ಟದ ವಿಚಾರವೇ. ಈ ವಿವೇಚನೆ ಇರಬೇಕಲ್ಲವೇ?

ಇರಲಿ, ಈಗ ನಮ್ಮಲ್ಲಿ ಉತ್ತಮವಾದ ಹೋಟೆಲ್‌ಗಳನ್ನು ನೋಡಿದ್ದೇವೆ. ಅವರು ಬಾಗಿಲು ತೆರೆಯುವುದೇ ತಡ, ಗ್ರಾಹಕರು ಬರುತ್ತಿರುತ್ತಾರೆ. ಆದರೆ ಅವರು ಒಂದು ನಿರ್ದಿಷ್ಟ ಸಮಯದ ನಂತರ ಹೋಟೆಲನ್ನು ಮುಚ್ಚುತ್ತಾರೆ. ಕೆಲವು ಹೋಟೆಲ್‌ಗಳು ಬೆಳಗ್ಗೆ ಮತ್ತು ಸಂಜೆ ಮಾತ್ರ ತೆರೆದರೆ, ಮತ್ತೆ ಕೆಲವು ಕೇವಲ ಬೆಳಗಿನ ತಿಂಡಿಗೆ ಮಾತ್ರ ಸೀಮಿತವಾಗಿರುತ್ತವೆ. ಒಂದು ವೇಳೆ ಅವರು ಇಡೀ ದಿನ ಹೋಟೆಲ್ ತೆರೆದರೂ ಜನ ಬರುತ್ತಾರೆ. ಆದರೆ ಅವರು ಹಾಗೆ ಮಾಡುವುದಿಲ್ಲ. ಅದರ ಮಾಲೀಕರನ್ನು ಕೇಳಿದರೆ, ಇಷ್ಟು ದುಡಿಮೆ ನಮಗೆ ಸಾಕು. ಹೋಟೆಲ್ ಬಾಗಿಲು ಹಾಕಿದ ನಂತರ ನಾವು ನಮ್ಮ ಕುಟುಂಬ ಸದಸ್ಯರೊಂದಿಗೆ ಕಾಲ ಕಳೆಯುತ್ತೇವೆ. ನಮ್ಮ ಕೆಲಸಗಾರರೂ ಹಾಗೇ ಇರಬೇಕೆಂದು ನಾವು ಬಯಸುತ್ತೇವೆ. ದುಡಿಮೆಗಾಗಿಯೇ ನಮ್ಮ ಜೀವನವಲ್ಲ. ಆದರೆ ಬದುಕಿಗಾಗಷ್ಟೇ ನಾವು ದುಡಿಯುವುದು ಎಂಬುದು ಅವರ ವ್ಯಾಖ್ಯಾನ. ಇಂತಹವರಿಗೆ ದುಡಿಮೆಯೊಂದಿಗೆ ಜೀವನ ಹೇಗೆ ಮಾಡಬೇಕು ಎಂಬುದು ತಿಳಿದಿರುತ್ತದೆ. ಅವರು ಸಂಪಾದನೆಯನ್ನೂ ಮಾಡುತ್ತಾರೆ, ಖರ್ಚೂ ಮಾಡುತ್ತಾರೆ, ಸಂತಸದಿಂದ ಜೀವನ ಸಾಗಿಸುತ್ತಾರೆ. ಇದು ಬಹುತೇಕ ಉದ್ಯಮ, ವ್ಯವಹಾರದಲ್ಲೂ ಕಾಣುತ್ತೇವೆ. ಅವರು ಏನೇ ಮಾಡಿದರೂ ಅದಕ್ಕೊಂದು ಸಮಯ ಅಂತಾ ಇರುತ್ತದೆ. ಶಿವ ಕೊಟ್ಟಿದ್ದರಲ್ಲೇ ತೃಪ್ತರಾಗಿ ಜೀವಿಸುತ್ತೇವೆ ಎನ್ನುವ ಧೋರಣೆ ಯಲ್ಲಿ ಜೀವನದ ಅರ್ಥವಿದೆ. ಇದು ನಮಗೆ ಆದರ್ಶವಾಗಬೇಕು.

ಅತಿಯಾಸೆ ಗತಿಗೇಡು..., ಮಾಡಿದ್ದುಣ್ಣೋ ಮಹರಾಯಾ... ಅಪರಿಮಿತ ಅಹಿತ, ಮಿತ ಹಿತಕಾರಿ ಎಂಬಿವೇ ಗಾದೆ, ಲೋಕರೂಢಿ ಮಾತುಗಳು ಜೀವನದ ಸಾರ್ಥಕತೆಯನ್ನು ಸಾರುತ್ತವೆ. ಆದರೆ ನಾವು ಮಾತ್ರ ಯಾವುದನ್ನು ಲೆಕ್ಕಿಸದೇ ಮುಂದೆ ಸಾಗಿ, ಸಂಕಷ್ಟಕ್ಕೀಡಾದಾಗ ಸಾವರಿಸಿಕೊಳ್ಳಲಾಗಿದೇ ಸಂಕಷ್ಟಪಡುತ್ತೇವೆ.

ಇಲ್ಲೆಲ್ಲಾ ಪ್ರಶ್ನೆ ಉದ್ಭವಿಸುವುದು ಜೀವನ ಎಂದರೆ ಕೇವಲ ದುಡಿಮೆ ಮಾತ್ರವೇ? ಅದಕ್ಕೂ ಮೀರಿದ ಒಂದು ಜೀವನ ಇಲ್ಲವೇ? ದುಡಿಯುವ ದೇಹಕ್ಕೆ ಒಂದಷ್ಟು ವಿಶ್ರಾಂತಿ ಹಾಗೂ ಮನರಂಜನೆ ಬೇಡವೇ? ಬದುಕಿರುವಷ್ಟೂ ಕಾಲವೂ ದುಡಿಯುತ್ತಾ ಹೋದರೆ, ಅದನ್ನು ಜೀವನ ಎಂದು ಕರೆಯಬಹುದೇ?

ಈ ಹಿಂದೆ ಅನೇಕ ಅವಲೋಕನಗಳು ದಿನಕ್ಕೆ ಆರು ಅಥವಾ ಎಂಟು ಗಂಟೆಗಳಷ್ಟು ಮಾತ್ರ ದುಡಿಮೆ ಮಾಡಬಹುದಾದ ಸಮಯ ಎಂದು ಹೇಳಿವೆ. ಹಾಗಾಗಿ ಸರ್ಕಾರಿ ಕಚೇರಿಗಳು ಬೆಳಿಗ್ಗೆ 10ರಿಂದ 5.30ರವರೆಗೆ ಮಾತ್ರ ಕೆಲಸ ನಿರ್ವಹಿಸುತ್ತವೆ. ಇದರ ನಡುವೆ ಊಟಕ್ಕೆ ಎಂದು ಅರ್ಧ, ಮುಕ್ಕಾಲು ಗಂಟೆಯ ವಿರಾಮವನ್ನೂ ನೀಡಲಾಗುತ್ತದೆ. ಅಂದರೆ ಕೆಲಸ ಮಾಡುವ ಸಮಯ ಸುಮಾರು ಆರರಿಂದ ಏಳು ಗಂಟೆ ಮಾತ್ರ. ಅದಕ್ಕಿಂತ ಹೆಚ್ಚಾಗಿ ಕಚೇರಿಯಲ್ಲಿರಬೇಕೆಂದರೆ ಅವರಲ್ಲಿ ಉತ್ಸಾಹ ಇರುವುದಿಲ್ಲ. ಬಲವಂತಕ್ಕೆ ಕೂತಿರಬಹುದೇ ಹೊರತು ಅವರಿಂದ ಹೆಚ್ಚುವರಿ ಕೆಲಸ ಆಗುವುದಿಲ್ಲ, ಹಾಗೂ ಬಲವಂತವಾಗಿ ಕೆಲಸ ಮಾಡಬೇಕೆಂದರೆ ಹೆಚ್ಚು ತಪ್ಪುಗಳಾಗುತ್ತವೆ. ಅಂತಹ ಸಮಯದಲ್ಲಿ ಹೋಗಲಿ, ಬೆಳಿಗ್ಗೆ ಬಂದು ಸರಿಪಡಿಸು ಎಂದು ಹೇಳಿ ಅವರನ್ನು ಮನೆಗೆ ಕಳುಹಿಸಬೇಕಾಗುತ್ತದೆ.

ನಮ್ಮಲ್ಲಿ ಕೆಲವರಿಗೆ ಮನೆಗಿಂತ ಹೊರಗಿರುವುದು ಇಷ್ಟ. ಅದಕ್ಕೆ ನಾನಾ ಕಾರಣಗಳಿರಬಹುದು. ಇತರೆ ಹವ್ಯಾಸಗಳಿಲ್ಲದಿದ್ದರೆ, ಕಚೇರಿ ಮುಗಿದ ನಂತರವೂ ಕಚೇರಿಯಲ್ಲಿ ಕಾಲ ಕಳೆಯಲು ಬಯಸಬಹುದು. ಆದರೆ ಇದು ಆದರ್ಶವಲ್ಲ. ನಾವು ಸಂತೋಷಪಡಬಹುದಾದ ಹೆಚ್ಚಿನ ಅವಕಾಶಗಳನ್ನು ಮನೆಯವರೊಡನೆ ಇಟ್ಟುಕೊಂಡರೆ ಒಳಿತು. ಅಂತಹವರು ಇಡೀ ಜೀವನ ಚಟುವಟಿಕೆಯಿಂದ ಕೂಡಿರುತ್ತಾರೆ.

ಆದರೆ ಒಂದು ವಿಷಯ ಗಮನಿಸಬಹುದು. ದುಡಿಮೆಯ ನಂತರ ನಮಗೆ ಮನರಂಜನೆ ಮುಖ್ಯ ಎಂದು ಮನೆಗೆ ಹೋಗಿ ಟಿವಿ ಹಾಕಿಕೊಂಡು ಕೂರುವುದು, ಬೇಕುಬೇಕಾದ ಧಾರಾವಾಹಿ ನೋಡುವುದು ಮನರಂಜನೆ ಎನ್ನಿಸುವುದಿಲ್ಲ. ಬದಲಾಗಿ ಮಕ್ಕಳಿದ್ದರೆ ಅವರೊಡನೆ ಕಾಲ ಕಳೆಯುವುದು, ಮನೆಯವರೊಡನೆ ಬೆರೆಯುವುದು, ಉತ್ತಮ ಹವ್ಯಾಸ.

ಕೆಲಸದ ಜೊತೆಗೆ ವಿಶ್ರಾಂತಿ ಹಾಗೂ ದುಡಿದಿದ್ದನ್ನು ನಮಗಾಗಿ ಉಪಯೋಗಿಸಿಕೊಳ್ಳುವುದು ಬುದ್ಧಿವಂತಿಕೆ ಎನ್ನಿಸಿಕೊಳ್ಳುತ್ತದೆ. ಈ ದಿಸೆಯಲ್ಲಿ 14 ಗಂಟೆಗಳ ಕೆಲಸ ಎಂಬುದು ಮನುಷ್ಯತ್ವದ ವಿರುದ್ಧವಾದ ನಡೆ ಎಂಬುದು ಹಲವರ ವಾದ.

ಬ್ಯಾಕ್‌ಲಾಗ್ ಹುದ್ದೆ ಭರ್ತಿಗೆ ಆಗ್ರಹಿಸಿ ದಸಂಸ ಪ್ರತಿಭಟನೆ



ಹೊರಗುತ್ತಿಗೆ ಪದ್ಧತಿ ರದ್ದುಗೊಳಿಸಿ ಬ್ಯಾಕ್‌ಲಾಗ್ ಹುದ್ದೆ ಭರ್ತಿ ಸೇರಿದಂತೆ ಹಲವು ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ದಲಿತ ಸಂಘರ್ಷ ಸಮಿತಿಯವರು ಮೈಸೂರಿನ ಪುರಭವನದ ಮುಂದೆ ಬುಧವಾರ ಡಾ.ಅಂಬೇಡ್ಕರ್ ಪ್ರತಿಮೆ ಬಳಿ ಪ್ರತಿಭಟನೆ ನಡೆಸಿದರು.

ಮೈಸೂರು, ಜು.24(ಬಿಎಲ್‌ಯು)– ಹೊರಗುತ್ತಿಗೆ ಪದ್ಧತಿ ರದ್ದುಗೊಳಿಸಿ ಬ್ಯಾಕ್‌ಲಾಗ್ ಹುದ್ದೆ ಭರ್ತಿ ಸೇರಿದಂತೆ ಹಲವು ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ದಲಿತ ಸಂಘರ್ಷ ಸಮಿತಿಯವರು ಮೈಸೂರಿನ ಪುರಭವನದ ಮುಂದೆ, ಡಾ. ಬಿ.ಆರ್.ಅಂಬೇಡ್ಕರ್ ಪ್ರತಿಮೆ ಬಳಿ ಇಂದು ಪ್ರತಿಭಟನೆ ನಡೆಸಿದರು.

ಸಮಾಜ ಕಲ್ಯಾಣ ಇಲಾಖೆಯ ಕೆಲವು ಯೋಜನೆಗಳನ್ನು ಕಡಿತಗೊಳಿಸಿ ದಲಿತರನ್ನು ವಂಚಿಸುತ್ತಿರುವ ರಾಜ್ಯ ಸರ್ಕಾರದ ದಲಿತ ವಿರೋಧಿ ನೀತಿ ವಿರುದ್ಧ ಈ ವೇಳೆ ಕಿಡಿ ಕಾರಿದರು. ಎಸ್‌ಸಿಪಿ, ಟಿಎಸ್‌ಪಿ ಹಣ ದುರ್ಬಳಕೆಗೆ ಸಹಕರಿಸುತ್ತಿರುವ ಜನ ಪ್ರತಿನಿಧಿಗಳ ಸದಸ್ಯತ್ವ ರದ್ದು ಮಾಡಬೇಕು, ವಾಲ್ಮೀಕಿ ನಿಗಮದಲ್ಲಿ ಲೂಟಿ ಮಾಡಿರುವ ಅಧಿಕಾರಿಗಳ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಬೇಕು ಎಂದು ಸರ್ಕಾರವನ್ನು ಆಗ್ರಹಿಸಿದರು. ದಲಿತ ಸಂಘರ್ಷ ಸಮಿತಿಯ ಚೋರನಹಳ್ಳಿ ಶಿವಣ್ಣ, ಕೆ.ವಿ. ದೇವೇಂದ್ರ, ಕಿರಂಗೂರು ಸ್ವಾಮಿ, ಹಾರೋಹಳ್ಳಿ ನಟರಾಜ್, ಶಂಕರಪುರ ಶಿವಮೂರ್ತಿ, ವರುಣ ಮಹೇಶ್, ಬಿಳಿಕೆರೆ ದೇವರಾಜ್ ಇತರರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಜು.27ಕ್ಕೆ ಚಾಮುಂಡೇಶ್ವರಿ ವರ್ಧಂತಿ




ಮೈಸೂರು, ಜು.24– ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಜುಲೈ 27ರಂದು ಬೆಳಗ್ಗೆ 9.30ಕ್ಕೆ ಶ್ರೀ ಚಾಮುಂಡೇಶ್ವರಿ ಅಮ್ಮನವರ ವರ್ಧಂತಿ ಮಹೋತ್ಸವವನ್ನು ಏರ್ಪಡಿಸಲಾಗಿದೆ. ಚಾಮುಂಡಿಬೆಟ್ಟಕ್ಕೆ ಆಗಮಿಸುವ ಭಕ್ತಾದಿಗಳಿಗೆ ಬೆಳಗ್ಗೆ 8 ಗಂಟೆಯಿಂದ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿದ್ದು, 9.30ಕ್ಕೆ ಮಹಾಮಂಗಳಾರತಿ ನಡೆಯಲಿದೆ. ಬೆಳಗ್ಗೆ 10.30ಕ್ಕೆ ಅಮ್ಮನವರಿಗೆ ಚಿನ್ನದ ಪಲ್ಲಕ್ಕಿ ಉತ್ಸವ, ಮಂಟಪೋತ್ಸವ ಪ್ರಸಾದ ವಿನಿಯೋಗ ಮಾಡಲಿದ್ದು, ರಾತ್ರಿ 8.30ಕ್ಕೆ ಶ್ರೀಯವರಿಗೆ ಉತ್ಸವ ಫಲಪೂಜೆ, ದರ್ಬಾರ್ ಉತ್ಸವ, ಮಂಟಪೋತ್ಸವ ಹಾಗೂ ರಾಷ್ಟ್ರಶೀರ್ವಾದ ಜರುಗಲಿದೆ. ಮಹೋತ್ಸವದಲ್ಲಿ ಹಿಂದೂ ಧಾರ್ಮಿಕ ಸಂಸ್ಥೆಗಳು ಹಾಗೂ ಧರ್ಮದಾಯ ದತ್ತಿಗಳ ಇಲಾಖೆ ಆಯುಕ್ತ ಎಚ್.ಬಸವ ರಾಜೇಂದ್ರ, ಜಿಲ್ಲಾಧಿಕಾರಿ ಲಕ್ಷ್ಮಿಕಾಂತ ರೆಡ್ಡಿ, ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ರೂಪಾ ಎಂ.ಜೆ ಹಾಗೂ ಆಗಮಿಕರಾದ ಡಾ.ಎನ್.ಶಶಿಶೇಖರ ದೀಕ್ಷಿತ್ ಪಾಲ್ಗೊಳ್ಳಲಿದ್ದಾರೆ.

'ಬೆದರಿಸುವಿಕೆ–ಸೈಬರ್ ಬೆದರಿಸುವಿಕೆ' ಕಾರ್ಯಾಗಾರ

ಮೈಸೂರು,ಜು.24–NCPCR ವತಿಯಿಂದ ಮೈಸೂರಿನ ಸರ್ಕಾರಿ ಶಿಕ್ಷಣ ಶಿಕ್ಷಕ ಮಹಾವಿದ್ಯಾಲಯದಲ್ಲಿ ಬೆದರಿಸುವಿಕೆ ಮತ್ತು ಸೈಬರ್ ಬೆದರಿಸುವಿಕೆ ವಿಷಯ ಕುರಿತು ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿತ್ತು. ಕಾರ್ಯಾಗಾರದಲ್ಲಿ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ಮಂಜು, ಪ್ರಾಂಶುಪಾಲರು ಹಾಗೂ ಸಹ ನಿರ್ದೇಶಕರಾದ ಗೀತಾಂಬ, ಉಪ ನಿರ್ದೇಶಕ (ಆಡಳಿತ) ಜವರೇಗೌಡ, DCPO ಯ ಯೋಗೇಶ್, ಸಂಪನ್ಮೂಲ ವ್ಯಕ್ತಿಗಳಾದ ಡಾ.ವಿನಿಷ್ಯ ಫಿಲ್ಲಿಪ್, ಡಾ.ಋಷಿ ತಮನ್ನಾ, ಪ್ರಸನ್ನ ಕುಮಾರ್, ACWPO, EO ಆದ ನಿರೂಪ ವೆಸ್ಲಿ, DYPC ನ ಶೋಭಾ, APCS ಸುರೇಶ್, ವೆಂಕಟಾಚಲ DIERT ಕಾಲೇಜಿನ ರುಕ್ಮಾಂಗದ, ನೋಡೆಲ್ ಆಫೀಸರ್ ಪುಷ್ಪಲತ, ಜಿಲ್ಲೆಯ ಸರ್ಕಾರಿ ಅನುದಾನಿತ–ಅನುದಾನರಹಿತ ಪ್ರೌಢಶಾಲೆ ಮುಖ್ಯ ಶಿಕ್ಷಕರು ಹಾಗೂ ಸಹ ಶಿಕ್ಷಕರು, ಡಯಟ್ ಉಪನ್ಯಾಸಕರು ಭಾಗವಹಿಸಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಜು.27, ವಿಶ್ವಕವಿ ಶ್ರೀ ಕುವೆಂಪು ಚಿತಾಭಸ್ಮ ಸ್ಮಾರಕ ಭವನ ನಿರ್ಮಾಣಕ್ಕೆ ಶಂಕುಸ್ಥಾಪನೆ



ಮೈಸೂರು, ಜು.24– ಮೈಸೂರು ಜಿಲ್ಲಾಡಳಿತ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಜುಲೈ 27 ರಂದು ಮಧ್ಯಾಹ್ನ 1 ಗಂಟೆಗೆ ಟಿ.ನರಸೀಪುರ ತಾಲೂಕಿನ ಯಾಚೇನಹಳ್ಳಿಯ ವಿವೇಕಾನಂದನಗರದ ಶ್ರೀ ರಾಮಕೃಷ್ಣ ಸೇವಾ ಕೇಂದ್ರದಲ್ಲಿ 'ವಿಶ್ವಕವಿ ಶ್ರೀ ಕುವೆಂಪು ಚಿತಾಭಸ್ಮ ಸ್ಮಾರಕ ಭವನ' ಶಂಕುಸ್ಥಾಪನಾ ಸಮಾರಂಭವನ್ನು ಆಯೋಜಿಸಲಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಕ್ಕು ಮತ್ತು ಬೃಹತ್ ಕೈಗಾರಿಕಾ ಕೇಂದ್ರ ಸಚಿವ ಎಚ್.ಡಿ ಕುಮಾರಸ್ವಾಮಿ ಉಪಸ್ಥಿತಿಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವರು ಮತ್ತು ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅಧ್ಯಕ್ಷತೆ ವಹಿಸಿ, ಉದ್ಘಾಟಿಸಲಿದ್ದಾರೆ.

ಕನ್ನಡ ಮತ್ತು ಸಂಸ್ಕೃತಿ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸಚಿವ ಶಿವರಾಜ ಎಸ್.ತಂಗಡಗಿ, ಪಶು ಸಂಗೋಪನೆ ಮತ್ತು ರೇಷ್ಮೆ ಇಲಾಖೆ ಸಚಿವ ಕೆ.ವೆಂಕಟೇಶ್, ಅರಣ್ಯ ವಸತಿ ಮತ್ತು ವಿಹಾರ ಧಾಮಗಳ ನಿಗಮದ ಅಧ್ಯಕ್ಷರು ಹಾಗೂ ಹೆಚ್.ಡಿ ಕೋಟೆ ಶಾಸಕ ಅನಿಲ್‌ಕುಮಾರ್ ಸಿ, ಚಾಮುಂಡೇಶ್ವರಿ ವಿದ್ಯುತ್ ನಿಗಮ ನಿಯಮಿತದ ಅಧ್ಯಕ್ಷ ಎ.ಬಿ ರಮೇಶ್ ಬಂಡಿ ಸಿದ್ದೇಗೌಡ ಹಾಗೂ ಕರ್ನಾಟಕ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷೆ ಡಾ.ಪುಷ್ಪ ಅಮರನಾಥ್ ಗೌರವ ಉಪಸ್ಥಿತರಿರಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಸಂಸದರಾದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಹಾಗೂ ಸುನಿಲ್ ಬೋಸ್ ಆಗಮಿಸಲಿದ್ದಾರೆ. ಶಾಸಕರಾದ ತನ್ವೀರ್ ಸೇಠ್, ಜಿ.ಟಿ.ದೇವೇಗೌಡ, ರವಿಶಂಕರ್ ಡಿ, ಟಿ.ಎಸ್ ಶ್ರೀವತ್ಸ, ಜಿ.ಡಿ ಹರೀಶ್ ಗೌಡ, ದರ್ಶನ್ ಧ್ರುವನಾರಾಯಣ್, ಕೆ.ಹರೀಶ್‌ಗೌಡ, ವಿಧಾನಪರಿಷತ್‌ನ ಸದಸ್ಯರಾದ ಹೆಚ್.ವಿಶ್ವನಾಥ್, ಡಾ.ಡಿ.ತಿಮ್ಮಯ್ಯ, ಸಿ.ಎನ್.ಮಂಜೇಗೌಡ, ಮಧು ಜಿ.ಮಾದೇಗೌಡ, ಯತೀಂದ್ರ.ಎಸ್, ವಿವೇಕಾನಂದ.ಎಸ್, ಯಾಚೇನಹಳ್ಳಿ ಗ್ರಾಪಂ ಅಧ್ಯಕ್ಷ ಶಿವಕುಮಾರ್ ವೈ.ಸಿ., ಸದಸ್ಯರಾದ ಶೇಖರ್ ವೈ.ಎಸ್., ಮತ್ತು ಸರೋಜಮ್ಮ ಸಮಾರಂಭದ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ.

10 ದಿನಗಳ ಒಳಗಾಗಿ ಗೃಹಲಕ್ಷ್ಮಿ 2 ತಿಂಗಳ ಹಣ ಪಾವತಿ

ಬೆಂಗಳೂರು: ಕರ್ನಾಟಕ ಕಾಂಗ್ರೆಸ್ ಸರ್ಕಾರದ ಜನಪ್ರಿಯ ಗ್ಯಾರಂಟಿ ಯೋಜನೆಗಳಲ್ಲಿ ಒಂದಾದ ಗೃಹಲಕ್ಷ್ಮಿ ಯೋಜನೆಯ 2 ತಿಂಗಳ ಹಣವನ್ನು ಇನ್ನು 10 ದಿನಗಳ ಒಳಗಾಗಿ ಖಾತೆಗೆ ಹಾಕಲಾಗುತ್ತದೆ ಎಂದು ಮಹಿಳಾ ಹಾಗೂ ಮಕ್ಕಳ ಕಲ್ಯಾಣ ಇಲಾಖೆ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಹೇಳಿದ್ದಾರೆ.



ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಲಕ್ಷ್ಮೀ ಹೆಬ್ಬಾಳ್ಕರ್, ಮೇ ತಿಂಗಳಲ್ಲಿ ಖಾತೆಗೆ ಹಣ ಹಾಕಿದ್ದೇವೆ. ತಾಂತ್ರಿಕ ದೋಷದಿಂದ ಜೂನ್ ಮತ್ತು ಜುಲೈ 2 ತಿಂಗಳ ಹಣ ಬಾಕಿ ಉಳಿದಿದೆ. ಈಗಾಗಲೇ ಡಿಬಿಟಿ ತಾಂತ್ರಿಕ ಕಾರ್ಯಗಳು ನಡೆಯುತ್ತಿವೆ. ಇನ್ನು 8 ರಿಂದ 10 ದಿನಗಳಲ್ಲಿ ಹಣವನ್ನು ಖಾತೆಗೆ ಜಮಾ ಮಾಡಲಾಗುತ್ತದೆ ಎಂದು ಹೇಳಿದರು. ಯಾವುದೇ ಕಾರಣಕ್ಕೂ ಯೋಜನೆ ಸ್ಥಗಿತವಿಲ್ಲ: ಇದೇ ವೇಳೆ ಸರ್ಕಾರ ಗೃಹಲಕ್ಷ್ಮಿ ಯೋಜನೆಯನ್ನು ಸ್ಥಗಿತಗೊಳಿಸಿದೆ ಎಂಬ ಊಹಾಪೋಹಗಳಿಗೂ ತೆರೆ ಎಳೆದಿರುವ ಸಚಿವರು, ಯಾವುದೇ ಕಾರಣಕ್ಕೂ ಯೋಜನೆ ಸ್ಥಗಿತ ಮಾಡುವುದಿಲ್ಲ. ಇದು ರಾಜ್ಯದ ಮಹಿಳೆಯರ ಅರ್ಥಿಕ ಸಬಲೀಕರಣಕ್ಕಾಗಿ ಜಾರಿಗೆ ತರಲಾಗಿದೆ. ಚುನಾವಣಾ ಪೂರ್ವದಲ್ಲಿ ರಾಜ್ಯದ ಜನತೆಗೆ ಕೊಟ್ಟ ಮಾತಿನಂತೆ ನಾವು ಎಲ್ಲ ಯೋಜನೆಗಳನ್ನು ಮುಂದುವರೆಸಿಕೊಂಡು ಹೋಗುತ್ತೇವೆ ಎಂದು ಹೇಳಿದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 2496522/23

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8880558064

HOUSE FOR SALE
20X30 East Facing Duplex Srirampura 3rd Stage, Near Devaiahna Hundi, Mysore
9738785350
Brokers Excuse

HOUSE FOR SALE ಮನೆ ಮಾರಾಟಕ್ಕಿದೆ
30x40 ಅಳತೆಯ ನಿರ್ಮಿಸಿರುವ ಸುಂದರವಾದ ಮನೆ ಚಾಮುಂಡೇಶ್ವರಿ ರೈಲ್ವೆ ಲೇಔಟ್ (KRS ಮುಖ್ಯರಸ್ತೆ)ನಲ್ಲಿ ಮಾರಾಟಕ್ಕಿದೆ. ಕಾವೇರಿ ನೀರಿನ ಸೌಲಭ್ಯ ಹಾಗೂ Best Location Just 3 kms from Gokulam.
9591519559

ಶ್ರೀ ಗೌರೀಶಂಕರ ಟೂರಿಸ್ಟ್
18–8–24 (1 ದಿನ): ಘಾಟಿ ಸುಬ್ರಮಣ್ಯ, ಇಶಾ ಫೌಂಡೇಷನ್, ಕೋಟಿಲಿಂಗ.
14–9–2024 ಮತ್ತು 4–10–24 (6 ದಿನ): ಕಾಶಿ, ಅಯೋಧ್ಯೆ, ಪ್ರಯಾಗ್‌ರಾಜ್, ಗಯಾ.
17–10–24 (7 ದಿನ): ದೆಹಲಿ, ಆಗ್ರಾ, ಕಾಶಿ, ಅಯೋಧ್ಯೆ, ಗಯಾ, ಇತ್ಯಾದಿ.
(ವಿಮಾನ, ಬಸ್, ಊಟ, ರೂಂ)
Mob: 9620002114

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 6360485921

ಸುವರ್ಣ ಯಾತ್ರ
ಕಾಶಿ ವಿಶ್ವನಾಥ ಅಯೋಧ್ಯ, ಬಾಬಾ ವೈದ್ಯನಾಥ್ ಪ್ರವಾಸ 1/8/24. 7 ದಿನಗಳು ಚಾರ್ ಧಾಮ್ ಯಾತ್ರ ಕೇದಾರ್ ನಾಥ್ ಬದ್ರಿನಾಥ್ ಯಮುನೋತ್ರಿ ಗಂಗೋತ್ರಿ 15/9/24 13 ದಿನಗಳು
8660233673
9019462508



Solar Water Heater SALES & SERVICE
BAJAJ FINSERV
SUNZONE SOLAR SYSTEM
VM Double Road, Kuvempunagar, Mysuru
9845175443

MUDA Approved Site SAPTHAMATRUKA
30x40
Rs. 20 Lakhs
Mob: 8884138884

SBI LIFE
Full Time / Part Time
ಖಾಯಂ ಉದ್ಯೋಗಾವಕಾಶ
ಗೃಹಿಣಿಯರು, ಆರ್.ಡಿ.ಏಜೆಂಟ್, ಪಿಗ್ಮಿ ಕಲೆಕ್ಟರ್ ರಿಯಲ್ ಎಸ್ಟೇಟ್ ಏಜೆಂಟ್ ನಿವೃತ್ತ ಸರ್ಕಾರಿ ಅಥವಾ ಖಾಸಗಿ ಕಂಪನಿ ಉದ್ಯೋಗಿಗಳು ಸಂಪರ್ಕಿಸಬಹುದು.
QUA: PUC & Above
ವಯಸ್ಸು: 25 ರಿಂದ 65 ವರೆಗೆ
8431252935

airtel AIRTEL
Sales promoter
Salary 18000
Incentive up to 5000
91085 81166

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7204494854

ತಕ್ಷಣ ಬೇಕಾಗಿದ್ದಾರೆ
Impulse ಕಂಪನಿಯ ಹೊಸ ವಿಭಾಗಕ್ಕೆ Age (18-24) 10th PUC ಯಾದ Earn (9600+ ರಿಂದ 16500/-) pm *NOFEE* Only Frishers ಪರಸ್ಥಳದವರಿಗೆ ಮಾತ್ರ ವಸತಿ ಖುದ್ದಾಗಿ ಸಂಪರ್ಕಿಸಿ: Time (9 am to 5.30pm) ಕಾವ್ಯ:
9342827788

IMKTA - PRE-SCHOOL TEACHER TRAINING
Diploma Courses for SSLC, PU or any Degree Candidates.
Regular / Saturday / Correspondence Courses with practical training. www: imkta.in
ALPHA INTERNATIONAL SCHOOL @ Srirampura
Call: 7829937469
ONLINE TRAINING AVAILABLE

ITI ಗೆ ಪ್ರವೇಶಾವಕಾಶ
ITI (Fitter - NSQF) ವೃತ್ತಿ & SSLC / PUC pass or fail ಅಭ್ಯರ್ಥಿಗಳಿಗೆ ಪ್ರವೇಶಾವಕಾಶವಿರುತ್ತದೆ. NCVT ಭಾರತ ಸರ್ಕಾರದಿಂದ ಸಂಯೋಜನೆಗೊಂಡಿರುತ್ತದೆ.
Benaka ITI College, Near Cauvery Circle, Dr. Rajkumar Road, Raghavendra Nagar, Mysore.
9342123467, 9141756695

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8861401315

ವರ ಬೇಕಾಗಿದ್ದಾರೆ
ಬೆಂಗಳೂರಿನಲ್ಲಿ ವಾಸವಿರುವ, ವಯಸ್ಸು 40. B.Sc., ಕೇಂದ್ರ ಸರ್ಕಾರಿ ಹುದ್ದೆಯಲ್ಲಿರುವ ವಿಚ್ಛೇದಿತ ಮಹಿಳೆಗೆ ಸೂಕ್ತ ವರ ಬೇಕಾಗಿದ್ದಾರೆ.
(Cast no bar)
9902358147

ಬ್ರಾಹ್ಮಣ ವಧು, ವಯಸ್ಸು 19, PUC ಕಲಿತಿರುವ/ ವಯಸ್ಸು SSLC 26 / ವಯಸ್ಸು 29, PUC / ವಯಸ್ಸು 34, SSLC / ವಯಸ್ಸು 39, PUC ಕಲಿತಿರುವ ವಧುವಿಗೆ ಸದ್ಗುಣವಂತ, ಆದಾಯವಿರುವ ವರ ಬೇಕಾಗಿದೆ.
(ಬ್ರಾಹ್ಮಣ ವಧುವರರಿಗಾಗಿ ಸಂಪರ್ಕಿಸಿ)
ವಧು ಮಾನ್ವೇಷಣಾ ಕೇಂದ್ರ, ಕುಂದಾಪುರ, ಮಂಗಳೂರು
ಮೊ: 9880685177

ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್
ಜರ್ಮನ್ ಟೆಕ್ನಾಲಜಿ ಬಳಸಿ ಸಂಪು, ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್ ಮಾಡಲಾಗುತ್ತದೆ.
Mob: 9008711654

ಶಿಕ್ಷಕಿಯರು ಬೇಕಾಗಿದ್ದಾರೆ
Spoken English - 2
English - 4, D.Ed. - 4,
NTC - 3, PT - 01,
Maths - 2, Hindi - 1
7019219346
9686558859, 9448478779

ಹೋಂ ನರ್ಸ್ ಬೇಕಾಗಿದ್ದಾರೆ
ವಯಸ್ಸಾದವರನ್ನು, ರೋಗಿಗಳನ್ನು ನೋಡಿಕೊಳ್ಳಲು ಅನುಭವ ಇರುವ ಇಲ್ಲದೆ ಇರುವ ಯುವಕ, ಯುವತಿಯರು ಮಹಿಳೆಯರು ಬೇಕಾಗಿದ್ದಾರೆ 12 ಗಂಟೆ ಅಥವಾ 24 ಗಂಟೆ ಸೇವೆ ಮಾಡುವವರು ಸಂಪರ್ಕಿಸಿ:
9035113222

ವಧು ಬೇಕಾಗಿದೆ
ಮೈಸೂರಿನಲ್ಲಿ ವಾಸವಿರುವ 42ವರ್ಷದ ತಂದೆ ತಾಯಿ ಇಲ್ಲದ ವೀರಶೈವ ಲಿಂಗಾಯತ ವರನಿಗೆ ವೀರಶೈವ ಲಿಂಗಾಯತ ವಧು ಬೇಕಾಗಿದೆ.
9945646919

ಬೇಕಾಗಿದ್ದಾರೆ
ಒಂದು ಸಸ್ಯಾಹಾರಿ ಹೋಟೆಲ್‌ಗೆ ಒಬ್ಬ ಸೂಪರ್ ವೈಸರ್ / ಕ್ಯಾಶಿಯರ್ ಬೇಕಾಗಿದ್ದಾರೆ. 50 ವರ್ಷ ಒಳಪಟ್ಟವರು ಮತ್ತು ಹೋಟೆಲ್‌ನಲ್ಲಿ ರಾತ್ರಿ ಇರುವ ವ್ಯವಸ್ಥೆ ಮಾಡಲಾಗುವುದು. ಆಸಕ್ತಿವುಳ್ಳವರು ಕರೆ ಮಾಡಬಹುದು.
9916206561
9448279667

MUDA Approved Sites 20x30
25 Lakhs (BIG)
Near Sreenagara, BEML Nagara, 3rd Stage, Dwaraka Layout, J.P. Nagar.
Mob: 9449089231

DTCP Approved Layout
22x40 Site @ Rs. 11.50 Lakhs
24x40 Site @ Rs. 12.50 Lakhs
Next to Marashettihalli, Behind Chamundi Hill.
Call: 95385 83377

MUDA Approved Layout
40x40 South East Corner Site @ Rs. 45 Lakh.
Bank loan available.
Next to Lal Bahadur Shastri Nagara.
Call: 95385 83377

ಮನೆ ಮಾರಾಟಕ್ಕಿದೆ
55x45 ಅಳತೆಯ ಕಟ್ಟಡದಲ್ಲಿ 21x45 ಅಳತೆಯ 2 ಅಂತಸ್ತಿನ ಮನೆ ಹಾಗೂ ಕಟ್ಟಡ ಮಾರಾಟಕ್ಕಿದೆ ಹಾಗೂ ಅದೇ ಪಕ್ಕದ ಮನೆಯಲ್ಲಿ 21x45 ಅಳತೆಯ ನೆಲ ಅಂತಸ್ತು ಹಾಗೂ 2ನೇ ಅಂತಸ್ತು, 4ನೇ ಅಂತಸ್ತು ಇರುವ ಕಟ್ಟಡ ಭೋಗ್ಯಕ್ಕಿದೆ. ತ್ಯಾಗರಾಜ ರೋಡ್, ಐನೇ ಕ್ರಾಸ್, ಅಗ್ರಹಾರ, ಮೈಸೂರು.
6361637505, 9448442226

ತಕ್ಷಣ ಬೇಕಾಗಿದ್ದಾರೆ
Sri Sapthagiri Builder & Developers*
Telecallers - 2 Nos.
Driver Post - 2 Nos.
9606977963
9591828444, 8197395284

ಹೆಲ್ತ್ ಕೇರ್ ತರಬೇತಿ
SSLC/PUC ಆದವರಿಗೆ ಡಿಪ್ಲಮೋ ಇನ್ ಹೆಲ್ತ್ ಕೇರ್ ತರಬೇತಿ ಕೊಡಲಾಗುತ್ತದೆ. ತರಬೇತಿ ಪಡೆದವರು ಉತ್ತಮ ಆಸ್ಪತ್ರೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಸೆಂಟ್ ಮೇರೀಸ್ ಆಸ್ಪತ್ರೆ, ಸಿಲ್ಕ್ ಫ್ಯಾಕ್ಟರಿ ಸರ್ಕಲ್, NIE ಕಾಲೇಜ್ ಪಕ್ಕ, ಮೈಸೂರು
9916908454

ಬೇಕಾಗಿದ್ದಾರೆ
ಕುವೆಂಪು ನಗರದ ಹೋಟೆಲ್ ಒಂದಕ್ಕೆ ಸಪ್ಲೈಯರ್ ಟೀ ಮಾಸ್ಟರ್ ಸೌತ್ ಇಂಡಿಯನ್ ಅಸಿಸ್ಟೆಂಟ್, ನಾರ್ತ್ ಇಂಡಿಯನ್ ಅಸಿಸ್ಟೆಂಟ್, ಹೌಸ್ ಕೀಪಿಂಗ್, ಚೈನೀಸ್ ಮಾಸ್ಟರ್ ಮತ್ತು ಕ್ಯಾಪ್ಟನ್, ಕೌಂಟರ್ ಬಾಯ್ ಬೇಕಾಗಿದ್ದಾರೆ
7676111390

PROPERTIES FOR SALE
1) 30x40 East face site Srirampura 2nd Stage. Rs. 70 Lakhs.
2) 40x55 North face site, gated community, Ooty highway Nanjangud @ 36 Lakhs.
3) 3.5 acres developed coconut farm, 9 kms from Nanjangud temple @ 50 Lakhs / acre.
6366384851, 9113036910
Brokers Excuse

REQUIRED
QUALIFIED PERSONNEL
1) B.Sc. (Agri) / B.Sc. (CBZ) - 2-3 years experience.
2) Office Assistant: B.Com 2-3 years experience.
For a food industry at Kadakola Indl. Area. If interested call
Email your resume to: jwalamalawheatfoods@yahoo.com
Mob: 78295 04731

SITE FOR SALE
Site No. 12, West Face E-W 12 Mtrs ; N-S 9 Mtr. Paradise Enclave, Vidya Vikas College Opp. Hanchya Village, Kasaba Hobli, Mysore Tq. Contact:
Mob: 9986756908

FORCE KSHATRIYA MOTORS
We are Hiring Job positions
Marketing Team Leaders / Sales Executives. Location: Mysore, Kodagu, Mandya, Chamarajanagar, Ramanagara.
Send your CV to: kshatriyaforcesales@gmail.com
0821-2404555, 9632263202

ನಿವೇಶನಗಳು ಮಾರಾಟಕ್ಕಿವೆ
Govt. ಹೈಸ್ಕೂಲ್ ಮತ್ತು ಕಾಲೇಜು ಹತ್ತಿರ, ಇಲವಾಲ ನಂತರ. ಬ್ಯಾಂಕ್ ಲೋನ್ ದೊರೆಯುತ್ತದೆ.
8050009696

ಪ್ರಮಾಣ ಪತ್ರ
ಮೈಸೂರು ಜಿಲ್ಲೆ, ಟಿ. ನರಸೀಪುರ ತಾಲ್ಲೂಕು, ಬನ್ನೂರು ಹೋಬಳಿ, ದೊಡ್ಡಮೂಲಗೂಡು ಗ್ರಾಮದಲ್ಲಿ ವಾಸವಾಗಿರುವ ಕೆಂಪೇಗೌಡರವರ ಮಗಳು, ಸುಮಾರು 18 ವರ್ಷವುಳ್ಳ ದಾಕ್ಷಾಯಿಣಿ ಡಿ.ಕೆ., ಆದ ನಾನು ಪ್ರಮಾಣೀಕರಿಸುವುದೇನೆಂದರೆ, ನನ್ನ ಆಧಾರ್ ಕಾರ್ಡ್ (474990698829) ನಲ್ಲಿ ನನ್ನ ಹೆಸರು ದಾಕ್ಷಾಯಿಣಿ ಬಿನ್ ಕೆಂಪೇಗೌಡ ಎಂದು ನಮೂದಾಗಿರುತ್ತದೆ. ಬನ್ನೂರು ಶಾಖೆ SBI ಬ್ಯಾಂಕ್‌ನ S.B. Account No. 64042433654 ರಲ್ಲಿ ನನ್ನ ಹೆಸರು Drakshyani M. & NG Jayanthi ಎಂದು ನಮೂದಾಗಿರುತ್ತದೆ. ಈ ಮೇಲ್ಕಂಡ ಎರಡೂ ಹೆಸರುಗಳು ನನವೇ ಆಗಿರುತ್ತದೆ. ನನ್ನ ಹೆಸರನ್ನು ನನ್ನ ಆಧಾರ್ ನಲ್ಲಿ ಇರುವಂತೆ Dakshayini D.K. ಎಂದೇ ತಿದ್ದುಪಡಿ ಮಾಡಿಸಲು ಈ ಮೂಲಕ ನೋಟರಿ ಉದಯಕುಮಾರ್ ರವರ ಎದುರು ಪ್ರಮಾಣೀಕರಿಸುತ್ತೇನೆ.
ಸಹಿ/– ದಾಕ್ಷಾಯಿಣಿ ಡಿ.ಕೆ.

ಬೇಕಾಗಿದ್ದಾರೆ
ಹೆಬ್ಬಾಳು ಮೇಟಗಳ್ಳಿ ಕೈಗಾರಿಕಾ ಪ್ರದೇಶಗಳಲ್ಲಿ ಕೆಲಸ ಮಾಡಲು ಹುಡುಗ, ಹುಡುಗಿಯರು ಬೇಕಾಗಿದ್ದಾರೆ. ವಿದ್ಯಾರ್ಹತೆ ITI, Diploma, 8th to 2nd PUC ವರೆಗೆ. ಊಟ ವಸತಿ ESI, PF ಮತ್ತು ವಾಹನ ಸೌಲಭ್ಯ ಇರುತ್ತದೆ. ಸಂಬಳ: 11500 ರಿಂದ 18000 ಇರುತ್ತದೆ.
8951869646
9902645646

AFFIDAVIT
I, Nagaraja S., residing at #1855, Bangaragiri Nivasa, Rathan Singh Street, 2nd Main, Mandi Mohalla, Mysuru, declares that my son, by name Hruday N. is studying in 10th Standard, "F" Section at Marimallappa High School, Mysuru. My son's correct name is Hruday N., but in the said school records, my son's name has been mentioned as Hrday N. by mistake. I swear this in front of Notary Vasuceva, that for the purpose of correction of my son's name as Hruday N. instead of Hrday N. in the said school records.
Sd/- Nagaraja S.

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ಅಂಜನ ಶಾಸ್ತ್ರದ ಮೂಲಕ ಪರಿಹಾರ ಶ್ರೀ ಅಂಜನ ದೇವಿ ಆರಾಧಕರು ಪಂ॥ ಶ್ರೀನಿವಾಸ್ ಆಚಾರ್ಯ
ಮೈಸೂರಿನಲ್ಲಿ ಬಹು ವರ್ಷದಿಂದ ಖಾಯಂ ಆಗಿ ನೆಲೆಸಿರುತ್ತಾರೆ. ಅನೇಕ ಜನರು ಇವರಲ್ಲಿ ಪರಿಹಾರ ಪಡೆದಿರುತ್ತಾರೆ. ಇವರು ವಂಶಪಾರಂಪರ್ಯ ಜ್ಯೋತಿಷ್ಯರು. ಇವರಲ್ಲಿ ಜ್ಯೋತಿಷ್ಯ ಕೇಳಿದರೆ ನಿರಾಸೆ ಆಗುವ ಮಾತೇ ಇಲ್ಲ. ಫೋನಿನ ಮೂಲಕ ಪರಿಹಾರ.
Mob: 9663466548

ತಕ್ಷಣ ಬೇಕಾಗಿದ್ದಾರೆ
ಹೂಟಗಳ್ಳಿ ಹೆಬ್ಬಾಳ್ ಮತ್ತು ಯಾದವಗಿರಿ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ: SSLC ಮತ್ತು ಮೇಲ್ಪಟ್ಟು ಸಂಬಳ: 18000+ W/o (8 hours) ಊಟ ತಿಂಡಿ ವ್ಯವಸ್ಥೆ ಇರುತ್ತದೆ
9880727819
9620667819

ತಕ್ಷಣ ಬೇಕಾಗಿದ್ದಾರೆ
ನಂಜನಗೂಡು ಏರಿಯಾದ ಟಿವಿಎಸ್ ಫ್ಯಾಕ್ಟರಿ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ: SSLC ಮತ್ತು ಮೇಲ್ಪಟ್ಟು ವಯೋಮಿತಿ: 50 ವರ್ಷದೊಳಗೆ ಸಂಬಳ: 17500/- 8 hours 26days ESI & PF ಊಟ ತಿಂಡಿ ವಸತಿ ಸೌಲಭ್ಯ ಇರುತ್ತದೆ.
9620777819
9620667819

LENIN CONVENT- SRIRANGAPATNA
WANTED TEACHERS
Freshers Can apply
Sub:- ENGLISH - 1
Mathematics and science - 1
Social Science-1
9844854461
6362000950
Urgent Required

WANTED TEACHERS
JNANAJYOTHI VIDYALAYA BEERIHUNDI.
NST, Montessori for UKG & D.Ed Teachers Wanted Immediately Contact.
9845390377
8197057626

ಬೇಕಾಗಿದ್ದಾರೆ
ಸನ್‌ಡೈರೆಕ್ಟ್ ಡಿ.ಟಿ.ಹೆಚ್‌ನಲ್ಲಿ ಟೆಕ್ನಿಷಿಯನ್ ಆಗಿ ಕೆಲಸ ಮಾಡಲು ದ್ವಿಚಕ್ರವಿರುವ ಹುಡುಗರು ಮತ್ತು ಆಫೀಸ್ ಕೆಲಸಕ್ಕೆ ಹುಡುಗಿಯರು ಬೇಕಾಗಿದ್ದಾರೆ.
9964555920
8867019475

ಅಡಿಗೆ ಕೆಲಸಕ್ಕೆ ಮಹಿಳೆಯರು ಬೇಕಾಗಿದ್ದಾರೆ.
ವಯಸ್ಸು – 30–45 ವರ್ಷ ಆದ್ಯತೆ ಲಿಂಗಾಯತ/ ಬಲಿಜ ಶೆಟ್ಟರು ಸರಸ್ವತಿಪುರಂ, ಕುವೆಂಪುನಗರ, ರಾಮಕೃಷ್ಣನಗರ, ಶಾರದಾದೇವಿ ನಗರದವರಿಗೆ ಆದ್ಯತೆ.
ಸಂಬಳ – 5000ರೂ
8317486481

ಮನೆ–ಸೈಟ್‌ಗಳ ಮಾರಾಟಕ್ಕಿದೆ
20x30 ಮನೆ ಹಳೇ ಮನೆ – 50ಲಕ್ಷ
30x40 ಡ್ಯೂಪ್ಲೆಕ್ಸ್ ಹೊಸ ಮನೆ
40x60 ಹಳೇಮನೆ
ಸೈಟ್ ಹಳೇಮನೆ ಹೊಸಮನೆ ಮಾರುವವರು ಕೊಳ್ಳುವವರು ಸಂಪರ್ಕಿಸಿ:
9945042875

ಎಂಎಸ್ ನಾರಾಯಣ ಸ್ವೀಟ್ಸ್ ಗೆ ಕೆಲಸಕ್ಕೆ ಬೇಕಾಗಿದ್ದಾರೆ
ಅನುಭವವುಳ್ಳ ಸೇಲ್ಸ್ ಮ್ಯಾನ್‌ಗಳು. ಸೂಪರ್‌ವೈಸರ್‌ಗಳು ಮತ್ತು ಕ್ಯಾಶಿಯರ್‌ಗಳು ಅನುಭವವುಳ್ಳ ಅಸಿಸ್ಟೆಂಟ್ ಅಕೌಂಟೆಂಟ್ ಗಳು ಮತ್ತು ಟ್ಯಾಲಿ ಅಲ್ಲಿ ಅನುಭವ ಇರಬೇಕು.. ವಿಳಾಸ: ಕುವೆಂಪು ನಗರ ಉದಯರವಿ ರೋಡ್ ಅಪೋಸಿಟ್ ರಾಯಲ್ ಎನ್‌ಫೀಲ್ಡ್ ಶೋರೂಮ್..
ಈ ಕೂಡಲೇ ಕೆಳಕಂಡ ನಂಬರಿಗೆ ಕರೆ ಮಾಡಿ
7090700199, 7090700166

ಕೇರಳ ಪ್ರವಾಸ
ಒಟ್ಟು 4 ದಿನಗಳು ಹೊರಡುವ ದಿನಾಂಕ: 22–ಆಗಸ್ಟ್ 2024 ನೋಡುವ ಸ್ಥಳಗಳು ಅನಂತ ಪದ್ಮನಾಭ ದೇವಸ್ಥಾನ, ಕೋವಲಂ ಬೀಚ್ ಜಟಾಯು ಅರ್ಥ್ ಸೆಂಟರ್ ಇಡುಕ್ಕಿ ಡ್ಯಾಂ, ಗುರುವಾಯೂರು, ಅಲ್ಲಪೆ, ಕೊಚ್ಚಿನ್ ಮರಿನ್ ಡ್ರೈವ್ ಅತಿರಪಿಲ್ಲೆ ವಾಟರ್ ಫಾಲ್ಸ್, ಊಟ, ತಿಂಡಿ, ಕಾಫಿ/ಟೀ ಫ್ಯಾಮಿಲಿಗೆ ಪತ್ಯೇಕ ರೂಂ ಇರುತ್ತದೆ ಎಲ್ಲಾ ಸೇರಿ ಒಬ್ಬರಿಗೆ 8000/– ರೂಪಾಯಿಗಳು
7022271023

ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್‌ಗಳು – 10 ಮಂದಿ ಉಚಿತ ವಸತಿ/ಊಟ/ESI/PF ಹಾಗೂ ಸಮಯಕ್ಕೆ ಸರಿಯಾಗಿ ಸಂಬಳ
9686422400
9242406261

ಪ್ರವೇಶ ತೆರೆದಿದೆ
DMLT, OT, IT, FOR SSLC/ PUC PASS / FAIL STUDENTS B.VOC (BACHELOR OF VOCATON) ALL PROGRAMS AVAILABLE M. VOC LAB (LIMIT SEATS)
8073195952

30x40 NORTH FACING SITE FOR SALE
Vishweswaraiah layout near New RT Nagar
7899214181

ತಕ್ಷಣ ಬೇಕಾಗಿದ್ದಾರೆ
ಸೆಕ್ಯೂರಿಟಿ ಸೂಪರ್ ವೈಜರ್ 15000, ಸೆಕ್ಯೂರಿಟಿ ಗಾರ್ಡ್ಸ್ 14000 ಕೂರ್ಗಳ್ಳಿ ಸುತ್ತಮುತ್ತ ಪ್ರದೇಶದಲ್ಲಿ ಮತ್ತು ಹೆಲ್ಪರ್‌ಗಳು ಹೌಸ್ ಕೀಪಿಂಗ್ ಮಹಿಳೆಯರು ಸಹ ಸಂಪರ್ಕಿಸಿ
9035367083
8123769346

40x60 SITE FOR SALE
SITE NO.12365
Vijayanagar 4th Stage Near Ring Road South Facing, Opp. Park
Price: 1.50 Crores
8884133677

A TO Z
WE-BUY-OLD FURNITURES, UPS BATTERY'S, GENERATOR, ELECTRIC ITEMS OLD VESSEL'S AWD OTHER SCRAP ITEM'S
CALL ANAND
9900945675

ಬಾದಾಮಿ, ಗೋಡಂಬಿ, ಪಿಸ್ತಾ, ಒಣದ್ರಾಕ್ಷಿ, ಖರ್ಜೂರ, ಅಂಜೂರ ಮುಂತಾದ ಡ್ರೈಫ್ರೂಟ್ಸ್ ದೊರೆಯುತ್ತದೆ. (5 ಕಿ.ಮೀ ವರೆಗೂ ಉಚಿತ ಡೆಲಿವರಿ) ಸಂಪರ್ಕಿಸಿ: ರಾಜ್ ಗುರು ಡ್ರೈಫ್ರೂಟ್, ನಾರಾಯಣ ಶಾಸ್ತ್ರಿ ರಸ್ತೆ, ಮೈಸೂರು
9845460211
7022293342

SITE FOR SALE
NEW HOUSE READY FOR REGISTRATION
35X50, 30X50, 20X30, 30X40
9945321020

ಬೇಕಾಗಿದ್ದಾರೆ
ಮೈಸೂರಿನ ಮೇಟಗಳ್ಳಿ ಮತ್ತು ಹೆಬ್ಬಾಳು ಕೈಗಾರಿಕ ಪ್ರದೇಶದಲ್ಲಿರುವ ಪ್ರತಿಷ್ಠಿತ ಕಾರ್ಖಾನೆಗಳಿಗೆ ಹುಡುಗರು ಬೇಕಾಗಿದ್ದಾರೆ. ವಯಸ್ಸು: 18 ರಿಂದ 35 ವರ್ಷ. ವಿದ್ಯಾರ್ಹತೆ: 7 ರಿಂದ PUC ಮತ್ತು ITI ರಿಯಾಯಿತಿ ದರದಲ್ಲಿ ಊಟ ಮತ್ತು ವಸತಿ ಸೌಲಭ್ಯವಿರುತ್ತದೆ.
9480404036

SITE FOR SALE
40X40 Corner Vishwamanava Enclave Vijayanagar 4th Stage
8050821108
7892207164

TEACHERS REQUIRED
TRAINED QUALIFIED CANDIDATES
SUB:- MATHEMATICS, ENGLISH ,EVS.
JNANA GANGOTHRI CONVENT
ENGLISH MEDIUM
RAJENDRA NAGARA MYSORE 7
9243580672

ಬೇಕಾಗಿದ್ದಾರೆ
ಮೈಸೂರಿನ ಬಲ್ಲಾಳ್ ಸರ್ಕಲ್ ಹತ್ತಿರ ಇರುವ ರೆಸ್ಟೋರೆಂಟ್ ಒಂದಕ್ಕೆ ಪರಿಣಿತಿ ಹೊಂದಿರುವ ದೋಸೆ ಮಾಸ್ಟರ್ ಬೇಕಾಗಿದ್ದಾರೆ.
9900661620

ಬೇಕಾಗಿದ್ದಾರೆ
ಮೈಸೂರಿನ ಕಾಳಿದಾಸ ರೋಡ್ –ಜಯಲಕ್ಷ್ಮೀಪುರದಲ್ಲಿ ಇರುವ ಶುದ್ಧ ಸಸ್ಯಾಹಾರಿ ರೆಸ್ಟೋರೆಂಟ್‌ಗೆ ಅನುಭವವುಳ್ಳ (1) ಸೌತ್ ಅಡುಗೆ ಭಟ್ಟರು South Cook (2) ಕೌಂಟರ್ ಪಾರ್ಸೆಲ್ Counter Parcel Packing 3) Chaat (ಚಾಟ್) All rounder (4) ಕ್ಲೀನಿಂಗ್ (ಪಾತ್ರೆ ತೊಳೆಯುವ 2 pm to 11pm) ಮಾಡುವ ಕೆಲಸಕ್ಕೆ ಬೇಕಾಗಿದ್ದಾರೆ. ಆಕರ್ಷಕ ಸಂಬಳ, ವಸತಿ ಹಾಗೂ ಉತ್ತಮ ಸೌಲಭ್ಯಗಳನ್ನೂ ನೀಡಲಾಗುತ್ತದೆ – ಸಂಪರ್ಕಿಸಿ:
7899028086

ಸೈಟ್ ಮಾರಾಟಕ್ಕಿದೆ
30x40
ಮೂಡಾ ಪೂರ್ವ ದಿಕ್ಕಿನ ಸೈಟ್ KNS Calistoಗೆ ಹೊಂದಿಕೊಂಡಿರುವ ಭವಾನಿ ಎನ್‌ಕ್ಲೈವ್ ದಟ್ಟಗಳ್ಳಿ
7349273845

ಮನೆ & ನಿವೇಶನಗಳು ಮಾರಾಟಕ್ಕಿದೆ
ಆಲನಹಳ್ಳಿ ಬಡಾವಣೆ 60x70, N/F, 11B, 20x30, S/F ಮನೆ ಮತ್ತು 30x40 ನಿವೇಶನ ಜೆಪಿ ನಗರದಲ್ಲಿ 30x40 W/F ಮನೆ ದಟ್ಟಗಳ್ಳಿಯಲ್ಲಿ 35x50 W/F JSS ಬಡಾವಣೆ ಡಾ.ರಾಜ್‌ಕುಮಾರ್ ರೋಡ್ ಪಕ್ಕ 35x50 ವಿದ್ಯಾರಣ್ಯಪುರಂ N/F
ಡಿ.ಡಿ.ರಿಯಲ್ ಎಸ್ಟೇಟ್
9343361444

ಬೇಕಾಗಿದ್ದಾರೆ
ರೂಂ ಬಾಯ್ಸ್–2
ಶ್ರೀ ಗಣೇಶ್ ಪ್ರಸಾದ್ ಲಾಡ್ಜ್ # 1096, ಶಿವರಾಂಪೇಟೆ ಮುಖ್ಯರಸ್ತೆ, ಮೈಸೂರು–570001
9986756866

20x30 DUPLEX HOUSE FOR SALE - 3BHK
NEW HOUSE, Opp to St. Joseph's Central School, After Belavadi, Hunasuru Main Road, Mysuru. MUDA Approved, Rs.68 Lakhs
9986675044

ಬೇಕಾಗಿದ್ದಾರೆ
ಹಳೆ ಆರ್‌ಎಂಸಿ ಸರ್ಕಲ್‌ನ ಪೆಟ್ರೋಲ್ ಬಂಕ್‌ಗೆ ಕ್ಯಾಷಿಯರ್ & ಹೆಲ್ಪರ್ಸ್ (ಪುರುಷ/ಮಹಿಳೆ) ವಯಸ್ಸು: 18 ರಿಂದ 40 ಬೇಕಾಗಿದ್ದಾರೆ
9035541774

ಕರ್ನಾಟಕದಾದ್ಯಂತ ಪ್ರಸಿದ್ಧ MNC ಕಂಪನಿಗಳಿಗೆ
ಕಂಪನಿ, ಮತ್ತು ಆಫೀಸ್ ಕೆಲಸದ ಉದ್ಯೋಗಗಳಿಗೆ ತಕ್ಷಣ ಯುವಕ ಯುವತಿಯರು ಬೇಕಾಗಿದ್ದಾರೆ ಯಾವುದೇ ಸಂದರ್ಶನ ಇರುವುದಿಲ್ಲ ಪ್ರಸಿದ್ಧ ಕಂಪನಿಗಳಲ್ಲಿ, ಅಕೌಂಟೆಂಟ್, ಡೇಟಾ ಆಪರೇಟರ್, ಟೆಲಿಕಾಲರ್, ಕ್ಯಾಶಿಯರ್, ಆಫೀಸ್ ಬಾಯ್, ಮತ್ತು ಮ್ಯಾನುಫ್ಯಾಕ್ಚರಿಂಗ್ ಕೆಲಸಕ್ಕೆ ಬೇಕಾಗಿದ್ದಾರೆ, ಶಿಕ್ಷಣ 4ನೇ ತರಗತಿ ಇಂದ ಯಾವುದೇ ಪದವೀಧರರು, (ಸಂಬಳ: 18000rs ಇಂದ 30000rs + ಇನ್ಸೆಂಟಿವ್) ಹೆಚ್ಚಿನ ಮಾಹಿತಿಗಾಗಿ ಇಂದೇ ಸಂಪರ್ಕಿಸಿ:
9632831680, 7411273440

WANTED TEACHERS
for CBSE School in Mysore City for residentail /Non residential for Social and PCM to Teach for High School ವಸತಿ ಶಾಲೆಗೆ ಮಹಿಳಾ ಆಯಾ ಕೆಲಸಕ್ಕೆ ಬೇಕಾಗಿದ್ದಾರೆ.
8147031036

ಮೈಸೂರು ಮಿತ್ರ ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

ಮೈಸೂರು ಮಿತ್ರ ಗುರುವಾರ 25 ಜುಲೈ 2024

ಮುತ್ತತ್ತಿ, ಶಿವನಸಮುದ್ರ ವೀಕ್ಷಿಸಿದ ಜಿಲ್ಲಾಧಿಕಾರಿ

ಕಾವೇರಿ ನದಿ ಪಾತ್ರದ ಗ್ರಾಮಗಳಿಗೆ ಹಾನಿಯಾಗದಂತೆ ಕ್ರಮ

ಮಳವಳ್ಳಿ,ಜು.24– ಮಲೆನಾಡು ಪ್ರದೇಶದಲ್ಲಿ ಅತಿ ಹೆಚ್ಚು ಮಳೆಯಾಗುತ್ತಿರುವ ಹಿನ್ನೆಲೆಯಲ್ಲಿ ಕಾವೇರಿ ನದಿ ಪಾತ್ರದ ಗ್ರಾಮಗಳು ಹಾಗೂ ಜಮೀನುಗಳಿಗೆ ಹಾನಿಯಾಗದಂತೆ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು ಜಿಲ್ಲಾಧಿಕಾರಿ ಡಾ.ಕುಮಾರ ತಿಳಿಸಿದರು.

ತಾಲೂಕಿನ ಮುತ್ತತ್ತಿ ಹಾಗೂ ಶಿವನ ಸಮುದ್ರ(ಬ್ಲಫ್) ಸಮೀಪವಿರುವ ಗಗನಚುಕ್ಕಿ ಜಲಪಾತವನ್ನು ವೀಕ್ಷಿಸಿದ ಬಳಿಕ ಮಾತನಾಡಿದ ಅವರು, ಕಾವೇರಿ ಕೊಳ್ಳದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಮಳೆಯಾಗುತ್ತಿರುವ ಹಿನ್ನೆಲೆಯಲ್ಲಿ ಕೆಆರ್‌ಎಸ್ ಹಾಗೂ ಕಬಿನಿ ಜಲಾಶಯಗಳಲ್ಲಿ ಹೆಚ್ಚಿನ ಪ್ರಮಾಣದ ನೀರನ್ನು ಕಾವೇರಿ ನದಿಗೆ ಬಿಡುತ್ತಿರುವ ಹಿನ್ನೆಲೆಯಲ್ಲಿ ಕಾವೇರಿನದಿ ಪಾತ್ರದ ಗ್ರಾಮಗಳಲ್ಲಿನ ಜನ ಜಾನುವಾರುಗಳಿಗೆ ಯಾವುದೇ ರೀತಿ ಅನಾಹುತ ಸಂಭವಿಸುವುದನ್ನು ತಡೆಗಟ್ಟಲು ಈಗಾಗಲೇ ಸೂಚನ ಫಲಕಗಳನ್ನು ಅಳವಡಿಸಿದ್ದು, ಈ ಕುರಿತು ಈಗಾಗಲೇ ಸ್ಥಳೀಯ ಗ್ರಾಮ ಪಂಚಾಯಿತಿ ಹಾಗೂ ಕಂದಾಯ ಇಲಾಖೆ ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದರು.

ಗಗನಚುಕ್ಕಿ ಜಲಪಾತ ವೀಕ್ಷಣೆಗೆ ಬರುವ ಪ್ರವಾಸಿಗರು ಸೆಲ್ಫಿ ತೆಗೆಯುವ ಹುಮ್ಮಸ್ಸಿನಲ್ಲಿ ಮೆಟ್ಟಿಲನ್ನು ಇಳಿದು ಅನಾಹುತ ಮಾಡಿಕೊಳ್ಳುವ ಸಂಭವವಿದ್ದು, ಮೆಟ್ಟಿಲು ಕೆಳಗೆ ಯಾರು ಇಳಿಯದಂತೆ ಬ್ಯಾರಿಕೇಡ್ ಹಾಕಿ ಬಂದೋಬಸ್ತ್ ಮಾಡುವಂತೆ ಸ್ಥಳೀಯ ಪೊಲೀಸರಿಗೆ ಸೂಚಿಸಿದರು.



ಶಿವನಸಮುದ್ರ ಜಲಪಾತವನ್ನು ವೀಕ್ಷಿಸಿದ ಜಿಲ್ಲಾಧಿಕಾರಿ ಡಾ.ಕುಮಾರ, ಅಧಿಕಾರಿಗಳಿಗೆ ಸೂಚನೆಗಳನ್ನು ನೀಡುತ್ತಿರುವುದು.

ಪ್ರವಾಸೋದ್ಯಮ ಇಲಾಖೆ ವತಿಯಿಂದ ಗಗನಚುಕ್ಕಿ ಅಭಿವೃದ್ಧಿ ಕಾಮಗಾರಿಗಳು ಪ್ರಗತಿಯಲ್ಲಿದ್ದು, ಸರ್ಕಾರದಿಂದ ಹೆಚ್ಚುವರಿ ಅನುದಾನ ಕೇಳಿದ್ದು, ಅನುದಾನ ಬಿಡುಗಡೆಯಾದ ಕೂಡಲೇ ಪ್ರವಾಸಿಗರಿಗೆ ತೊಂದರೆಯಾಗದಂತೆ ಅತಿ ತುರ್ತಾಗಿ ಕಾಮಗಾರಿ ಪೂರ್ಣಗೊಳಿಸಲಾಗುವುದು, ಜಲಪಾತೋತ್ಸವ ಆಚರಣೆ ಕುರಿತು ಈಗಾಗಲೇ ಸ್ಥಳೀಯ ಶಾಸಕರು ಪ್ರವಾಸೋದ್ಯಮ ಇಲಾಖೆ ಸಚಿವರು ಹಾಗೂ ಸರ್ಕಾರದ ಜೊತೆ ಪ್ರಸ್ತಾಪಿಸಿದ್ದು, ನಾವು ಈ ಸಂಬಂಧ ತಕ್ಷಣವೇ ಸರ್ಕಾರಕ್ಕೆ ವರದಿ ನೀಡಲಾಗುವುದು ಎಂದರು.

ಈ ಸಂದರ್ಭದಲ್ಲಿ ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ, ಜಿಪಂ ಮುಖ್ಯ ಕಾರ್ಯನಿರ್ವಾಹಕಾಧಿಕಾರಿ ಶೇಕ್ ತನ್ವೀರ್ ಆಸಿಫ್, ತಹಸೀಲ್ದಾರ್ ಕೆ.ಎನ್.ಲೋಕೇಶ್, ಇಓ ಮಮತಾ, ಡಿವೈಎಸ್‌ಪಿ ಕೃಷ್ಣಪ್ಪ, ಪಿಡಿಓ ಹೆಚ್.ಸಿ.ಕುಮಾರ್, ಕಾರ್ಯದರ್ಶಿ ಶಿವರಾಮ, ರಾಜಸ್ವ ನಿರೀಕ್ಷಕ ರವಿಶಂಕರ್, ಗ್ರಾಮಲೆಕ್ಕಾಧಿಕಾರಿ ಲಂಕೇಶ್ ಸೇರಿದಂತೆ ಹಲವು ಅಧಿಕಾರಿಗಳು ಹಾಜರಿದ್ದರು.

ಬಂಡಿದಾರಿ ಒತ್ತುವರಿ ಮಾಡಿಕೊಂಡು ನಿವೇಶನ ನಿರ್ಮಾಣ

ಕೆಆರ್‌ಎಸ್ ಬಳಿಯ ಸ್ಥಳಕ್ಕೆ ತಹಸೀಲ್ದಾರ್ ಭೇಟಿ ನೀಡಿ, ಕಾಮಗಾರಿಗೆ ತಡೆ

ಶ್ರೀರಂಗಪಟ್ಟಣ, ಜು.24–ಕೆಆರ್‌ಎಸ್ ರಸ್ತೆಯಲ್ಲಿ ಬಂಡಿದಾರಿ ಒತ್ತುವರಿ ಮಾಡಿಕೊಂಡು ವಾಣಿಜ್ಯ ನಿವೇಶನ ನಿರ್ಮಿಸಲು ಮುಂದಾಗಿದ್ದ ಖಾಸಗಿ ಕಂಪನಿಗೆ ಮುಂದಿನ ಆದೇಶ ನೀಡುವವರೆಗೂ ಯಾವುದೇ ಕಾಮಗಾರಿ ನಡೆಸದಂತೆ ಶ್ರೀರಂಗಪಟ್ಟಣ ತಹಸೀಲ್ದಾರ್ ಪರಶುರಾಮ್ ಸತ್ತಿಗೇರಿ ಸೂಚನೆ ನೀಡಿದ್ದಾರೆ.

ಖಾಸಗಿ ಕಂಪನಿಯವರು ಕೆಆರ್‌ಎಸ್‌ನ ಮಜ್ಜಿಗೆಪುರ ರಸ್ತೆಯಿಂದ ಹುಲಿಕರೆ ಗ್ರಾಮದ ಕೆಆರ್‌ಎಸ್–ಮೈಸೂರು ರಸ್ತೆಗೆ ಸಂಪರ್ಕಿಸುವ ಬಂಡಿದಾರಿಯನ್ನು ಅಕ್ರಮವಾಗಿ ಒತ್ತುವರಿ ಮಾಡಿಕೊಂಡಿದ್ದಾರೆ ಎಂದು ಸಾರ್ವಜನಿಕರು ದೂರು ನೀಡಿದ ಹಿನ್ನೆಲೆಯಲ್ಲಿ ಮಂಗಳವಾರ ಸಂಜೆ ಅವರು ಸ್ಥಳಕ್ಕೆ ಭೇಟಿ ನೀಡಿ ದಾಖಲಾತಿ ನೋಡಿ ಪರಿಶೀಲನೆ ಮಾಡಿ ನಿರ್ದೇಶನ ನೀಡುವ ತನಕ ಯಾವುದೇ ಕಾಮಗಾರಿ ನಡೆಸದಂತೆ ಕಂಪನಿಗೆ ಎಚ್ಚರಿಕೆ ನೀಡಿದರು.

ಕಂಪನಿಯವರು ಬಂಡಿದಾರಿ ಒತ್ತುವರಿ ಮಾಡಿಕೊಂಡು ಎರಡು ಕಡೆ ಗೋಡೆ ಹಾಕಿ ವಾಣಿಜ್ಯ ನಿವೇಶನ ಮಾಡಲು ಮುಂದಾಗಿದ್ದರು ಎನ್ನಲಾಗಿದೆ. ಈ ಹಿಂದೆ ಕೂಡ ಹುಲಿಕರೆ ಗ್ರಾ.ಪಂ ಮಾಜಿ ಉಪಾಧ್ಯಕ್ಷ ಚೆಲುವರಾಜು ಹಾಗೂ ಗ್ರಾಮಸ್ಥರು ದೂರು ನೀಡಿದ್ದು, ಪಿಡಿಒ ನಟೇಶ್ ನೇತೃತ್ವದಲ್ಲಿ ಗ್ರಾ.ಪಂ ಸದಸ್ಯರ ತಂಡ ಭೇಟಿ ನೀಡಿ ಸಂಪೂರ್ಣ ದಾಖಲಾತಿ ನೀಡಲು ತಿಳಿಸಿ ಕೆಲಸ ಮಾಡದಂತೆ ಸೂಚಿಸಿದ್ದರು.

ಕಳೆದ ಎರಡು ದಿನಗಳಿಂದ ಮತ್ತೆ ಕೆಲಸ ಮಾಡುತ್ತಿದ್ದ ಕಾರಣ ಗ್ರಾಮಸ್ಥರು ನೀಡಿದ ದೂರಿನ ಮೇರೆಗೆ ಶ್ರೀರಂಗಪಟ್ಟಣ ತಹಸಿಲ್ದಾರ್ ಪರಶುರಾಮ್ ಸತ್ತಿಗೇರಿ, ತಾಪಂ ಕಾರ್ಯನಿರ್ವಹಣಾಧಿಕಾರಿ ವೇಣು ನೇತೃತ್ವದಲ್ಲಿ ಭೇಟಿ ನೀಡಿ ಪರಿಶೀಲನೆ ನಡೆಸಲಾಯಿತು.

ಈ ಸಂದರ್ಭದಲ್ಲಿ ಸಾರ್ವಜನಿಕರು ಮಾತನಾಡಿ ಕಂದಾಯ ಇಲಾಖೆ ನಕ್ಷೆಯಲ್ಲಿ ಕೂಡ ಬಂಡಿದಾರಿ ದಾಖಲಾಗಿದ್ದು ಕಂಪನಿಯವರು ರಾಜಕೀಯ ಪ್ರಭಾವ ಬಳಸಿ ಅಧಿಕಾರಿಗಳು ಮತ್ತು ಗ್ರಾಮಸ್ಥರಿಗೆ ಬೆದರಿಕೆ ಹಾಕುತ್ತಿದ್ದಾರೆಂದು ಆರೋಪಿಸಿದರು.



ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ ತಹಸಿಲ್ದಾರ್ ಪರಶುರಾಮ್ ಸತ್ತಿಗೇರಿ

ಈ ಸಂದರ್ಭದಲ್ಲಿ ರಾಜಸ್ವ ನಿರೀಕ್ಷಕ ಬಸವರಾಜು, ಗ್ರಾಮಲೆಕ್ಕಿಗ ರಘು, ಹುಲಿಕೆರೆ ಗ್ರಾ.ಪಂ ಪಿಡಿಒ ನಟೇಶ್, ಹುಲಿಕೆರೆ ಗ್ರಾ.ಪಂ ಮಾಜಿ ಉಪಾಧ್ಯಕ್ಷ ಚೆಲುವರಾಜು, ಕುಟ್ಟೇಗೌಡ, ಜುವಾರಿ ಕಂಪನಿ ಸ್ಥಳಿಯ ವ್ಯವಸ್ಥಾಪಕ ಜಯರಾಜ್ ಸೇರಿದಂತೆ ಇತರರು ಇದ್ದರು.

ಲಂಚ ಸ್ವೀಕರಿಸುತ್ತಿದ್ದ ಆರ್‌ಎಫ್‌ಓ, ಚಾಲಕ ಲೋಕಾಯುಕ್ತ ಬಲೆಗೆ

ಶ್ರೀರಂಗಪಟ್ಟಣ, ಜು.24– ಒಂದು ಲಕ್ಷ ರೂ. ಲಂಚ ಸ್ವೀಕರಿಸುತ್ತಿದ್ದ ಆರ್‌ಎಫ್‌ಓ ಮತ್ತು ಚಾಲಕ ಲೋಕಾಯುಕ್ತ ಬಲೆಗೆ ಬಿದ್ದಿದ್ದಾರೆ.

ವಲಯ ಅರಣ್ಯ ಅಧಿಕಾರಿ ಪುಟ್ಟಸ್ವಾಮಿ, ವಾಹನ ಚಾಲಕ ಪ್ರಸನ್ನ ಕುಮಾರ್ ಲೋಕಾಯುಕ್ತ ಬಲೆಗೆ ಬಿದ್ದವರು. ಸ್ಟೋನ್ ಕ್ರಷರ್‌ಗೆ ಎನ್‌ಒಸಿ ನೀಡಲು 10 ಲಕ್ಷ ರೂ. ಲಂಚಕ್ಕೆ ಪುಟ್ಟಸ್ವಾಮಿ ಬೇಡಿಕೆ ಇಟ್ಟಿದ್ದರು. ಚಾಲಕ ಪ್ರಸನ್ನಕುಮಾರ್ ಮೂಲಕ ಲಂಚ ಸ್ವೀಕರಿಸುವಾಗ ಬಲೆಗೆ ಬಿದ್ದಿದ್ದಾರೆ ಸಂತೋಷ್ ಎಂಬುವರಿಂದ ಒಂದು ಲಕ್ಷ ರೂಪಾಯಿ ಲಂಚ ಸ್ವೀಕರಿಸುವಾಗ ಲೋಕಾಯುಕ್ತ ಪೊಲೀಸರು ದಾಳಿ ನಡೆಸಿದ್ದು, ಆರ್‌ಎಫ್‌ಓ ಪುಟ್ಟಸ್ವಾಮಿ ಮತ್ತು ಚಾಲಕ ಪ್ರಸನ್ನಕುಮಾರ್ ಅವರನ್ನು ಬಂಧಿಸಿದ್ದಾರೆ. ಲೋಕಾಯುಕ್ತ ಎಸ್‌ಪಿ ಸುರೇಶ್ ಬಾಬು ನೇತೃತ್ವದಲ್ಲಿ ಕಾರ್ಯಾಚರಣೆ ನಡೆಸಲಾಗಿದೆ.

ಪಾಂಡವಪುರದಲ್ಲಿ ಬಸವ ಭವನ ನಿರ್ಮಾಣ

ಪಾಂಡವಪುರ,ಜು.24 ತಾಲೂಕಿನಲ್ಲಿ ಬಸವ ಭವನ ನಿರ್ಮಾಣ ಮಾಡುವುದರ ಜತೆಗೆ ಸಮುದಾಯದ ಅಭಿವೃದ್ಧಿಗೆ ಶ್ರಮಿಸಲಾಗುವುದು ಎಂದು ಅಖಿಲ ಭಾರತ ವೀರಶೈವ ಮಹಾಸಭಾ ತಾಲೂಕು ನೂತನ ಅಧ್ಯಕ್ಷ ಕಾಳೇಗೌಡನ ಕೊಪ್ಪಲು ಎಂ.ಶಿವಕುಮಾರ್ ಭರವಸೆ ನೀಡಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಅಖಿಲ ಭಾರತ ವೀರಶೈವ ಮಹಾಸಭಾ ಚುನಾವಣೆಯಲ್ಲಿ ಆಯ್ಕೆಯಾದ ಜಿಲ್ಲಾಧ್ಯಕ್ಷ ಆನಂದ್, ಜಿಲ್ಲಾ ಹಾಗೂ ತಾಲೂಕು ಕಾರ್ಯಕಾರಿ ಮಂಡಳಿ ಸದಸ್ಯರಿಗೆ ಅಭಿನಂದನೆ ಸಲ್ಲಿಸಿ ಅವರು ಮಾತನಾಡಿದರು.

ಅಖಿಲ ಭಾರತ ವೀರಶೈವ ಮಹಾಸಭಾ ತಾಲೂಕು ಹಾಗೂ ಜಿಲ್ಲಾಧ್ಯಕ್ಷರು ಮತ್ತು ಕಾರ್ಯಕಾರಿ ಮಂಡಳಿಗೆ ನಡೆದ ಚುನಾವಣೆ ಯಲ್ಲಿ ಸಮುದಾಯದ ಮತದಾರರು ನಮ್ಮ ತಂಡಕ್ಕೆ ಅಧಿಕ ಮತಗಳನ್ನು ಕೊಟ್ಟು ಗೆಲ್ಲಿಸಿಕೊಟ್ಟ ಎಲ್ಲಾ ಮತದಾರರಿಗೂ ಕೃತಜ್ಞತೆ ಸಲ್ಲಿಸುತ್ತೇನೆ. ಮುಂದಿನ ದಿನಗಳ ಸಮುದಾಯದ ಅಭಿವೃದ್ಧಿಗೆ ಶ್ರಮಿಸುತ್ತೇನೆ.



ಅಖಿಲ ಭಾರತ ವೀರಶೈವ ಮಹಾಸಭಾ ಜಿಲ್ಲಾ ಹಾಗೂ ತಾಲೂಕು ಅಧ್ಯಕ್ಷರು ಹಾಗೂ ಕಾರ್ಯಕಾರಿ ಮಂಡಳಿ ಸದಸ್ಯರನ್ನು ತಾಲೂಕು ಸಮಿತಿ ವತಿಯಿಂದ ಅಭಿನಂದಿಸಲಾಯಿತು.

ಜತೆಗೆ ಕೇಂದ್ರ ಸಚಿವರಾದ ಎಚ್.ಡಿ.ಕುಮಾರಸ್ವಾಮಿ, ಮಾಜಿ ಸಚಿವರಾದ ಸಿ.ಎಸ್.ಪುಟ್ಟರಾಜು ಹಾಗೂ ಶಾಸಕ ದರ್ಶನ್ ಪುಟ್ಟಣ್ಣಯ್ಯ ಅವರ ಸಹಕಾರ ಪಡೆದು ಬಸವ ಭವನ ನಿರ್ಮಾಣ ಮಾಡಲು ಕ್ರಮ ವಹಿಸುತ್ತೇನೆ. ಎಲ್ಲಾ ಸರಕಾರಿ ಕಚೇರಿಗಳಲ್ಲೂ ಬಸವಣ್ಣ ಅವರ ಭಾವಚಿತ್ರ ಹಾಕಿಸಲು ಕ್ರಮವಹಿಸಲಾಗುವುದು ಎಂದು ಭರವಸೆ ನೀಡಿದರು.

ಜಿಲ್ಲಾಧ್ಯಕ್ಷ ತಾಳಶಾಸನ ಆನಂದ್ ಮಾತನಾಡಿ, ಚುನಾವಣೆಯಲ್ಲಿ ಸಮುದಾಯದ ಎಲ್ಲಾ ಮತದಾರರು ನಮ್ಮ ತಂಡಕ್ಕೆ ಬೆಂಬಲ ನೀಡಿ ಗೆಲ್ಲಿಸಿ ಕೊಟ್ಟಿದ್ದಕ್ಕೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಚುನಾವಣೆಯಲ್ಲಿ ಸೋತವರು ಸಹ ನಮ್ಮವರೇ, ಚುನಾವಣೆ ಮುಗಿದಿದೆ. ಮುಂದಿನ ದಿನಗಳಲ್ಲಿ ಎಲ್ಲರನ್ನು ಒಗ್ಗೂಡಿಸಿಕೊಂಡು ಕೆಲಸ ಮಾಡುತ್ತೇನೆ ಎಂದರು.

ಸಂದರ್ಭದಲ್ಲಿ ಮುಖಂಡ ಎಸ್.ಎಮ್ಲೇಶ್, ತಾಲೂಕು ಕಾರ್ಯಕಾರಿ ಮಂಡಳಿ ಸದಸ್ಯರಾದ ಬಿ.ಪಿ.ಉಮೇಶ್, ಎಚ್.ಎನ್.ಕುಮಾರ್, ಎ.ಜಯಕುಮಾರ್, ಡಿ.ಇ.ಕಲಿಗಣೇಶ್, ಸಿ.ಎಸ್.ಕುಮಾರ್, ಬಿ.ಇ.ರುದ್ರೇಶ್, ತಮ್ಮಯ್ಯ, ಬಸಪ್ಪ, ದಯಾನಂದ ಹಾಜರಿದ್ದರು.

ಗಂಧದ ಮರ ಬೆಳೆಸಿರುವ ಬಗ್ಗೆ ಮಾಹಿತಿ ನೀಡಿದರೆ ಪೊಲೀಸ್ ಗಸ್ತು

ಗದ್ದೆ ಬಯಲಿನಲ್ಲಿ ಮದ್ಯ ಸೇವಿಸಿದರೆ, ಹುಡುಗಿಯರನ್ನು ಚುಡಾಯಿಸಿದರೆ, ವ್ಹೀಲಿಂಗ್ ಮಾಡಿದರೆ ಕ್ರಮ, ಮಳವಳ್ಳಿಯಲ್ಲಿ ಸಿಸಿ ಕ್ಯಾಮರಾ ಅಳವಡಿಕೆ

ಮಳವಳ್ಳಿ,ಜು.24– ಗಂಧದ ಮರ ಬೆಳೆಸುತ್ತಿರುವ ಬಗ್ಗೆ ಪೊಲೀಸ್ ಇಲಾಖೆಗೆ ಮಾಹಿತಿ ನೀಡಿದರೇ ಪೊಲೀಸ್ ಗಸ್ತು ಹಾಕಲಾಗುವುದು. ಗದ್ದೆ ಬಯಲಿಯಲ್ಲಿ ಮದ್ಯ ಸೇವನೆ ಮಾಡುವವರ ಬಗ್ಗೆ ಗಮನ ಹರಿಸಲಾಗುವುದು ಎಂದು ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ತಿಳಿಸಿದರು.

ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ನಡೆದ ಜನಸಂಪರ್ಕ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ರೌಡಿಶೀಟರ್‌ಗಳು ಕಳೆದ 15–20 ವರ್ಷಗಳಿಂದ ಯಾವುದೇ ಅಪರಾಧ ಪ್ರಕರಣಗಳಲ್ಲಿ ಭಾಗಿಯಾಗದೇ ನೆಮ್ಮದಿ ಜೀವನ ನಡೆಸುತ್ತಿರುವವರು ರೌಡಿಶೀಟರ್ ತೆಗೆದುಹಾಕುವಂತೆ ಮನವಿ ನೀಡಿದರೇ ಪರಿಶೀಲನೆ ನಡೆಸಿ ಅಗತ್ಯ ಕ್ರಮ ವಹಿಸಲಾಗುವುದು. ಗಂಧದ ಮರ ಬೆಳೆಸುತ್ತಿರುವ ಬಗ್ಗೆ ಪೊಲೀಸ್ ಇಲಾಖೆಗೆ ಮಾಹಿತಿ ನೀಡಿದರೆ ಪೊಲೀಸ್ ಗಸ್ತು ನಡೆಸುವಂತೆ ಸೂಚನೆ ನೀಡಲಾಗುವುದು, ಗದ್ದೆ ಬಯಲಿಯಲ್ಲಿ ಮದ್ಯ ಸೇವನೆ ಮಾಡುವವರ ಬಗ್ಗೆ ಗಮನ ಹರಿಸಲಾಗುವುದು ಎಂದರು.



ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ಮಾತನಾಡುತ್ತಿರುವುದು.

ಪಟ್ಟಣದ ಅನಂತ್‌ರಾಂ ವೃತ್ತದಲ್ಲಿರುವ ಸಿಗ್ನಲ್ ಲೈಟ್ ಸಮಸ್ಯೆಗಳ ಬಗ್ಗೆ ಪರಿಶೀಲನೆ ನಡೆಸಿ ಸರಿಪಡಿಸುವ ಪ್ರಯತ್ನ ಮಾಡಲಾಗುವುದು, ಜೊತೆಗೆ ಅಪರಾಧ ಪತ್ತೆ ಕಾರ್ಯಗಳಿಗೆ ಸಹಾಯವಾಗುವಂತೆ ಸಿಸಿ ಕ್ಯಾಮರಗಳನ್ನು ಅಳವಡಿಸಲು ಪೊಲೀಸ್ ಇಲಾಖೆ, ಪುರಸಭೆ ಹಾಗೂ ಸಾರ್ವಜನಿಕರ ಸಹಕಾರದೊಂದಿಗೆ ಮುಂದಾಗುತ್ತೇವೆಂದು ಭರವಸೆ ನೀಡಿದರು.

ತಾಲೂಕಿನ ಶಾಲಾ ಕಾಲೇಜುಗಳಿಗೆ ಭೇಟಿ ನೀಡಿ ಸುತ್ತಮುತ್ತಲ ಪರಿಸರವನ್ನು ಪರಿಶೀಲನೆ ನಡೆಸಲಾಗುವುದು, ತಾಲೂಕಿನ ಪಟ್ಟಣ ಹಾಗೂ ಗ್ರಾಮೀಣ ಪ್ರದೇಶದ ಸೂಕ್ಷ್ಮ ಪ್ರದೇಶಗಳಲ್ಲಿ ಹುಡುಗಿಯರನ್ನು ಚುಡಾಯಿಸುವುದು, ವ್ಹೀಲಿಂಗ್ ಸೇರಿದಂತೆ ಅಪರಾಧಗಳನ್ನು ಪತ್ತೆಹಚ್ಚುವ ನಿಟ್ಟಿನಲ್ಲಿ ಪೆಟ್ರೋಲಿಂಗ್ ವ್ಯವಸ್ಥೆಯನ್ನು ಜಾರಿಗೊಳಿಸಲಾಗುವುದು ಎಂದರು.

ಪೊಲೀಸ್ ಹಾಗೂ ಅಬಕಾರಿ ಇಲಾಖೆ ಜಂಟಿ ಕಾರ್ಯಾಚರಣೆ ನಡೆಸಿ ತಾಲೂಕಿನಲ್ಲಿ ನಡೆಯುತ್ತಿರುವ ಅಕ್ರಮ ಮದ್ಯ ಮಾರಾಟಕ್ಕೆ ಕಡಿವಾಣ ಹಾಕಲಾಗುವುದು, ಬೆಳಕವಾಡಿಯಲ್ಲಿ ರಾಷ್ಟ್ರೀಯ ಹೆದ್ದಾರಿಯಲ್ಲಿರುವ ಪೊಲೀಸ್ ಇಲಾಖೆಗೆ ಸೇರಿದ ಆಸ್ತಿಯಲ್ಲಿ ಸಂಚಾರಿ ಪೊಲೀಸ್ ಠಾಣೆ ನಿರ್ಮಾಣ ಮಾಡುವ ಸಂಬಂಧ ಪರಿಶೀಲನೆ ನಡೆಸಲಾಗುವುದು ಎಂದು ತಿಳಿಸಿದರು.

ಸಭೆಯಲ್ಲಿ ಟ್ರಾಫಿಕ್ ಸಮಸ್ಯೆ ನಿವಾರಿಸಬೇಕು, ಅಕ್ರಮ ಮದ್ಯಮಾರಾಟ ತಡೆಯಬೇಕು, ವ್ಹೀಲಿಂಗ್ ಹಾಗೂ ಹೆಚ್ಚಾಗಿ ಸೌಂಡ್ ಮಾಡುತ್ತಾ ಬೈಕ್ ಓಡಿಸುವವರ ವಿರುದ್ಧ ಕ್ರಮಕೈಗೊಳ್ಳಬೇಕು, ಅತಿಯಾದ ಕಳ್ಳತನವಾಗುತ್ತಿರುವುದನ್ನು ತಡೆಯಬೇಕು, ಅಕ್ರಮ ಚಟುವಟಿಕೆ ತಡೆಗೆ ಕಠಿಣ ಕ್ರಮಕೈಗೊಳ್ಳಬೇಕು, ಮರಳು, ಮಣ್ಣು, ಕಲ್ಲು ಮಾಫಿಯಾ ತಡೆಯಬೇಕು ಎಂದರು.

ಒಂದನೇ ಪುಟದಿಂದ

ಅಹೋರಾತ್ರಿ ಧರಣಿ

ಅವಕಾಶ ಕೊಡಿ, ಆರೋಪಿಗಳ ಬಣ್ಣ ಬಯಲಾದರೆ ಮುಂದೆ ಒಳ್ಳೆಯವರು ಬರುತ್ತಾರೆ ಎಂದರು.

ಬಿಜೆಪಿಯದ್ದು ಬಂಡಿಯಷ್ಟು ಭ್ರಷ್ಟಾಚಾರ: ಈ ಸಂದರ್ಭದಲ್ಲಿ ಮಧ್ಯೆ ಪ್ರವೇಶಿಸಿದ ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್, ಸದನದಲ್ಲಿ ಕೆಲವು ದಾಖಲೆಗಳನ್ನು ಪ್ರದರ್ಶಿಸಿ, ಬಿಜೆಪಿಯವರು ಮಾಡಿರುವ ಅನಾಚಾರದ ಸಾಕ್ಷಿ ಇಲ್ಲಿದೆ, ಒಂದು ಬಂಡಿಯಷ್ಟು ಭ್ರಷ್ಟಾಚಾರ ಇದೆ, ಅವೆಲ್ಲವನ್ನೂ ನಾವು ಬಿಚ್ಚಿಡುತ್ತೇವೆ ಎಂದರು. ಆಗ ಮತ್ತೆ ಯತ್ನಾಳ್ ಮಾತನಾಡಿ, ಯಾರೆಲ್ಲಾ ಲೂಟಿ ಮಾಡಿದ್ದಾರೆ ಎಂಬ ಸತ್ಯ ಹೊರಬರಲಿ, ಪಕ್ಷಾತೀತವಾಗಿ ಭ್ರಷ್ಟಾಚಾರ ಹೊರಗೆ ಬರಬೇಕು, ತಪ್ಪು ಮಾಡಿದವರನ್ನು ಮನೆಗೆ ಕಳುಹಿಸಿ, ಪ್ರಾಮಾಣಿಕರನ್ನು ಇಲ್ಲಿ ಉಳಿಸೋಣ ಎಂದರು.

ನಕಲಿ ದಾಖಲೆ ಕೊಟ್ಟು ಎಕರೆಗಟ್ಟಲೇ ದೋಚಿದ್ದಾರೆ: ಮಾತು ಮುಂದುವರೆಸಿದ ಬೈರತಿ ಸುರೇಶ್, ಬಿಜೆಪಿಯವರು ನಕಲಿ ದಾಖಲೆ ಕೊಟ್ಟು ಎಕರೆಗಟ್ಟಲೆ ತೆಗೆದುಕೊಂಡಿದ್ದಾರೆ, ಅವೆಲ್ಲವನ್ನೂ ನಾವು ಬಿಚ್ಚಿಡುತ್ತೇವೆ ಎಂದು ಪ್ರತಿಪಕ್ಷ ಸದಸ್ಯರಿಗೆ ತಿರುಗೇಟು ನೀಡಿದರು. ಈ ಸಂದರ್ಭದಲ್ಲಿ ಆಡಳಿತ ಮತ್ತು ಪ್ರತಿಪಕ್ಷ ಸದಸ್ಯರ ನಡುವೆ ಭಾರಿ ವಾಕ್ಸಮರ ನಡೆದಾಗ ಸಭಾಧ್ಯಕ್ಷರು ಸದನ ಕಲಾಪವನ್ನು ಎರಡು ಗಂಟೆಗಳ ಕಾಲ ಮುಂದೂಡಿದರು.

ಸದನ ಮುಂದೂಡುವುದಕ್ಕೂ ಮುನ್ನ ಪ್ರತಿಪಕ್ಷ ಸದಸ್ಯರು ತಂದಿದ್ದ ನಿಲುವಳಿಸೂಚನೆ ಕೈಗೆತ್ತಿಕೊಳ್ಳಲು ಸಾಧ್ಯವಿಲ್ಲ, ಪ್ರಕರಣಕ್ಕೆ ಸಂಬಂಧಿಸಿದಂತೆ ಈಗಾಗಲೇ ನ್ಯಾಯಾಂಗ ತನಿಖೆ ಆರಂಭಗೊಂಡಿದೆ, ಈ ಕಾರಣದಿಂದ ಸದನದಲ್ಲಿ ಚರ್ಚೆಗೆ ಅವಕಾಶ ಸಾಧ್ಯವಿಲ್ಲ ಎಂದು ರೂಲಿಂಗ್ ನೀಡಿದರು.

ಭೋಜನ ವಿರಾಮದ ನಂತರ ಮತ್ತೆ ಸದನ ಸಮಾವೇಶಗೊಂಡಾಗ, ಪ್ರತಿಪಕ್ಷ ಸುನೀಲ್‌ಕುಮಾರ್ ಮಾತನಾಡಿ, ಮುಡಾ ಹಗರಣದ ಮೇಲಿನ ನಿಲುವಳಿ ಸೂಚನೆಗೆ ನೀವು ನೀಡಿರುವ ರೂಲಿಂಗ್ ಅನ್ನು ಮರುಪರಿಶೀಲಿಸಬೇಕೆಂದು ಮನವಿ ಮಾಡಿದರು.

ಮುಖ್ಯಮಂತ್ರಿ ಅವರೇ ಹಗರಣದಲ್ಲಿ ಆರೋಪಿಯಾಗಿದ್ದಾರೆ, ಕೋಟ್ಯಾಂತರ ರೂ. ಹಗರಣ ನಡೆದಿದೆ, ಚರ್ಚೆಗೆ ಅವಕಾಶ ಮಾಡಿಕೊಡುವಂತೆ ಮಾಡಿದ ಮನವಿಗೆ ಸಭಾಧ್ಯಕ್ಷರು, ಈಗ ಮಸೂದೆಗಳನ್ನು ತೆಗೆದುಕೊಳ್ಳೋಣ, ನಿಮ್ಮ ಕೋರಿಕೆಯನ್ನು ನಂತರ ಪರಿಶೀಲಿಸುತ್ತೇನೆ ಎಂದರು.

ತಕ್ಷಣವೇ ಮುಖ್ಯಮಂತ್ರಿ ಎದ್ದು ನಿಂತು, ಒಂದು ಬಾರಿ ರೂಲಿಂಗ್ ನೀಡಿದ ನಂತರ ಮತ್ತದೇ ವಿಷಯ ಪ್ರಸ್ತಾವಕ್ಕೆ ಅವಕಾಶ ಸಾಧ್ಯವಿಲ್ಲ ಎಂದು ಸಭಾಧ್ಯಕ್ಷರಿಗೆ ಹೇಳಿದರು. ಸಭಾಧ್ಯಕ್ಷರು ಮಾತನಾಡಿ, ಎರಡು ವರ್ಷಗಳ ಹಿಂದಿನ ಹಗರಣವನ್ನು ಇಲ್ಲಿ ಪ್ರಸ್ತಾಪ ಮಾಡುತ್ತಿದ್ದೀರಿ, ಹಗರಣಕ್ಕೆ ಸಂಬಂಧಿಸಿದಂತೆ ನ್ಯಾಯಾಂಗ ತನಿಖೆ ನಡೆಯುತ್ತಿದೆ. ಅದರ ಮುಂದೆ ನಿಮ್ಮ ದಾಖಲೆಗಳನ್ನು ನೀಡಿ ಎಂದು ವಿಷಯಕ್ಕೆ ತೆರೆ ಎಳೆದು ಮಸೂದೆಗಳ ಮಂಡನೆಗೆ ಅವಕಾಶ ಮಾಡಿದರು. ಇದನ್ನು ಬಲವಾಗಿ ವಿರೋಧಿಸಿದ ಪ್ರತಿಪಕ್ಷ ಸದಸ್ಯರು, ಸಭಾಧ್ಯಕ್ಷರ ವಿರುದ್ಧವೇ ತಿರುಗಿಬಿದ್ದರಲ್ಲದೆ, ಮುಡಾ ಹಗರಣ ಬಗ್ಗೆ ಎಳೆ ಎಳೆಯಾಗಿ ಬಿಡಿಸಿಟ್ಟು ಭಾರಿ ಗದ್ದಲ ಎಬ್ಬಿಸಿ ಜೆಡಿಎಸ್ ಸದಸ್ಯರ ಜೊತೆಗೂಡಿ ಅಹೋರಾತ್ರಿ ಧರಣಿ ಆರಂಭಿಸಿದರು. ಗದ್ದಲದ ನಡುವೆಯೇ ಮಸೂದೆಗಳಿಗೆ ಅಂಗೀಕಾರ ಪಡೆದ ಸಭಾಧ್ಯಕ್ಷರು ಕಲಾಪವನ್ನು ಮುಂದೂಡಿದರು.

ಎಂಟು ಅಂಶಗಳ ಮಾಹಿತಿ ಕೋರಿಕೆ

ಬಳಸಿಕೊಳ್ಳಲಾಗಿದೆ. ■ಯಾವುದೇ ಭೂಸ್ವಾಧೀನ ಪ್ರಕ್ರಿಯೆಗೊಳಪಡಿಸದೇ ಮತ್ತು ಭೂಸ್ವಾಧೀನ ಪ್ರಕ್ರಿಯೆಯಿಂದ ಕೈಬಿಟ್ಟ ಜಮೀನನ್ನು ಬಡಾವಣೆ ರಚನೆಗೆ ಬಳಸಿದ ಪ್ರಕರಣಗಳಲ್ಲಿ ಭೂ ಮಾಲೀಕರಿಗೆ ಪರಿಹಾರವಾಗಿ ನೀಡಿರುವ ವಿಧಾನಗಳೇನು? ಈ ರೀತಿ ನೀಡಿರುವ ಪರಿಹಾರ ಕಾನೂನಾತ್ಮಕವಾಗಿದೆಯೇ?

■ಭೂಸ್ವಾಧೀನ ಪ್ರಕ್ರಿಯೆಗೆ ಬದ್ಧವಾಗಿರದೆ ಬಡಾವಣೆಗಾಗಿ ಭೂಮಿ ಸ್ವಾಧೀನಪಡಿಸಿಕೊಂಡಿರುವ ಭೂಮಿಯನ್ನು ಕಳೆದುಕೊಂಡವರಿಗೆ ನಿವೇಶನಗಳ ರೂಪದಲ್ಲಿ ಪರಿಹಾರ ನೀಡುವುದು ಕಾನೂನಿನ ದೃಷ್ಟಿಯಲ್ಲಿ ಅನುಮತಿಸಲಾಗಿದೆಯೇ? ■ಮುಡಾದಲ್ಲಿ ನಡೆದಿರುವ ಭೂಸ್ವಾಧೀನ ಪ್ರಕ್ರಿಯೆಗಳಲ್ಲಿ, ಬಡಾವಣೆ ರಚನೆಯಲ್ಲಿ, ಬದಲಿ ನಿವೇಶನ ಹಂಚಿಕೆಗಳಲ್ಲಿ 2006ರಿಂದ 2024, ಜುಲೈ 15ರವರೆಗೆ ನಡೆದಿರಬಹುದಾದ ಎಲ್ಲಾ ಅಕ್ರಮಗಳನ್ನು ಗುರ್ತಿಸಿ ವರದಿ ಕೊಡುವುದು. ■ಎಲ್ಲಾ ಅಕ್ರಮ ನಿವೇಶನಗಳು, ಪರ್ಯಾಯ ನಿವೇಶನಗಳು, ಅಕ್ರಮ ಪರಿಹಾರದ ನಿವೇಶನ/ಭೂಮಿ ಮಂಜೂರು ಮಾಡಿದ ಫಲಾನುಭವಿಗಳನ್ನು ಗುರ್ತಿಸಿ ಅಂತಹ ಪ್ರಕರಣಗಳಲ್ಲಿ ನೀಡಿರುವ ಜಮೀನು, ನಿವೇಶನ, ಪರಿಹಾರದ ಹಣವನ್ನು ಮುಡಾಗೆ ಹಿಂಪಡೆಯುವ ಬಗ್ಗೆ ಅಗತ್ಯ ಕ್ರಮಗಳನ್ನು ಸೂಚಿಸುವುದು.

■ಕಾನೂನುಬಾಹಿರವಾಗಿ ಪರಿಹಾರದ ರೂಪದಲ್ಲಿ ನಿವೇಶನ, ಭೂಮಿ ನೀಡಿದ್ದಲ್ಲಿ ಅದನ್ನು ಗುರ್ತಿಸಿ ಸೂಕ್ತ ಕ್ರಮ ಜರುಗಿಸಲು ಸಲಹೆ ನೀಡುವುದು.

■ಕಾನೂನಿನಲ್ಲಿ ಸ್ವಾಧೀನ ಪ್ರಕ್ರಿಯೆಗಳಿಲ್ಲದೆ ಮುಡಾ ವಶಪಡಿಸಿಕೊಂಡ ಜಮೀನುಗಳಿಗೆ ಪರಿಹಾರದ ಬದಲಾಗಿ ನಿವೇಶನಗಳನ್ನು ಮಂಜೂರು ಮಾಡಲು ಮುಡಾ ಕೈಗೊಂಡ ನಿರ್ಣಯಗಳು ಕಾನೂನುಬದ್ಧವಾಗಿವೆಯೇ?

8. ಪ್ರಾಧಿಕಾರದಿಂದ 2006ರಿಂದ 2024ರ ಜುಲೈ 15ರವರೆಗೆ ಹಂಚಿಕೆ ಮಾಡಿರುವ ಸಿಎ ನಿವೇಶನಗಳಿಗೆ ಸಂಬಂಧಿಸಿದಂತೆ ನಡೆದಿರುವ ಅಕ್ರಮಗಳ ಬಗ್ಗೆ ಆಯೋಗವು ಕಮಿಷನ್ಸ್ ಆಫ್ ಎನ್‌ಕ್ವೈರಿ ಆ್ಯಕ್ಟ್ 1952 ಹಾಗೂ ಕೋಡ್ ಆಫ್ ಸಿವಿಲ್ ಪ್ರೊಸೀಜರ್‌ನಲ್ಲಿ ದತ್ತವಾದ ಅವಕಾಶದಂತೆ ತನಿಖೆ ನಡೆಸಿ 6 ತಿಂಗಳೊಳಗಾಗಿ ಸರ್ಕಾರಕ್ಕೆ ವರದಿ ಸಲ್ಲಿಸುವಂತೆ ಅಧಿಸೂಚನೆಯಲ್ಲಿ ಸೂಚಿಸಲಾಗಿದೆ.

'ಹನ್ಸ್' ತಯಾರಿಕಾ ಘಟಕ ಪತ್ತೆ

ಸರಬರಾಜುದಾರ ಶ್ರೀರಾಂಪುರದ ರಿಂಗ್ ರಸ್ತೆ ಜಂಕ್ಷನ್ ಬಳಿಗೆ ಗ್ರಾಹಕರನ್ನು (ಸಿಸಿಬಿ ಪೊಲೀಸರು) ಬರುವಂತೆ ತಿಳಿಸಿದ್ದಾನೆ. ಅದರಂತೆ ಅಲ್ಲಿಗೆ ತೆರಳಿದ ಪೊಲೀಸರು, ಹನ್ಸ್ ಸಮೇತ ಆತನನ್ನು ವಶಕ್ಕೆ ಪಡೆದು ವಿಚಾರಣೆಗೊಳಪಡಿಸಿದಾಗ ಬೆಚ್ಚಿ ಬೀಳಿಸುವಂತಹ ಸಂಗತಿ ಹೊರ ಬಂದಿದೆ.

ಮೈಸೂರು ತಾಲೂಕು ಕೋಟೆಹುಂಡಿ ಬಳಿ ಶೆಡ್‌ವೊಂದರಲ್ಲಿ ನಕಲಿ ಹನ್ಸ್ ತಯಾರಿಸುವ ಘಟಕವಿದೆ ಎಂಬ ವಿಚಾರ ತಿಳಿಯುತ್ತಿದ್ದಂತೆಯೇ ತಡ ಮಾಡದೇ ತಮ್ಮ ಸಿಬ್ಬಂದಿಯೊಂದಿಗೆ ಅಲ್ಲಿಗೆ ತೆರಳಿದ ಸಂದೇಶ್ ಕುಮಾರ್ ನೋಡಿದ್ದಂತೂ ನೈಜ ಹನ್ಸ್ ತಯಾರಿಕಾ ಘಟಕವನ್ನು ಮೀರಿಸುವಂತಹ ವ್ಯವಸ್ಥೆ. ಮೂಟೆಗಟ್ಟಲೆ ತಂಬಾಕು, ಹನ್ಸ್ ತಯಾರಿಸುವ 3 ಯಂತ್ರಗಳು ಕಾರ್ಯ ನಿರ್ವಹಿಸುತ್ತಿದ್ದವು. ಒಂದು ಯಂತ್ರದಲ್ಲಂತೂ ನಿಮಿಷಕ್ಕೆ 40 ರಿಂದ 50 ಹನ್ಸ್ ಕೋಚ್‌ಗಳು ಪ್ಯಾಕ್ ಆಗಿ ಹೊರ ಬರುತ್ತಿದ್ದುದು ಕಂಡು ಬಂತು. ಅಂಗಡಿಗಳಿಗೆ ಹನ್ಸ್ ಸರಬರಾಜು ಮಾಡುತ್ತಿದ್ದವನು ಹಾಗೂ ನಕಲಿ ಹನ್ಸ್ ತಯಾರಿಕಾ ಘಟಕದಲ್ಲಿ ಇದ್ದವರೂ ಸೇರಿದಂತೆ ನಾಲ್ವರನ್ನು ವಶಕ್ಕೆ ಪಡೆದು ವಿಚಾರಣೆಗೊಳಪಡಿಸಿದಾಗ ಈ ಘಟಕದಿಂದ ಮೈಸೂರು ನಗರ, ಜಿಲ್ಲೆ ಮಾತ್ರವಲ್ಲದೆ, ನೆರೆಯ ಕೇರಳಾಗೂ ಲಾರಿಗಳಲ್ಲಿ ಹನ್ಸ್ ಸರಬರಾಜಾಗುತ್ತಿದೆ ಎಂಬ ವಿಚಾರ ತಿಳಿದು ಬಂದಿದೆ.

ತಾವು ವಶಕ್ಕೆ ಪಡೆದಿದ್ದ ವ್ಯಕ್ತಿಗಳನ್ನು ಸಿಸಿಬಿ ಪೊಲೀಸರು ನಜರ್‌ಬಾದ್ ಠಾಣೆಗೆ ಒಪ್ಪಿಸಿದ್ದಾರೆ. ಅಲ್ಲಿನ ಇನ್ಸ್‌ಪೆಕ್ಟರ್ ಮಹದೇವಸ್ವಾಮಿ, ನಕಲಿ ಹನ್ಸ್ ತಯಾರಿಕೆಗೆ ಬಳಸುತ್ತಿದ್ದ ಕಚ್ಚಾ ಪದಾರ್ಥ, ಪ್ಯಾಕ್ ಆಗಿದ್ದ ನಕಲಿ ಹನ್ಸ್, ಪ್ಯಾಕಿಂಗ್‌ಗೆ ಬಳಸುವ ಪದಾರ್ಥಗಳನ್ನು ತಮ್ಮ ವಶಕ್ಕೆ ಪಡೆದುಕೊಂಡು ಪ್ರಕರಣ ದಾಖಲಿಸಿ ತನಿಖೆ ಮುಂದುವರೆಸಿದ್ದಾರೆ. ಪೊಲೀಸ್ ಮೂಲಗಳ ಪ್ರಕಾರ ಇಟ್ಟಿಗೆಗೂಡಿನ ವ್ಯಾಪಾರಿಯೋರ್ವ ಹಾಗೂ ಕೇರಳದ ವ್ಯಕ್ತಿಯೋರ್ವನನ್ನು ನಜರ್‌ಬಾದ್ ಠಾಣೆ ಪೊಲೀಸರು ಬಂಧಿಸಿ ವಿಚಾರಣೆಗೊಳಪಡಿಸಿದ್ದಾರೆ. ನಕಲಿ ಹನ್ಸ್ ತಯಾರಿಕಾ ಘಟಕವಿರುವ ಕೋಟೆಹುಂಡಿ ಗ್ರಾಮ ಮೈಸೂರು ಗ್ರಾಮಾಂತರ ಠಾಣಾ ವ್ಯಾಪ್ತಿಗೆ ಒಳಪಡುತ್ತದೆ. ಒಂದು ವರ್ಷಕ್ಕಿಂತ ಹೆಚ್ಚು ಕಾಲದಿಂದ ಅಲ್ಲಿ ನಕಲಿ ಹನ್ಸ್ ತಯಾರಾಗುತ್ತಿದ್ದರೂ, ಮೈಸೂರು ಗ್ರಾಮಾಂತರ ಠಾಣಾ ಪೊಲೀಸರ ಗಮನಕ್ಕೆ ಬಾರದೇ ಇದ್ದದ್ದು ಹಲವಾರು ಅನುಮಾನಗಳಿಗೆ ಕಾರಣವಾಗಿದೆ. ಕಳೆದ ಎರಡು ವರ್ಷದ ಹಿಂದೆ ಮೈಸೂರು ಗ್ರಾಮಾಂತರ ಠಾಣಾ ವ್ಯಾಪ್ತಿಗೊಳಪಟ್ಟ ಉತ್ತನಹಳ್ಳಿ ಸಮೀಪ ನಕಲಿ ನಂದಿನಿ ತುಪ್ಪ ತಯಾರಿಕಾ ಘಟಕ ಪತ್ತೆಯಾಗಿದ್ದನ್ನು ಸ್ಮರಿಸಬಹುದು.

ರಾರಾಜಿಸುತ್ತಿರುವ ಕಾವೇರಿ

98.679 ಟಿಎಂಸಿ ಎಂದರು. ತಮಿಳುನಾಡಿಗೆ ಪ್ರತಿದಿನ ಒಂದು ಟಿಎಂಸಿ ನೀರು ಬಿಡುಗಡೆ ಮಾಡುವಂತೆ ಕಾವೇರಿ ನೀರು ನಿಯಂತ್ರಣ ಸಮಿತಿ ಜುಲೈ 11ರಂದು ಶಿಫಾರಸು ಮಾಡಿತ್ತು. ನಾಲ್ಕು ಜಲಾಶಯಗಳ ಕೇವಲ ಶೇ.15.72 ವಿಸ್ತೀರ್ಣ ಪರಿಗಣಿಸಿ ಸಮಿತಿ ಈ ಸೂಚನೆ ನೀಡಿತ್ತು. ಜೂನ್‌ನಿಂದ ಜುಲೈ 12ರವರೆಗೆ ರಾಜ್ಯದಲ್ಲಿ ಮಳೆಯ ಪ್ರಮಾಣ ಕಡಿಮೆ ಇತ್ತು. ಆದರೆ, ತಮಿಳುನಾಡಿನ ನದಿ ಮುಖಜ ಭೂಮಿಯಲ್ಲಿ ಉತ್ತಮ ಮಳೆಯಾಗಿತ್ತು. ತಮಿಳುನಾಡಿನ ಮೂರು ಜಲಾಶಯಗಳ ಜಲವರ್ಷದ ಅಂತ್ಯಕ್ಕೆ ಕ್ಯಾರಿಓವರ್ ಸಂಗ್ರಹ ಮತ್ತು ಜಲಾನಯನ ಪ್ರದೇಶದ ಜಲ ವಿಜ್ಞಾನ ಪರಿಸ್ಥಿತಿ ಪರಿಗಣಿಸಿ ಪ್ರಾಧಿಕಾರ ಹಾಗೂ ಸಮಿತಿ ಆದೇಶ ನೀಡಬೇಕು ಎಂದು ಆಗ್ರಹಿಸಲಾಗಿತ್ತು.

ಸದ್ಯಕ್ಕಿಲ್ಲ ತಮಿಳುನಾಡಿನ ಕ್ಯಾತೆ: ಮಾತೆತ್ತಿದರೆ ತಮಿಳುನಾಡು ಕಾವೇರಿ ನದಿ ನೀರಿಗಾಗಿ ಸಿಡಬ್ಲ್ಯೂಆರ್‌ಸಿ ಮೊರೆ ಹೋಗುತ್ತಿತ್ತು. ಆದರೆ, ಪ್ರಾಧಿಕಾರ ಹಲವು ಸಂದರ್ಭದಲ್ಲಿ ಕರ್ನಾಟಕದ ನೀರಿನ ಪರಿಸ್ಥಿತಿಯನ್ನು ಅವಲೋಕನ ಮಾಡದೇ ನೀರು ಬಿಡುವಂತೆ ರಾಜ್ಯಕ್ಕೆ ಸೂಚನೆ ನೀಡುತ್ತಾ ಬಂದಿತ್ತು. ಸದ್ಯಕ್ಕೆ ಡ್ಯಾಂ ಭರ್ತಿಯಾಗಿ ಸಾಕಷ್ಟು ನೀರು ತಮಿಳ್ನಾಡಿಗೆ ಹರಿದು ಹೋಗಿರುವುದರಿಂದ ಸದ್ಯಕ್ಕೆ ತಮಿಳುನಾಡಿನ ಕ್ಯಾತೆ ತಪ್ಪಿದೆ.

ಕಳೆದ ವರ್ಷ ಕರ್ನಾಟಕದಲ್ಲಿ ಬರ ತಾಂಡವವಾಡುತ್ತಿದ್ದರೂ ನೀರು ಬಿಡುವಂತೆ ಸಿಡಬ್ಲ್ಯೂಆರ್‌ಸಿ ಮುಂದೆ ಮನವಿ ಸಲ್ಲಿಸಿ ಪೀಡಿಸಿತು. ಮಂಡ್ಯ, ಬೆಂಗಳೂರು ಸೇರಿದಂತೆ ಹಲವೆಡೆ ಹೋರಾಟಗಳು ನಡೆದರೂ ಪ್ರಯೋಜನವಾಗಿರಲಿಲ್ಲ. ಕೆಲವೊಂದು ಸಂದರ್ಭದಲ್ಲಿ ಅನಿವಾರ್ಯವಾಗಿ ನೀರು ಬಿಡಬೇಕಾದ ಪರಿಸ್ಥಿತಿ ಎದುರಾಗಿತ್ತು.

ಇತ್ತೀಚೆಗೂ ಸರ್ವಪಕ್ಷ ಸಭೆ ನಡೆಸಿ, ತಮಿಳುನಾಡು ಬೇಡಿಕೆ ದಿನಕ್ಕೊಂದು ಟಿಎಂಸಿ ಬದಲು ಸ್ವಲ್ಪ ಪ್ರಮಾಣದಲ್ಲಿ ನೀರು ಹರಿಸಲು ಸರ್ಕಾರ ನಿರ್ಧಾರ ಮಾಡಿತ್ತು. ಆದರೆ ಅಷ್ಟರಲ್ಲಿ ಮಳೆಯಾಗಿ ಕಬಿನಿ ಜಲಾಶಯ ತುಂಬಿದ್ದರಿಂದ ಅಲ್ಲಿಂದ ನೀರು ತಮಿಳುನಾಡಿಗೆ ಹರಿದಿತ್ತು. ಇದೀಗ ಕೆಆರ್‌ಎಸ್ ಸಹ ಭರ್ತಿಯಾಗಿ ಹೆಚ್ಚುವರಿ ನೀರು ತಮಿಳುನಾಡಿಗೆ ಹರಿಯುತ್ತಿದೆ.

ಸಿಎಂ ನಡೆ

ಇಂದು ಸದನದಲ್ಲಿ ಅಂಗೀಕಾರವಾದ ಮೂರು ವಿಧೇಯಕಗಳು ಮತ್ತು ಕೇಂದ್ರ ಸರ್ಕಾರದ ವಿರುದ್ಧ ರಾಜ್ಯ ಸರ್ಕಾರ ಕೈಗೊಂಡಿರುವ ಮೂರು ನಿರ್ಣಯಗಳನ್ನು ರಾಜ್ಯಪಾಲರ ಗಮನಕ್ಕೆ ತಂದಿದ್ದಾರೆ. ಸದನದಲ್ಲಿ ನಡೆಯುತ್ತಿರುವ ಕಾರ್ಯಕಲಾಪದ ವಿವರ ಮತ್ತು ಬೆಳವಣಿಗೆಗಳನ್ನು ಸಹ ಅವರು ರಾಜ್ಯಪಾಲರಿಗೆ ತಿಳಿಸಿದ್ದಾರೆ.

ಸಿಎಂ ಸಿದ್ದರಾಮಯ್ಯ ಅವರು ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣ, ಮುಡಾ ಅಕ್ರಮಗಳ ತನಿಖೆ ವಿಚಾರ ಹಾಗೂ ಇತರ ಪ್ರಸಕ್ತ ವಿದ್ಯಮಾನಗಳ ಬಗ್ಗೆ ರಾಜ್ಯಪಾಲರಿಗೆ ವರದಿ ನೀಡಿದ್ದಾರೆ ಎನ್ನಲಾಗಿದೆ.

ಗಜಪಯಣಕ್ಕೆ ಆನೆಗಳ ಸಾಗಾಟ ಟೆಂಡರ್‌ನಲ್ಲಿ ಗೊಂದಲ

ತಾಂತ್ರಿಕ ದೋಷವೆಂದು ಟೆಂಡರ್ ರದ್ದು ಪಡಿಸಿದ ಅರಣ್ಯ ಇಲಾಖೆ



ಮೈಸೂರು, ಜು.24(ಎಂಕೆ)– ವಿಶ್ವಪ್ರಸಿದ್ಧ ನಾಡಹಬ್ಬ ಮೈಸೂರು ದಸರಾ ಮಹೋತ್ಸವಕ್ಕೆ ಆರಂಭಿಕ ವಿಘ್ನ ಎದುರಾಗಿದ್ದು, ಗಜಪಯಣ ಕಾರ್ಯಕ್ರಮಕ್ಕಾಗಿ ಇಲಾಖೆ ಕರೆದ ಟೆಂಡರ್ ಪ್ರಕ್ರಿಯೆಯಲ್ಲಿ ಗೊಂದಲ ಉಂಟಾಗಿದೆ.

ಅರಣ್ಯ ಇಲಾಖೆಯು ದಸರಾ ಗಜಪಯಣ ಹಿನ್ನಲೆ ಆನೆಗಳ ಸಾಗಾಟಕ್ಕೆ (ಕರೆತಂದು, ಕರೆದೊಯ್ಯಲು)ಟೆಂಡರ್ ಆಹ್ವಾನಿಸಿದ್ದು, ಅಂದಾಜು 600 ಕಿ.ಮೀ ದೂರವಾಗಲಿದೆ ಎಂದು ತಿಳಿಸಿದೆ. ಟೆಂಡರ್‌ಗೆ ಶ್ರೀರಾಮ ಟ್ರಾನ್ಸ್‌ಪೋರ್ಟ್‌ನ ಅವಿನಾಶ್ 4.25 ಲಕ್ಷ ರೂ. ಬಿಡ್ ಮಾಡಿದರೆ, ಮೌಂಟ್ ಹಿರಾ ಎಂಟರ್‌ಪ್ರೈಸಸ್‌ನ ಶಕೀಬ್, ಕೇವಲ 63 ರೂ.ಗೆ ಬಿಡ್ ಮಾಡಿದ್ದಾರೆ. ನಂತರ ಅದು ಕಿ.ಮೀಗೆ 65 ರೂ. ಎಂದು ತಿಳಿಸಿದ್ದಾರೆ.

ಆನೆಗಳ ಸಾಗಾಟಕ್ಕೆ ತಗಲುವ ಸಂಪೂರ್ಣ ವೆಚ್ಚದ ಮೊತ್ತಕ್ಕೆ ಟೆಂಡರ್ ಕರೆಯಲಾಗಿದ್ದು, ಅದರಂತೆ ಶ್ರೀರಾಮ ಟ್ರಾನ್ಸ್‌ಪೋರ್ಟ್‌ನ ಅವಿನಾಶ್ ಬಿಡ್ ಮಾಡಿದರೆ, ಅವರ ಪ್ರತಿಸ್ಪರ್ಧಿ ಶಕೀಬ್ ಕಿ.ಮೀ ಲೆಕ್ಕದಲ್ಲಿ ಬಿಡ್ ಮಾಡಿದ್ದಾರೆ. ಈ ನಡುವೆ ಅರಣ್ಯ ಇಲಾಖೆ ತಾಂತ್ರಿಕ ದೋಷವೆಂದು ಟೆಂಡರ್ ರದ್ದು ಮಾಡಿರುವುದು ಗೊಂದಲಕ್ಕೆ ಕಾರಣವಾಗಿದೆ.


ಈ ಕುರಿತು ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಿರುವ ಶ್ರೀರಾಮ ಟ್ರಾನ್ಸ್‌ಪೋರ್ಟ್ ಮಾಲೀಕ ಅವಿನಾಶ್, ಅರಣ್ಯ ಇಲಾಖೆಯು ಗಜಪಯಣಕ್ಕೆ ಆನೆಗಳ ಸಾಗಾಟಕ್ಕೆ ಟೆಂಡರ್ ಆಹ್ವಾನಿಸಿದ್ದು, ಅದಕ್ಕೆ ನಾನು 4.25 ಲಕ್ಷ ಬಿಡ್ ಮಾಡಿದ್ದು, ಪ್ರತಿ ಸ್ಪರ್ಧಿ ಶಕೀಬ್ 63 ರೂ.ಗೆ ಬಿಡ್ ಮಾಡಿದ್ದರು. ಆದರೆ ಇಲಾಖೆಯು ತಾಂತ್ರಿಕ ತೊಂದರೆ ಎಂದು ತಿಳಿಸಿ ಟೆಂಡರ್ ರದ್ದು ಪಡಿಸಿದೆ. ಒಟ್ಟಾರೆ ಮೊತ್ತಕ್ಕೆ ಟೆಂಡರ್ ಕರೆದು ಈಗ ಕಿ.ಮೀಟರ್ ಲೆಕ್ಕ ಎನ್ನುತ್ತಿದ್ದಾರೆ. ಅಲ್ಲದೆ ತಾಂತ್ರಿಕ ದೋಷವಾಗಿದೆ ಎಂದು ಹೇಳುತ್ತಿದ್ದಾರೆ. ಇದರಿಂದ ನಮಗೆ ಅನ್ಯಾಯವಾಗಿದೆ ಎಂದು ದೂರಿದ್ದಾರೆ.

ಮೊದಲಿನಿಂದಲೂ ಶಕೀಬ್ ಅವರೇ ಟೆಂಡರ್ ತೆಗೆದುಕೊಳ್ಳುತ್ತಿದ್ದು, ಆರು ಚಕ್ರದ ಲಾರಿಗಳನ್ನು ಆನೆಗಳ ಸಾಗಾಟಕ್ಕೆ ಬಳಸುತ್ತಿದ್ದರು. ನಾವೀಗ ಟೆಂಡರ್‌ಗೆ ಅರ್ಜಿ ಸಲ್ಲಿಸುತ್ತಿದ್ದಂತೆ ಹತ್ತು ಚಕ್ರದ ಲಾರಿಗಳಿಂದ ಆನೆಗಳ ಸಾಗಾಟಕ್ಕೆ ಬಳಸಬೇಕೆಂದು ಹೇಳುತ್ತಿರುವುದು ಹಳೇ ಟೆಂಡರ್‌ದಾರರಿಗೆ ಗುತ್ತಿಗೆ ನೀಡುವ ಹುನ್ನಾರ ನಡೆಸಿರುವಂತಿದೆ. ಇಲಾಖೆಗೆ ಶಕೀಬ್ ಅವರು ಬಿಡ್ ಮಾಡಿರುವಂತೆಯೇ 63 ರೂ.ಗಳಿಗೆ ಆನೆಗಳ ಸಾಗಾಟಕ್ಕೆ ಲಾರಿ ಒದಗಿಸಲು ವ್ಯವಸ್ಥೆ ಮಾಡಬೇಕು. ಇಲ್ಲದಿದ್ದರೆ ಅವರನ್ನು ಕಪ್ಪು ಪಟ್ಟಿ (ಬ್ಲ್ಯಾಕ್ ಲಿಸ್ಟ್)ಗೆ ಸೇರಿಸಬೇಕು ಎಂದು ಆಗ್ರಹಿಸಿದ್ದಾರೆ.

ನ್ಯಾಯ ಒದಗಿಸಲು ನಿರ್ಧಾರ: ಡಿಸಿಎಫ್ ಅವರಿಗೆ ಟೆಂಡರ್ ರದ್ದು ಮಾಡುವ ಅಧಿಕಾರವಿದ್ದು, ಎರಡೂ ಟೆಂಡರ್‌ದಾರರಿಗೂ ನ್ಯಾಯ ಒದಗಿಸಲು ಈ ನಿರ್ಧಾರ ಕೈಗೊಂಡಿದ್ದಾರೆ. ಮುಂದಿನ ತಿಂಗಳು ಗಜ ಪಯಣ ನಡೆಯಬೇಕಿರುವುದರಿಂದ. ಕೆಲವೇ ದಿನಗಳಲ್ಲಿ ಸ್ಥಳೀಯ ಟ್ರಾನ್ಸ್‌ಪೋರ್ಟ್‌ಗಳ ಟೆಂಡರ್ ಕರೆದು, ಜವಾಬ್ದಾರಿ ವಹಿಸಲಿದ್ದೇವೆ ಎಂದು ಅರಣ್ಯ ಇಲಾಖೆ ಅಧಿಕಾರಿ ಸಂತೋಷ್ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ನಾಳೆ ಮೈಸೂರಿಗೆ ಸಿಎಂ ಸಿದ್ದರಾಮಯ್ಯ; ವಿವಿಧ ಕಾರ್ಯಕ್ರಮಗಳಲ್ಲಿ ಭಾಗಿ

ಮೈಸೂರು,ಜು.24(ಪಿಎಂ)– ಮುಖ್ಯಮಂತ್ರಿ ಸಿದ್ದರಾಮಯ್ಯ ಜು.26ರಂದು ಮೈಸೂರಿನಲ್ಲಿ ಪ್ರವಾಸ ಕೈಗೊಂಡಿದ್ದಾರೆ. ಅಂದು ಸಂಜೆ 5ಕ್ಕೆ ಬೆಂಗಳೂರಿನ ಹೆಚ್‌ಎಎಲ್ ವಿಮಾನ ನಿಲ್ದಾಣದಿಂದ ವಿಶೇಷ ವಿಮಾನದಲ್ಲಿ ನಿರ್ಗಮಿಸುವ ಮುಖ್ಯಮಂತ್ರಿಗಳು, ಸಂಜೆ 5.25ಕ್ಕೆ ಮೈಸೂರು ವಿಮಾನ ನಿಲ್ದಾಣಕ್ಕೆ ಆಗಮಿಸಲಿದ್ದಾರೆ.



ನಂತರ ಸಂಜೆ 5.30ಕ್ಕೆ ಇಲ್ಲಿಂದ ನಿರ್ಗಮಿಸುವ ಅವರು, ರಸ್ತೆಯ ಮೂಲಕ ಸಂಜೆ 5.45ಕ್ಕೆ ಮೈಸೂರಿನ ಎಂಜಿ ರಸ್ತೆಯ ರ‍್ಯಾಡಿಸನ್ ಬ್ಲೂ ಹೋಟೆಲ್‌ಗೆ ಆಗಮಿಸಲಿದ್ದಾರೆ. ಬಳಿಕ ಸಂಜೆ 6ಕ್ಕೆ ಜೆ.ಸಿ. ಸ್ಪೋರ್ಟ್ಸ್ ಮೆಡಿಸನ್ ಸೆಂಟರ್ ಮತ್ತು ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ವತಿಯಿಂದ ಇಲ್ಲಿ ಆಯೋಜಿಸಿರುವ ಮೈಸೂರಿನ ಪ್ರಥಮ ರೋಬೋಟಿಕ್ ಜಾಯಿಂಟ್ ರೀಪ್ಲೇಸ್‌ಮೆಂಟ್ ಕೇಂದ್ರದ ಉದ್ಘಾಟನಾ ಸಮಾರಂಭದಲ್ಲಿ ಪಾಲ್ಗೊಳ್ಳಲಿದ್ದಾರೆ.

ನಂತರ ಸಂಜೆ 6.45ಕ್ಕೆ ದಟ್ಟಗಳ್ಳಿಯಲ್ಲಿರುವ ಸಾ.ರಾ.ಕನ್ವೆನ್ಷನ್ ಹಾಲ್‌ಯಲ್ಲಿ ಆಯೋಜಿಸಿರುವ ಎ.ಎಸ್.ನಟರಾಜ್ ಅವರ ವೃತ್ತಿ ಬದುಕಿನ ಸಾಧನೆಯ ಸುವರ್ಣ ಸಂಭ್ರಮ ಮತ್ತು ಗುರುವಂದನೆ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ನಂತರ ಮೈಸೂರಲ್ಲಿ ಅವರು ವಾಸ್ತವ್ಯ ಹೂಡಲಿದ್ದಾರೆ.


ಮೈಸೂರಲ್ಲಿ ತ್ರಿವಳಿ ಮಕ್ಕಳಿಗೆ ಜನ್ಮ ನೀಡಿದ ತಾಯಿ

ಮೈಸೂರು,ಜು.24(ಪಿಎಂ)– ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ಮಹಿಳೆಯೊಬ್ಬರು ಸೋಮವಾರ ಮೂರು ಮಕ್ಕಳಿಗೆ ಜನ್ಮ ನೀಡಿದ್ದಾರೆ.

ಕುವೆಂಪುನಗರದ ಭಾನವಿ ಆಸ್ಪತ್ರೆಯಲ್ಲಿ ಚಂದ್ರಿಕಾ (24) ಎಂಬುವವರು ಎರಡು ಹೆಣ್ಣು ಮತ್ತು ಒಂದು ಗಂಡು ಮಗು ಸೇರಿದಂತೆ ಮೂವರು ಮಕ್ಕಳಿಗೆ ಜನ್ಮ ನೀಡಿದ್ದಾರೆ. ಮೊದಲನೆಯದು ಹೆಣ್ಣು ಮಗು 2.13 ಕೆಜಿ ತೂಕ ಇದ್ದರೆ, ಎರಡನೆಯದು ಗಂಡು ಮಗು 2.08 ಕೆಜಿ ಹಾಗೂ ಮೂರನೆಯದು ಹೆಣ್ಣು ಮಗು 1.7 ಕೆಜಿ ತೂಕ ಹೊಂದಿವೆ. ಆಸ್ಪತ್ರೆಯ ವೈದ್ಯರಾದ ಡಾ.ಆರ್.ಲತಾ, ಡಾ.ಬಿ.ಹೆಚ್.ಶ್ರೀನಿವಾಸ್, ಡಾ.ಮೇಘನಾ, ಡಾ.ಯುವರಾಜ್‌ಶಾಸ್ತ್ರಿ ಯಶಸ್ವಿ ಶಸ್ತ್ರಚಿಕಿತ್ಸೆ ನೆರವೇರಿಸಿದ್ದು, ಮಕ್ಕಳನ್ನು ತೀವ್ರ ನಿಗಾ ಘಟಕದಲ್ಲಿ ಇರಿಸಲಾಗಿದೆ. ತಾಯಿ ಮತ್ತು ಮಕ್ಕಳು ಆರೋಗ್ಯವಾಗಿದ್ದಾರೆಂದು ಆಸ್ಪತ್ರೆ ಮೂಲಗಳು ತಿಳಿಸಿವೆ.

ಪ್ರಜ್ವಲ್ ನಿರೀಕ್ಷಣಾ ಜಾಮೀನು ಅರ್ಜಿ ವಜಾ

ಬೆಂಗಳೂರು: ಹಲವು ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪದ ಮೇಲೆ ಬಂಧನಕ್ಕೊಳಗಾಗಿರುವ ಹಾಸನ ಜೆಡಿಎಸ್ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಅವರ ನಿರೀಕ್ಷಣಾ ಜಾಮೀನು ಅರ್ಜಿ ವಜಾಗೊಂಡಿದೆ. ಎರಡನೇ ಲೈಂಗಿಕ ದೌರ್ಜನ್ಯ ಪ್ರಕರಣದಲ್ಲಿ ನಿರೀಕ್ಷಣಾ ಜಾಮೀನು ಕೋರಿ ಪ್ರಜ್ವಲ್ ರೇವಣ್ಣ ಅವರು ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ಬೆಂಗಳೂರಿನ ಜನಪ್ರತಿನಿಧಿಗಳ ವಿಶೇಷ ಕೋರ್ಟ್ ನ್ಯಾಯಾಧೀಶ ಸಂತೋಷ್ ಗಜಾನನ ಭಟ್, ಅರ್ಜಿ ವಜಾಗೊಳಿಸಿ ಆದೇಶ ಹೊರಡಿಸಿದ್ದಾರೆ.



ಸದ್ಯ ಪರಪ್ಪನ ಅಗ್ರಹಾರ ಜೈಲಿನಲ್ಲಿರುವ ಪ್ರಜ್ವಲ್ ರೇವಣ್ಣ ಸೆರೆವಾಸ ಮುಂದುವರೆಯಲಿದೆ. ನಿನ್ನೆಯಷ್ಟೇ ಪ್ರಜ್ವಲ್ ಸಹೋದರ ಸೂರಜ್ ರೇವಣ್ಣ ಅವರು ಜಾಮೀನಿನ ಮೇಲೆ ಪರಪ್ಪನ ಅಗ್ರಹಾರ ಜೈಲಿನಿಂದ ಬಿಡುಗಡೆಯಾಗಿದ್ದರು. ಇದರ ಖುಷಿಯಲ್ಲಿದ್ದ ಕುಟುಂಬಸ್ಥರು ಇಂದು ಪ್ರಜ್ವಲ್‌ಗೂ ಜಾಮೀನು ಸಿಗಲಿದೆ ಎನ್ನುವ ನಿರೀಕ್ಷೆಯಲ್ಲಿದ್ದರು. ಆದರೆ ಕೋರ್ಟ್, ಪ್ರಜ್ವಲ್ ಜಾಮೀನು ಅರ್ಜಿಯನ್ನು ವಜಾಗೊಳಿಸಿದೆ. ವಿಶೇಷ ಕೋರ್ಟ್ ಜಾಮೀನು ಅರ್ಜಿ ವಜಾಗೊಳಿಸಿರುವುದರಿಂದ ಪ್ರಜ್ವಲ್ ರೇವಣ್ಣ ಈಗ ಹೈಕೋರ್ಟ್ ಮೊರೆ ಹೋಗುವುದು ಅನಿವಾರ್ಯವಾಗಿದೆ.

ದೇಶ - ವಿದೇಶ

ನೇಪಾಳದಲ್ಲಿ ಜಾರಿ ವಿಮಾನ ಪತನ: 18 ಮಂದಿ ಸಾವು



ಕಠ್ಮಂಡು: ನೇಪಾಳ ರಾಜಧಾನಿ ಕಠ್ಮಂಡುವಿನಲ್ಲಿ ಬುಧವಾರ 19 ಜನರನ್ನು ಹೊತ್ತೊಯ್ಯುತ್ತಿದ್ದ ಪ್ರಯಾಣಿಕ ವಿಮಾನವು ಟೇಕಾಫ್ ಸಮಯದಲ್ಲಿ ಪತನಗೊಂಡಿದ್ದು, 18 ಮಂದಿ ಮೃತಪಟ್ಟು ಪೈಲಟ್ ಮಾತ್ರ ಬದುಕುಳಿದಿದ್ದಾರೆ. ವಿಮಾನವು ದೇಶೀಯ ಶೌರ್ಯ ಏರ್‌ಲೈನ್‌ಗೆ ಸೇರಿದ್ದು, ಹಿಮಾಲಯ ಗಣರಾಜ್ಯದ ಪ್ರಮುಖ ಪ್ರವಾಸೋದ್ಯಮ ಕೇಂದ್ರವಾದ ಪೋಖರಾದ ರೆಸಾರ್ಟ್ ಪಟ್ಟಣಕ್ಕೆ ತೆರಳುತ್ತಿತ್ತು. ಇಂದು ಬೆಳಗ್ಗೆ 11.00 ಗಂಟೆ ಸುಮಾರಿಗೆ ಅಪಘಾತ ಸಂಭವಿಸಿದೆ. ಶೌರ್ಯ ಏರ್‌ಲೈನ್ಸ್ ವಿಮಾನವು ಪರೀಕ್ಷಾ ಹಾರಾಟಕ್ಕಾಗಿ ಇಬ್ಬರು ಸದಸ್ಯರನ್ನೊಳಗೊಂಡ ಕಂಪನಿಯ 17 ಸಿಬ್ಬಂದಿಯನ್ನು ಪರೀಕ್ಷಾರ್ಥ ಉಡಾವಣೆಯಾಗಿ ಹೊತ್ತೊಯ್ಯುತ್ತಿತ್ತು. ವಿಮಾನದ ಪೈಲಟ್‌ನನ್ನು ರಕ್ಷಿಸಿ ಚಿಕಿತ್ಸೆ ನೀಡಲಾಗುತ್ತಿದೆ ಎಂದು ನೇಪಾಳಿ ಪೊಲೀಸ್ ವಕ್ತಾರ ಡಾನ್ ಬಹದ್ದೂರ್ ಕರ್ಕಿ ತಿಳಿಸಿದ್ದಾರೆ. ನೇಪಾಳದ ಮಿಲಿಟರಿ ತಂಡ ಹಂಚಿಕೊಂಡ ಚಿತ್ರಗಳು ವಿಮಾನದ ಫ್ಯೂಸ್ಲೇಜ್ ಬೇರ್ಪಟ್ಟು ಸುಟ್ಟುಹೋಗಿವೆ. ಸುಮಾರು ಹನ್ನೆರಡು ಸೈನಿಕರು ಭಗ್ನಾವಶೇಷಗಳ ಮೇಲೆ ನಿಂತಿದ್ದಾರೆ. ನ್ಯೂಸ್ ಪೋರ್ಟಲ್ ಖಬರ್‌ಹಬ್, ರನ್‌ವೇಯಲ್ಲಿ ಸ್ಕಿಡ್ ಆದ ನಂತರ ವಿಮಾನಕ್ಕೆ ಬೆಂಕಿ ಹೊತ್ತಿಕೊಂಡಿದೆ ಎಂದು ವರದಿ ಮಾಡಿದೆ.

ರೈಲ್ವೆ ಹಳಿ ಮೇಲೆ ಬಿದ್ದ ಮಕ್ಕಳ ರಕ್ಷಿಸಲು ತನ್ನ ಪ್ರಾಣ ಕೊಟ್ಟ ತಂದೆ!



ಸಿಡ್ನಿ: ಆಸ್ಟ್ರೇಲಿಯಾದಲ್ಲಿ ಇನ್ಫೋಸಿಸ್ ಟೆಕ್ಕಿಯೊಬ್ಬರು ರೈಲ್ವೆ ಹಳಿಯ ಮೇಲೆ ಬಿದ್ದ ತನ್ನ ಅವಳಿ ಹೆಣ್ಣುಮಕ್ಕಳ ರಕ್ಷಿಸಲು ಪ್ರಯತ್ನಿಸುವಾಗ ದುರಂತ ಸಾವಿಗೀಡಾಗಿದ್ದಾರೆ.

40 ವರ್ಷದ ಆನಂದ್ ರನ್ವಾಲ್ ಇನ್ಫೋಸಿಸ್ ಐಟಿ ಉದ್ಯೋಗಿ. ಆಸ್ಟ್ರೇಲಿಯಾದ ಸಿಡ್ನಿಯಲ್ಲಿ ಕೆಲಸ ಮಾಡುತ್ತಿದ್ದರು. ತಮ್ಮ ಪತ್ನಿ ಮತ್ತು ಅವಳಿ ಹೆಣ್ಣು ಮಕ್ಕಳೊಂದಿಗೆ ಕಾರ್ಲ್ಟನ್ ನಿಲ್ದಾಣದಲ್ಲಿ ಲಿಫ್ಟ್‌ನಿಂದ ಇಳಿದು ಬರುವಾಗ ಅವರ ಅವಳಿ ಹೆಣ್ಣು ಮಕ್ಕಳಿದ್ದ ಪ್ರ್ಯಾಮ್ ಆಕಸ್ಮಿಕವಾಗಿ ರೈಲ್ವೆ ಹಳಿಗೆ ಬಿದ್ದಿದೆ. ಆಗ ಆನಂದ್ ಹೆಣ್ಣು ಮಕ್ಕಳನ್ನು ಉಳಿಸಲು ಪ್ಲಾಟ್ ಫಾರ್ಮ್‌ನಿಂದ ರೈಲ್ವೆ ಹಳಿಗೆ ಇಳಿದಿದ್ದಾರೆ. ಅದೇ ವೇಳೆ ರೈಲು ಬಂದಿದೆ.

ಕೂಡಲೇ ಆನಂದ್ ತಮ್ಮ ಒಂದು ಮಗುವನ್ನು ರಕ್ಷಿಸಿದ್ದು, ಕ್ಷಣಮಾತ್ರ ದಲ್ಲಿ ರೈಲು ಆನಂದ್ ಮತ್ತು ಅವರ ಮತ್ತೋರ್ವ ಮಗುವಿನ ಮೇಲೆ ಹರಿದು ಹೋಗಿದೆ. ಆನಂದ್ ಅವರ ಪತ್ನಿ ಮತ್ತು ಮಗಳನ್ನು ಹತ್ತಿರದ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಿ ಡಿಸ್ಚಾರ್ಜ್ ಮಾಡಲಾಗಿದೆ. ಆನಂದ್ ಮತ್ತು ಅವರ ಕುಟುಂಬವು 2023ರ ಕೊನೆಯಲ್ಲಿ ಸಿಡ್ನಿಗೆ ಸ್ಥಳಾಂತರಗೊಂಡಿತ್ತು.

ಕಾರಿನ ಮೇಲಿದ್ದ ಸ್ಪೈಡರ್ ಮ್ಯಾನ್ ಬಂಧನ



ನವದೆಹಲಿ: ಸಂಚಾರ ನಿಯಮಗಳನ್ನು ಉಲ್ಲಂಘಿಸಿ ಕಾರಿನ ಬಾನೆಟ್ ಮೇಲೆ ಕುಳಿತಿದ್ದ 'ಸ್ಪೈಡರ್ ಮ್ಯಾನ್' ವೇಷಧಾರಿಯನ್ನು ದೆಹಲಿ ಪೊಲೀಸರು ಬಂಧಿಸಿದ್ದಾರೆ. ಸ್ಪೈಡರ್ ಮ್ಯಾನ್ ವೇಷದಲ್ಲಿದ್ದ ವ್ಯಕ್ತಿಯನ್ನು ನಜಾಫ್‌ಗಢದ ಆದಿತ್ಯ (20) ಎಂದು ಗುರುತಿಸಲಾಗಿದೆ. ಕಾರು ಚಾಲಕನನ್ನು ಮಹಾವೀರ್ ಎನ್‌ಕ್ಲೇವ್‌ನಲ್ಲಿ ನೆಲೆಸಿರುವ ಗೌರವ್ ಸಿಂಗ್ (19) ಎಂದು ಗುರುತಿಸಲಾಗಿದೆ. ಆರೋಪಿಗಳು ದೆಹಲಿಯ ದ್ವಾರಕ ನಗರದ ರಸ್ತೆಗಳಲ್ಲಿ ಓಡಾಡಿದ್ದರು.

ಘಟನೆ ಸಂಬಂಧ ಕಾರಿನ ಮಾಲೀಕ ಮತ್ತು ಸ್ಪೈಡರ್ ಮ್ಯಾನ್ ವೇಷಧಾರಿ ವಿರುದ್ಧ ಕ್ರಮ ಜರುಗಿಸುವಂತೆ ಸಾಮಾಜಿಕ ಮಾಧ್ಯಮದಲ್ಲಿ ದೂರು ಬಂದ ಹಿನ್ನೆಲೆಯಲ್ಲಿ ಕ್ರಮಕೈಗೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಸೀಟ್ ಬೆಲ್ಟ್ ಧರಿಸದೇ ಅಪಾಯಕಾರಿ ವಾಹನ ಚಾಲನೆ, ಮಾಲಿನ್ಯ ಪ್ರಮಾಣ ಪತ್ರ ಹೊಂದಿಲ್ಲದಿರುವುದಕ್ಕೆ ಕಾರಿನ ಚಾಲಕನಿಗೆ ರೂ.26,000 ದಂಡ ವಿಧಿಸಲಾಗಿದೆ.

ಕಳೆದ 6 ತಿಂಗಳಲ್ಲಿ ಜಮ್ಮು-ಕಾಶ್ಮೀರಕ್ಕೆ ಕೋಟಿಗೂ ಹೆಚ್ಚು ಪ್ರವಾಸಿಗರು ಭೇಟಿ



ನವದೆಹಲಿ: ಆರ್ಟಿಕಲ್ 370 ರದ್ದತಿಯ ನಂತರ ಜಮ್ಮು ಮತ್ತು ಕಾಶ್ಮೀರ ಪ್ರವಾಸೋದ್ಯಮ ಕ್ಷೇತ್ರವು ಅಭೂತಪೂರ್ವ ಬೆಳವಣಿಗೆ ಕಂಡಿದ್ದು, ಈ ವರ್ಷ ಕಳೆದ ಆರು ತಿಂಗಳಲ್ಲಿ ಒಟ್ಟು 1.08 ಕೋಟಿ ಪ್ರವಾಸಿಗರು ಭೇಟಿ ನೀಡಿದ್ದಾರೆ ಎಂದು ಕೇಂದ್ರ ಗೃಹ ಸಚಿವಾಲಯ ರಾಜ್ಯಸಭೆಗೆ ತಿಳಿಸಿದೆ.

ಜಮ್ಮು ಮತ್ತು ಕಾಶ್ಮೀರ ಸರ್ಕಾರವು ಎಂಎಚ್‌ಎಗೆ ನೀಡಿದ ವರದಿಯನ್ನು ಉಲ್ಲೇಖಿಸಿ ಕೇಂದ್ರ ಗೃಹ ಖಾತೆ ರಾಜ್ಯ ಸಚಿವ ನಿತ್ಯಾನಂದ ರೈ ಅವರು, ಕಾಶ್ಮೀರದ ಪ್ರವಾಸೋದ್ಯಮ ಕ್ಷೇತ್ರವು ಕಳೆದ 3 ವರ್ಷಗಳಲ್ಲಿ ವಾರ್ಷಿಕ ಸರಾಸರಿ ಬೆಳವಣಿಗೆ ದರ ಶೇ.15.13ರಷ್ಟಿದೆ ಎಂದರು. 2024ರ ಜನವರಿಯಿಂದ ಜೂನ್‌ವರೆಗೆ ಒಟ್ಟು 1,08,41,009 ಪ್ರವಾಸಿಗರು ಜಮ್ಮು-ಕಾಶ್ಮೀರಕ್ಕೆ ಭೇಟಿ ನೀಡಿದ್ದಾರೆ ಮತ್ತು 2023ರಲ್ಲಿ 2,11,24,674 ಪ್ರವಾಸಿ ಗರು ಭೇಟಿ ನೀಡಿದ್ದಾರೆ. ಇದು ಇದುವರೆಗಿನ ಸಾರ್ವಕಾಲಿಕ ಗರಿಷ್ಠ ಪ್ರವಾಸಿಗರ ಸಂಖ್ಯೆಯಾಗಿದೆ. 2022ರಲ್ಲಿ 1,88,64,332 ಪ್ರವಾಸಿಗರ ಭೇಟಿ ನೀಡಿದ್ದು, 2021ರಲ್ಲಿ 1,13,14,884 ಮತ್ತು 2020ರಲ್ಲಿ 34,70,834 ಪ್ರವಾಸಿಗರು ಭೇಟಿ ನೀಡಿದ್ದಾರೆ. 2020ರಲ್ಲಿ ಕೋವಿಡ್ ಸಾಂಕ್ರಾಮಿಕ ರೋಗದಿಂದ ಪ್ರವಾಸಿಗರ ಸಂಖ್ಯೆ ಕಡಿಮೆಯಾಗಿದೆ ಎಂದರು.

ಆಸ್ಟ್ರೇಲಿಯನ್ ಮಹಿಳೆ ಮೇಲೆ ಫ್ರಾನ್ಸ್‌ನಲ್ಲಿ ಸಾಮೂಹಿಕ ಅತ್ಯಾಚಾರ



ಪ್ಯಾರಿಸ್: ಆಫ್ರಿಕನ್ ಮೂಲದ ಐವರಿಂದ ಆಸ್ಟ್ರೇಲಿಯನ್ ಮಹಿಳೆ ಮೇಲೆ ಸಾಮೂಹಿಕ ಅತ್ಯಾಚಾರ ನಡೆದಿರುವ ಆಘಾತಕಾರಿ ಘಟನೆ ಬೆಳಕಿಗೆ ಬಂದಿದೆ. 25 ವರ್ಷದ ಆಸ್ಟ್ರೇಲಿಯನ್ ಮಹಿಳೆ ಜೀವ ಉಳಿಸಿಕೊಳ್ಳಲು ಕಬಾಬ್ ಅಂಗಡಿಯೊಳಗೆ ಬಚ್ಚಿಟ್ಟುಕೊಂಡಿರುವ ದೃಶ್ಯ ಆ ಅಂಗಡಿಯ ಸಿಸಿಟಿವಿಯಲ್ಲಿ ಸೆರೆಯಾಗಿದೆ. ಆ ಮಹಿಳೆ ಸಹಾಯಕ್ಕಾಗಿ ಸ್ಥಳೀಯ ಅಧಿಕಾರಿಗಳಿಗೆ ಮನವಿ ಮಾಡಿದ್ದಾರೆ. ದಾಳಿಕೋರರಲ್ಲಿ ಒಬ್ಬ ಕಬಾಬ್ ಅಂಗಡಿಗೆ ಮತ್ತೆ ಬಂದು ಆಕೆಯ ಮೈಕೈ ಮುಟ್ಟುವುದು ಕೂಡ ಸಿಸಿಟಿವಿಯಲ್ಲಿ ಸೆರೆಯಾಗಿದೆ. ಆ ಕಬಾಬ್ ಅಂಗಡಿಯಲ್ಲಿದ್ದ ಜನರು ಆಕೆಯ ಸುತ್ತಲೂ ನಿಂತಿರುವುದು ವಿಡಿಯೋದಲ್ಲಿ ಸೆರೆಯಾಗಿದೆ. ಆದರೆ, ಯಾರೂ ಆಕೆಗೆ ಸಹಾಯ ಮಾಡಲು ಮುಂದೆ ಬರಲಿಲ್ಲ. ಕೊನೆಗೆ ಮಹಿಳೆಯ ಸ್ಥಿತಿಯನ್ನು ನೋಡಿದ ರೆಸ್ಟೋರೆಂಟ್ ಮಾಲೀಕರು ಸಹಾಯ ಮಾಡಲು ಆಕೆಗೆ ಮೊಬೈಲ್ ನೀಡಿದರು. ಆಗ ಆಕೆ ಪೊಲೀಸರಿಗೆ ವಿಷಯ ತಿಳಿಸಿದ್ದಾರೆ.

ಕಾಶ್ಮೀರದಲ್ಲಿ ಭಯೋತ್ಪಾದಕರ ಬಳಗದಲ್ಲಿ ಪೊಲೀಸರು!

ಶ್ರೀನಗರ: ಮಾದಕ ವಸ್ತು ಹಾಗೂ ಭಯೋತ್ಪಾದನೆ ನಡುವೆ ಇರುವ ನಂಟಿನ ಜಾಲದ ವಿರುದ್ಧ 'ಶೂನ್ಯ ಸಹನೆ ನೀತಿ' ಪ್ರದರ್ಶನ ಮಾಡುತ್ತಿರುವ ಸರ್ಕಾರ, ಜಮ್ಮು ಮತ್ತು ಕಾಶ್ಮೀರ ರಾಜ್ಯಾದ್ಯಂತ ಸರ್ಕಾರಿ ಅಧಿಕಾರಿಗಳು ಹಾಗೂ ಸಿಬ್ಬಂದಿ ವಿರುದ್ಧವೇ ಮುಗಿ ಬಿದ್ದಿದೆ! ಉಗ್ರರ ಜೊತೆ ನಂಟು ಹೊಂದಿದ್ದ ನಾಲ್ವರು ಸರ್ಕಾರಿ ಅಧಿಕಾರಿಗಳನ್ನು ಜಮ್ಮು ಮತ್ತು ಕಾಶ್ಮೀರದ ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ, ಸೇವೆಯಿಂದ ವಜಾ ಮಾಡಿದ್ದಾರೆ.

ಸಂವಿಧಾನದ ಆರ್ಟಿಕಲ್ 311 ರ ಅಡಿ ತಮ್ಮ ಅಧಿಕಾರ ಚಲಾಯಿಸಿರುವ ಜಮ್ಮು ಮತ್ತು ಕಾಶ್ಮೀರದ ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ ಅವರ ಕ್ರಮಗಳನ್ನು ಗಮನಿಸಿದರೆ ಭಯೋತ್ಪಾದನೆ ವಿರುದ್ಧ ಎರಡನೇ ಹಂತದ ಹೋರಾಟ ಆರಂಭ ಆಗಿರುವ ಸೂಚನೆ ಎಂದೇ ವಿಶ್ಲೇಷಣೆ ಮಾಡಲಾಗುತ್ತಿದೆ.

ಭಾರತದ ಅತೀ ಎತ್ತರದ ಯುದ್ಧ ಭೂಮಿ ಸಿಯಾಚಿನ್‌ನಲ್ಲಿ ಮೈಸೂರಿನ ಕ್ಯಾಪ್ಟನ್ ಸುಪ್ರೀತಾ ಕಾರ್ಯ ನಿಯೋಜನೆ

ಈ ಸಾಹಸ ಕರ್ತವ್ಯಕ್ಕೆ ನಿಯೋಜನೆಯಾದ ದೇಶದ ಎರಡನೇ ಮಹಿಳಾ ಸೇನಾ ಅಧಿಕಾರಿ





ಲೇಹ್‌ನಲ್ಲಿ ಸಹೋದ್ಯೋಗಿ ಆರ್ಮಿ ಅಧಿಕಾರಿಗಳೊಂದಿಗೆ ಕ್ಯಾಪ್ಟನ್ ಸುಪ್ರೀತಾ. ಲೆಫ್ಟಿನೆಂಟ್ ಆಗಿ ನಿಯೋಜನೆಗೊಂಡಾಗ (ಬಲಚಿತ್ರ) 2021ರಲ್ಲಿ ಪತಿ ಮೇಜರ್ ಜೆರ್ರಿ ಬ್ಲೇಜ್, ತಂದೆ ತಿರುಮಲ್ಲೇಶ, ತಾಯಿ ನಿರ್ಮಲಾರೊಂದಿಗೆ ಸುಪ್ರೀತಾ.

ಮೈಸೂರು, ಜು. 24(ಆರ್‌ಕೆ)- ಮೈಸೂರಿನ ಕ್ಯಾಪ್ಟನ್ ಸಿ.ಟಿ. ಸುಪ್ರೀತಾ ಭಾರತದ ಸೇನೆಯ ಎರಡನೇ ಮಹಿಳಾ ಅಧಿಕಾರಿಯಾಗಿದ್ದು, ಪ್ರಪಂಚದಲ್ಲೇ ಅತೀ ಹೆಚ್ಚು ಎತ್ತರದ ಯುದ್ಧ ಭೂಮಿ ಎನಿಸಿರುವ ಸಿಯಾಚಿನ್ ಗ್ಲೇಸಿಯರ್ ಸ್ಥಳಕ್ಕೆ ನಿಯೋಜನೆಗೊಂಡಿದ್ದಾರೆ.

ಭಾರತೀಯ ಸೇನೆಗೆ ಸೇರುವ ಮೊದಲು ಕ್ಯಾಪ್ಟನ್ ಸುಪ್ರೀತಾ ಹುಣಸೂರಿನ ಶಾಸ್ತ್ರಿ ವಿದ್ಯಾ ಸಂಸ್ಥೆ, ಹೆಚ್.ಡಿ. ಕೋಟೆಯ ಸೆಂಟ್ ಮೇರಿಸ್ ಕಾನ್ವೆಂಟ್ ಮತ್ತು ಕೆ.ಆರ್.ನಗರದ ಸೆಂಟ್ ಜೋಸೆಫ್ ಸ್ಕೂಲ್‌ನಲ್ಲಿ ಶಾಲಾ ಶಿಕ್ಷಣ ಪಡೆದಿದ್ದಾರೆ. ನಂತರ ಅವರು ಮೈಸೂರಿನ ಮರಿಮಲ್ಲಪ್ಪ ಶಿಕ್ಷಣ ಸಂಸ್ಥೆಯಲ್ಲಿ ಪ್ರೌಢಶಾಲೆ ಮತ್ತು ಪದವಿ ಪೂರ್ವ ಶಿಕ್ಷಣ ಪೂರೈಸಿದರು.

ಮೈಸೂರಿನ ಕುವೆಂಪುನಗರದ ಜೆಎಸ್‌ಎಸ್ ಕಾನೂನು ಕಾಲೇಜಿನಲ್ಲಿ ಎಲ್‌ಎಲ್‌ಬಿ ಮಾಡಿರುವ ಅವರು, ಮೈಸೂರು ಗ್ರೂಪ್‌ನಲ್ಲಿ ಎನ್‌ಸಿಸಿ 4 ಕರ್ನಾಟಕ ಏರ್ ಸ್ಕ್ವಾಡ್ರನ್‌ನಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದರು. 2015ರಲ್ಲಿ ನಡೆದ ಅಖಿಲ ಭಾರತ ಸೈನಿಕ ಶಿಬಿರದಲ್ಲಿ ಸುಪ್ರೀತಾ ಪಾಲ್ಗೊಂಡಿದ್ದರು.

ನಂತರ 2016ರ ಗಣರಾಜ್ಯೋತ್ಸವ ಶಿಬಿರದಲ್ಲೂ ಭಾಗಿಯಾಗಿದ್ದ ಅವರು, ಕರ್ನಾಟಕದ ಉತ್ತಮ ಕೆಡೆಟ್ ಎಂಬ ಪ್ರಶಂಸೆ ಪಡೆದರು. 2016ರಲ್ಲಿ ಮಾಲ್ಡೀವ್ಸ್‌ನಲ್ಲಿ ನಡೆದ ಕಾರ್ಯಕ್ರಮದಲ್ಲೂ ಯೂತ್ ಎಕ್ಸ್‌ಚೇಂಜ್ ಕಾರ್ಯಕ್ರಮದಲ್ಲೂ ಪ್ರಮುಖ ಪಾತ್ರ ವಹಿಸಿದ್ದರು.



2024ರ ಜನವರಿ 26ರಂದು ನವದೆಹಲಿಯಲ್ಲಿ ನಡೆದ 75ನೇ ರಿಪಬ್ಲಿಕ್ ಡೇ ಪರೇಡ್‌ನಲ್ಲಿ ಭಾಗವಹಿಸಿದ್ದ ಸುಪ್ರೀತಾ ಮತ್ತು ಮೇಜರ್ ಜೆರ್ರಿ ಬ್ಲೇಜ್.

2020ರ ಅಕ್ಟೋಬರ್‌ನಲ್ಲಿ ನಡೆದ ಆಲ್ ಇಂಡಿಯಾ SSCW (NCC) ಸ್ಪೆಷಲ್ ಎಂಟ್ರಿ-48ನೇ (ಮಹಿಳಾ) ಕೋರ್ಸ್‌ನಲ್ಲೂ ಅವರು 2ನೇ ರ್‍ಯಾಂಕ್ ಗಳಿಸಿದ್ದರು.

2021ರಲ್ಲಿ ಆರ್ಮಿ ಲೆಫ್ಟಿನೆಂಟ್ ಆಗಿ ನೇಮಕಗೊಂಡ ಸುಪ್ರೀತಾ, ನಂತರ ಚೆನ್ನೈನ ಆಫೀಸರ್ಸ್ ಟ್ರೇನಿಂಗ್ ಅಕಾಡೆಮಿ (ಓಟಿಎ)ಯಲ್ಲಿ ತರಬೇತಿ ಪಡೆದು ಆರ್ಮಿ ಏರ್ ಡಿಫೆನ್ಸ್ ಯೂನಿಟ್‌ಗೆ ಸೇರಿದರು. ಸಿಯಾಚಿನ್‌ಗೆ ಸ್ಥಳ ನಿಯುಕ್ತಿಯಾಗುವ ಮುನ್ನ ಅವರು ಅನಂತನಾಗ್, ಜಬಲ್ಪುರ್ ಮತ್ತು ಲೇಹ್‌ನಲ್ಲೂ ಸೇವೆ ಸಲ್ಲಿಸಿದ್ದರು.

ತಲಕಾಡು ಪೊಲೀಸ್ ಠಾಣೆಯಲ್ಲಿ ಪೊಲೀಸ್ ಸಬ್ ಇನ್‌ಸ್ಪೆಕ್ಟರ್ ಆಗಿರುವ ತಿರುಮಲ್ಲೇಶ್ ಚೆಟ್ಟಪ್ಪ ಮತ್ತು ನಿರ್ಮಲಾ ದಂಪತಿ ಪುತ್ರಿಯಾಗಿರುವ ಸುಪ್ರೀತಾ, ಮದ್ರಾಸ್ ರೆಜಿಮೆಂಟ್‌ನ ಮೇಜರ್ ಜೆರ್ರಿ ಬ್ಲೇಜ್ ಅವರನ್ನು ವಿವಾಹವಾಗಿದ್ದಾರೆ.

ಜನವರಿ 26ರಂದು ನವದೆಹಲಿಯ ಕರ್ತವ್ಯ ಪಥದಲ್ಲಿ ನಡೆದ 75ನೇ ಗಣರಾಜ್ಯೋತ್ಸವ ಪರೇಡ್‌ನಲ್ಲಿ ಪಾಲ್ಗೊಂಡಿದ್ದ ಪ್ರಥಮ ಇಂಡಿಯನ್ ಆರ್ಮಿ ದಂಪತಿ ಅಧಿಕಾರಿಗಳೆಂಬ ಹೆಗ್ಗಳಿಕೆಗೂ ಅವರು ಪಾತ್ರರಾಗಿದ್ದಾರೆ.

ತಮ್ಮ ಪುತ್ರಿಯ ಸಾಧನೆಗೆ ಪ್ರತಿಕ್ರಿಯೆ ನೀಡಿರುವ ತಿರುಮಲ್ಲೇಶ್, ಸುಪ್ರೀತಾ ದೇಶದ ಸೇನೆಯಲ್ಲಿ ಸೇವೆಗೆ ಆಯ್ಕೆಯಾಗಿರುವುದು ಹೆಮ್ಮೆ ಎನಿಸಿದೆ. ಈ ಸಾಧನೆಗೆ ನಮ್ಮ ಪ್ರೋತ್ಸಾಹ, ಆಕೆಯ ಪತಿ, ಅತ್ತೆ-ಮಾವನ ಪ್ರೇರಣೆಯೂ ಕಾರಣ ಎಂದಿದ್ದಾರೆ.

ಮೈಸೂರಲ್ಲಿ ಕಾರ್ಗಿಲ್ ವಿಜಯ್ ದಿವಸದ ರಜತ ಮಹೋತ್ಸವದ ಅಂಗವಾಗಿ ನಾಳೆ ಬೈಕ್ ರ್‍ಯಾಲಿ

ಮೈಸೂರು, ಜು.24(ಜಿಎ)-ಕಾರ್ಗಿಲ್ ವಿಜಯ್ ದಿವಸದ ರಜತ ಮಹೋತ್ಸವದ ಅಂಗವಾಗಿ ಅಖಿಲ ಕರ್ನಾಟಕ ಮಾಜಿ ಸೈನಿಕರ ಸಂಘದ ಜಿಲ್ಲಾ ಘಟಕ ಮತ್ತು ರೋಟರಿ ಕ್ಲಬ್ ಆಫ್ ಹೆರಿಟೇಜ್ ಮೈಸೂರು ವತಿಯಿಂದ ಬೈಕ್ ರ್‍ಯಾಲಿಯನ್ನು ಜು.26ರಂದು ಏರ್ಪಡಿಸಲಾಗಿದೆ ಎಂದು ಅಖಿಲ ಕರ್ನಾಟಕ ಮಾಜಿ ಸೈನಿಕರ ಸಂಘದ ಜಿಲ್ಲಾ ಘಟಕ ಜಿಲ್ಲಾಧ್ಯಕ್ಷ ಕೆ.ಪಿ.ದಿವಾಕರ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 9 ಗಂಟೆಯಿಂದ 12 ಗಂಟೆವರೆಗೂ ರ್‍ಯಾಲಿ ನಡೆಯಲಿದ್ದು, ಸುಮಾರು 500 ಮಂದಿ ಭಾಗವಹಿಸಲಿದ್ದಾರೆ. ನಂತರ ವೇದಿಕೆ ಕಾರ್ಯಕ್ರಮವು ಕುವೆಂಪುನಗರದಲ್ಲಿರುವ ಚಿಕ್ಕಮ್ಮಾನಿಕೇತನ ಕಲ್ಯಾಣ ಮಂಟಪದಲ್ಲಿ ನಡೆಯಲಿದ್ದು, ಈ ವೇಳೆ ಯುವ ಪೀಳಿಗೆಗೆ ದೇಶಪ್ರೇಮದ ಅರಿವು ಮೂಡಿಸುವ ಸಲುವಾಗಿ ಹಾಗೂ ಕಾರ್ಗಿಲ್ ಯುದ್ಧದಲ್ಲಿ ವೀರ ಮರಣವನ್ನು ಹೊಂದಿದವರ ಸ್ಮರಣಾರ್ಥವಾಗಿ ಅವರ ಕುಟುಂಬದವರಿಗೆ ಸನ್ಮಾನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದರು.

ಕಾರ್ಯಕ್ರಮಕ್ಕೆ ರೋಟರಿ ಜಿಲ್ಲಾ ಗವರ್ನರ್ ಮೇಜರ್ ಡೋನರ್ ರೊ. ವಿಕ್ರಂ ದತ್ತ, ಮೈಸೂರು-ಕೊಡಗು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ವಿಧಾನಪರಿಷತ್ ಸದಸ್ಯ ಮಂಜೇಗೌಡ, ಶಾಸಕರಾದ ಕೆ.ಹರೀಶ್‌ಗೌಡ, ಟಿ.ಎಸ್.ಶ್ರೀವತ್ಸ, ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಮತ್ತು ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್ ಅತಿಥಿಗಳಾಗಿ ಆಗಮಿಸುತ್ತಿದ್ದಾರೆ ಎಂದು ತಿಳಿಸಿದರು.

ಬೈಕ್ ರ್‍ಯಾಲಿಯು ಮೈಸೂರು ನಗರದ ಮೆಟ್ರೊಪೋಲ್ ವೃತ್ತದಿಂದ ಆರಂಭವಾಗಿ ರೈಲ್ವೆ ಸ್ಟೇಷನ್ ವೃತ್ತ, ಆಯುರ್ವೇದ ಆಸ್ಪತ್ರೆ ವೃತ್ತ, ಸಯ್ಯಾಜಿ ರಾವ್ ರಸ್ತೆ, ಪ್ರಭಾ ಥಿಯೇಟರ್, ಗಾಂಧಿ ವೃತ್ತ, ದೊಡ್ಡ ಗಡಿಯಾರ, ಜಯ ಚಾಮರಾಜ ಒಡೆಯರ್ ಸರ್ಕಲ್, ಆರ್ಗೇಟ್, ಅರಮನೆ ಮುಂಭಾಗದ ರಸ್ತೆ, ಶ್ರೀ ಶಿವರಾತ್ರೀಶ್ವರ ಸರ್ಕಲ್, ಚಾಮರಾಜ ಜೋಡಿ ರಸ್ತೆ, ರಾಮಸ್ವಾಮಿ ಸರ್ಕಲ್, ಏಕಲವ್ಯ ವೃತ್ತ (ಮಹಾರಾಜ ಮೈದಾನ), ಅಗ್ನಿಶಾಮಕ ಕಚೇರಿಯ ಮುಂಭಾಗ, ಶ್ಯಾಂ ಸ್ಟುಡಿಯೋ, ಅಪೋಲೋ ಆಸ್ಪತ್ರೆ ಜಂಕ್ಷನ್, ಅಕ್ಷರ ಭಂಡಾರ, ವಿಜಯ ಬ್ಯಾಂಕ್ ವೃತ್ತ, ಸೋಮಾನಿ ಕಾಲೇಜು ಮುಂಭಾಗ, ಚಿತ್ರಬಾನು ರಸ್ತೆ, ಕುವೆಂಪುನಗರ ಕಾಂಪ್ಲೆಕ್ಸ್ ಉದಯರವಿ ರಸ್ತೆ ಮಾರ್ಗವಾಗಿ ಚಿಕ್ಕಮ್ಮಾನಿಕೇತನ ಕಲ್ಯಾಣ ಮಂಟಪ ತಲುಪಲಿದೆ ಎಂದು ವಿವರಿಸಿದರು. ಸುದ್ದಿಗೋಷ್ಠಿಯಲ್ಲಿ ರಾಜೇಶ್, ಸುಂದರ್‌ರಾಜ್, ಚಿತ್ರ ಸುಬ್ಬಯ್ಯ ಉಪಸ್ಥಿತರಿದ್ದರು.

ಅರ್ಜಿ ಆಹ್ವಾನ

ಮೈಸೂರು,ಜು.24-ಬೋಗಾದಿ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಡೇ-ನಲ್ಮ್ ಯೋಜನೆಯಡಿ 2024-25ನೇ ಸಾಲಿಗೆ ಮಹಿಳಾ ಸ್ವ-ಸಹಾಯ ಗುಂಪುಗಳ ರಚನೆ, ಪ್ರದೇಶ ಮಟ್ಟದ ಒಕ್ಕೂಟ ರಚನೆ, ಸ್ವ-ಸಹಾಯ ಗುಂಪುಗಳಿಗೆ ಬ್ಯಾಂಕ್ ಸಂಪರ್ಕ ಕಲ್ಪಿಸುವುದು ಮತ್ತು ಸ್ವಯಂ ಉದ್ಯೋಗ ಕಾರ್ಯಕ್ರಮದಲ್ಲಿ ವೈಯಕ್ತಿಕ ಸಾಲ ಸೌಲಭ್ಯಗಳಿಗೆ ಗುರಿ ನಿಗದಿಪಡಿಸಿದ್ದು, ಅರ್ಹ ಬಿ.ಪಿ.ಎಲ್ ಕುಟುಂಬದ ಸದಸ್ಯರಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ. ಸೌಲಭ್ಯ ಪಡೆಯಲು ಇಚ್ಛಿಸುವವರು ಆ.9ರೊಳಗೆ ಅರ್ಜಿ ಸಲ್ಲಿಸಬಹುದು. ಮಾಹಿತಿಗಾಗಿ ಬೋಗಾದಿ ಪಟ್ಟಣ ಪಂಚಾಯಿತಿ ಕಾರ್ಯಾಲಯದ ದೂ.ಸಂ 0821-2331099 ಅಥವಾ ಸಹಾಯವಾಣಿ ಸಂಖ್ಯೆ 080-23108108 ಅನ್ನು ಸಂಪರ್ಕಿಸಬಹುದು

ಅಂಗಾಂಗ ದಾನದಿಂದ ನಾಲ್ವರ ಬಾಳಿಗೆ ಬೆಳಕಾದ ಚಂದ್ರ

ಮೈಸೂರು, ಜು.24(ಜಿಎ)-ಅಪಘಾತಕ್ಕೀಡಾದ 39 ವರ್ಷದ ಸಿ.ಆರ್.ಚಂದ್ರ ಅವರ ಮೆದುಳು ನಿಷ್ಕ್ರಿಯಗೊಂಡ ಹಿನ್ನೆಲೆಯಲ್ಲಿ ಅಂಗಾಂಗ ದಾನ ಮಾಡುವ ಮೂಲಕ ಸಾರ್ಥಕತೆ ಮೆರೆದಿದ್ದಾರೆ.

ಕೂರ್ಗಳ್ಳಿ ನಿವಾಸಿಯಾದ ಚಂದ್ರ ಅವರು ಜು.19ರಂದು ಬೆಳಗ್ಗೆ ಇನ್ಫೋಸಿಸ್ ಫುಡ್ ಕೋರ್ಟ್‌ನಲ್ಲಿ ಕೆಲಸ ಮಾಡುತ್ತಿರುವ ಪತ್ನಿ ಪ್ರೇಮಾ ಅವರನ್ನು ಡ್ರಾಪ್ ಮಾಡಲು ಕೂರ್ಗಳ್ಳಿ ಕಡೆಯಿಂದ ಹೆಬ್ಬಾಳ ಇಂಡಸ್ಟ್ರಿಯಲ್ ಏರಿಯಾದಲ್ಲಿರುವ ಇನ್ಫೋಸಿಸ್‌ಗೆ ಬೈಕ್‌ನಲ್ಲಿ ತೆರಳುತ್ತಿದ್ದರು. ಇನ್ಫೋಸಿಸ್ ಗೇಟ್ ಮುಂದೆ ಸಾಗುತ್ತಿದ್ದಾಗ ಎದುರಿನಿಂದ ಬಂದ ಎಲ್‌ಪಿಜಿ ಸಿಲಿಂಡರ್ ತುಂಬಿದ ಟ್ರಕ್ ಇನ್ಫೋಸಿಸ್ ಗೇಟ್ ಮುಂದೆ ಬೈಕ್‌ಗೆ ಡಿಕ್ಕಿ ಹೊಡೆದ ಪರಿಣಾಮ ಚಂದ್ರ ಅವರ ತಲೆಗೆ ಗಂಭೀರ ಗಾಯವಾಗಿದ್ದು, ಪ್ರೇಮಾ ಅವರಿಗೆ ಸಣ್ಣಪುಟ್ಟ ಗಾಯಗಳಾಗಿವೆ. ನಂತರ ವಿವಿ ಪುರಂ ಸಂಚಾರ ಠಾಣೆ ಪೊಲೀಸರು ಗಾಯಾಳುಗಳನ್ನು ನಗರದ ಖಾಸಗಿ ಆಸ್ಪತ್ರೆಗೆ ರವಾನಿಸಿದ್ದರು.

ಚಂದ್ರ ಅವರನ್ನು ನಂತರ ಅಪೋಲೋ ಬಿಜಿಎಸ್ ಆಸ್ಪತ್ರೆಗೆ ರವಾನಿಸಲಾಗಿದ್ದು, ಜುಲೈ 22ರಂದು ಮೈಸೂರಿನ ಅಪೋಲೊ ಬಿಜಿಎಸ್ ಆಸ್ಪತ್ರೆಯ ಪ್ಯಾನೆಲಿಸ್ಟ್ ವೈದ್ಯರು ಮಾನವ ಅಂಗಗಳ ಕಸಿ ಕಾಯಿದೆ 1994ರ ಆಸ್ಪತ್ರೆಯ ಪ್ರೋಟೋಕಾಲ್ ಪ್ರಕಾರ ಮೆದುಳು ಕಾಂಡದ ವೈಫಲ್ಯದಿಂದಾಗಿ ಮೆದುಳು ನಿಷ್ಕ್ರಿಯಗೊಂಡಿದೆ ಎಂದು ಘೋಷಿಸಿದರು.



ಚಂದ್ರ

ಘಟನೆಯ ಸಮಯದಲ್ಲಿ ಚಂದ್ರ ಆರೋಗ್ಯವಾಗಿರುವುದರಿಂದ ಮತ್ತು ಹೆಚ್ಚಿನ ಪರೀಕ್ಷೆಗಳು ಅಂಗಾಂಗ ದಾನಕ್ಕೆ ಅವರ ಅರ್ಹತೆಯನ್ನು ದೃಢಪಡಿಸಿದ್ದರಿಂದ, ವೈದ್ಯರು ಅವರ ಕುಟುಂಬ ಮತ್ತು ಸಂಬಂಧಿಕರಿಗೆ ಸಲಹೆ ನೀಡಿದರು. ಅವರು ಚಂದ್ರನ ಅಂಗಾಂಗಗಳನ್ನು ದಾನ ಮಾಡಲು ಒಪ್ಪಿಗೆ ನೀಡಿದರು.

ಅಂಗದಾನ ಪ್ರೋಟೋಕಾಲ್‌ಗಳ ಪ್ರಕಾರ (ರಾಜ್ಯ ಅಂಗ ಮತ್ತು ಅಂಗಾಂಶ ಟ್ರಾನ್ಸ್‌ಪ್ಲಾಂಟ್ ಸಂಸ್ಥೆ) ಅಧಿಕಾರಿಗಳು ಈ ಪ್ರಕ್ರಿಯೆಯನ್ನು ಪ್ರಾರಂಭಿಸಿದರು ಮತ್ತು ಚಂದ್ರನ ಯಕೃತ್ತು, ಮೂತ್ರಪಿಂಡಗಳು ಮತ್ತು ಕಾರ್ನಿಯಾಗಳನ್ನು ಕೊಯ್ಲು ಮಾಡಲಾಯಿತು. ಚಂದ್ರ ಅವರ ಅಂಗಾಂಗ ದಾನದಿಂದ ನಾಲ್ವರ ಬಾಳಿಗೆ ಬೆಳಕಾಗಿದ್ದಾರೆ.

ಚಂದ್ರ ಅವರು ಪತ್ನಿ ಪ್ರೇಮಾ, ಪುತ್ರಿಯರಾದ ದಿವ್ಯಾ ಮತ್ತು ಭವ್ಯ ಹಾಗೂ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಮಂಗಳವಾರ ಕೆ.ಆರ್.ನಗರದ ಹನಸೋಗೆ ಗ್ರಾಮದಲ್ಲಿ ಅಂತ್ಯಕ್ರಿಯೆ ನಡೆಯಿತು.

ಡಿಸಿಎಂ ಡಿ.ಕೆ.ಶಿವಕುಮಾರ್ ಭೇಟಿಯಾದ ದರ್ಶನ್ ಪತ್ನಿ ಶ್ರೀಮತಿ ವಿಜಯಲಕ್ಷ್ಮಿ, ಕುಟುಂಬ ಸದಸ್ಯರು

- ಕಾನೂನು ಚೌಕಟ್ಟಿನಲ್ಲಿ ಸಹಾಯ ಕೋರಿಕೆ; ಮಾಧ್ಯಮದ ಮುಂದೆ ವಿಜಯಲಕ್ಷ್ಮಿ ಹೇಳಿಕೆ
- ನಾನಾಗಲೀ, ಸರ್ಕಾರವಾಗಲೀ ಪೊಲೀಸ್ ತನಿಖೆಯಲ್ಲಿ ಹಸ್ತಕ್ಷೇಪ ಮಾಡಲ್ಲ: ಡಿಕೆಶಿ



ಬೆಂಗಳೂರು, ಜು.24(ಕೆಎಂಶಿ)- ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಪ್ರಕರಣದ ಆರೋಪಿ, ನಟ ದರ್ಶನ್ ಅವರ ಪತ್ನಿ ವಿಜಯಲಕ್ಷ್ಮಿ ಮತ್ತು ಕುಟುಂಬ ವರ್ಗದವರು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ಭೇಟಿ ಮಾಡಿರುವುದು ಭಾರಿ ಚರ್ಚೆಗೆ ಗ್ರಾಸವಾಗಿದೆ.

ಉಪಮುಖ್ಯಮಂತ್ರಿ ನಿವಾಸಕ್ಕೆ ಇಂದು ಬೆಳಗ್ಗೆ ದರ್ಶನ್ ಕುಟುಂಬ ಹಾಗೂ ಚಿತ್ರರಂಗದ ಕೆಲವರು ಭೇಟಿ ನೀಡಿದ್ದರು. ಕಾನೂನಿನ ಚೌಕಟ್ಟಿನಲ್ಲಿ ಸಹಾಯ ಮಾಡಿ ಎಂದು ಪತ್ನಿ ವಿಜಯಲಕ್ಷ್ಮಿ ಕೋರಿದ್ದಾರೆ.

ಶಿವಕುಮಾರ್ ಭೇಟಿ ನಂತರ ವಿಜಯಲಕ್ಷ್ಮಿ ಅವರು ಮಾಧ್ಯಮದ ಮುಂದೆ ತಮ್ಮ ಕೋರಿಕೆಯನ್ನು ತಿಳಿಸಿದ್ದಾರೆ.

ಆದರೆ, ನಂತರ ಶಿವಕುಮಾರ್ ಅವರು ಮಾತನಾಡಿ, ದರ್ಶನ್ ಪತ್ನಿ ಹೇಳಿಕೆಯನ್ನು ನಿರಾಕರಿಸಿ, ಈ ವಿಷಯದಲ್ಲಿ ನಾನಾಗಲೀ, ಸರ್ಕಾರವಾಗಲೀ ಹಸ್ತಕ್ಷೇಪ ಮಾಡುವುದಿಲ್ಲ. ಪೊಲೀಸ್ ತನಿಖೆಯಲ್ಲಿ ನಾವು ಹಸ್ತಕ್ಷೇಪ ಮಾಡಲಾಗದು. ಪೊಲೀಸ್‌ನವರು ವಿಚಾರಣೆ ನಡೆಸಿ ಪ್ರಕರಣ ದಾಖಲಿಸಿದ್ದು, ದರ್ಶನ್ ನ್ಯಾಯಾಂಗ ಬಂಧನದಲ್ಲಿದ್ದಾರೆ. ರಾಷ್ಟ್ರದ ಕಾನೂನು ಚೌಕಟ್ಟಿನಲ್ಲೇ ಎಲ್ಲವೂ ನಡೆಯಬೇಕು. ನಾವು ಇದರಲ್ಲಿ ಮಧ್ಯೆ ಪ್ರವೇಶಿಸುವುದಿಲ್ಲ ಎಂದರು.

ದರ್ಶನ್ ಮಗನಿಗೆ ನಮ್ಮ ಶಾಲೆಯಲ್ಲಿ ಮತ್ತೆ ಪ್ರವೇಶ ಕಲ್ಪಿಸುವ ಸಂಬಂಧ ಅವರ ಮನವಿಗೆ ಪ್ರಾಂಶುಪಾಲರನ್ನು ಭೇಟಿ ಮಾಡಲು ಸಲಹೆ ನೀಡಿದ್ದು, ಈ ವಿಷಯದಲ್ಲಿ ನಮ್ಮ ಸಹಕಾರ ಎಷ್ಟು ಸಾಧ್ಯವೋ ಅದನ್ನು ಮಾಡುತ್ತೇನೆ.

ನಮ್ಮ ಮನೆಗೆ ದಿನನಿತ್ಯ ಸಾವಿರಾರು ಜನರು ಬರುತ್ತಾರೆ, ಅಹವಾಲು ಹೇಳುತ್ತಾರೆ, ಅಂತಹವರನ್ನು ನಾನು ಬರಬೇಡಿ ಎಂದು ಹೊರ ಕಳುಹಿಸಲು ಸಾಧ್ಯವೇ ಎಂದು ಪ್ರಶ್ನಿಸಿದರು.

ನಿನ್ನೆ ಕಾರ್ಯಕ್ರಮವೊಂದಕ್ಕೆ ತೆರಳಿದ್ದ ಸಂದರ್ಭದಲ್ಲಿ ವಿಜಯಲಕ್ಷ್ಮಿ ಅವರು ನನ್ನನ್ನು ಭೇಟಿ ಮಾಡಲು ಬಂದಿದ್ದರು. ಇಲ್ಲೆಲ್ಲಾ ಭೇಟಿ ಸಾಧ್ಯವಿಲ್ಲ, ಮನೆಗೆ ಬನ್ನಿ ಎಂದಿದ್ದು, ಅವರು ಇಂದು ಬಂದಿದ್ದರು ಎಂದರು.

ರಾಮನಗರದಲ್ಲಿ ನಡೆದ ಸಭೆಯಲ್ಲಿ ಕೆಲವರು ದರ್ಶನ್ ಅಭಿಮಾನಿಗಳು ಜಾಮೀನು ಪಡೆಯಲು ಸಮಯ ನಿಗದಿಯಾಗುತ್ತಿಲ್ಲ ಎಂಬುದು ಸೇರಿದಂತೆ ಹಲವು ವಿಷಯಗಳ ಬಗ್ಗೆ ಕೂಗಾಡಿ ನನ್ನ ಭಾಷಣಕ್ಕೂ ಅಡ್ಡಿ ಮಾಡುತ್ತಿದ್ದರು.

ತಡಿರೋ ನ್ಯಾಯ ಕೊಡಿಸೋಣ ಎಂದು ಹೇಳಿ ಅವರನ್ನು ಸುಮ್ಮನಾಗಿಸಿದೆ. ಏನು ಮಾಡುವುದು ಅವರು ನಮ್ಮ ಕ್ಷೇತ್ರದವರು, ಆದರೆ ನಾನು ಪೊಲೀಸ್ ವಿಚಾರದಲ್ಲಿ ಹಸ್ತಕ್ಷೇಪ ಮಾಡುವುದಿಲ್ಲ ಎಂದು ಹೇಳಿದರು.

ಗ್ರಾಮೀಣ ರಸ್ತೆ ಸುಧಾರಣೆಗೆ ಕೇಂದ್ರದ ಗ್ರಾಮ ಸಡಕ್, ರಾಜ್ಯದ ಪ್ರಗತಿ ಪಥ ಅನುದಾನ ಬಳಕೆ

ವಿಧಾನಸಭೆಯಲ್ಲಿ ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಮಾಹಿತಿ



ಬೆಂಗಳೂರು, ಜು.24(ಕೆಎಂಶಿ)-ಗ್ರಾಮೀಣ ರಸ್ತೆಗಳ ಸುಧಾರಣೆಗೆ ಕೇಂದ್ರ ಸರ್ಕಾರ ಪುನರಾರಂಭಿಸಿರುವ ಪ್ರಧಾನಮಂತ್ರಿ ಗ್ರಾಮ ಸಡಕ್ ಯೋಜನೆ ಹಾಗೂ ರಾಜ್ಯ ಸರ್ಕಾರದ ಪ್ರಗತಿಪಥ ಯೋಜನೆಯ ಅನುದಾನ ಬಳಸಿಕೊಳ್ಳಲಾಗುವುದು ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ವಿಧಾನಸಭೆಯಲ್ಲಿಂದು ಭರವಸೆ ನೀಡಿದ್ದಾರೆ.

ಬಿ.ಶಿವಣ್ಣ ಹಾಗೂ ರಾಘವೇಂದ್ರ ಬಸವರಾಜ ಹಿಟ್ನಾಳ್ ಅವರ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ಮಳೆಗಾಲದಿಂದ ಗ್ರಾಮೀಣ ಭಾಗದಲ್ಲಿ ರಸ್ತೆಗಳು ಹಾನಿಗೊಳಗಾಗಿವೆ, ಇವುಗಳನ್ನು ದುರಸ್ತಿಪಡಿಸಲು ಮುಖ್ಯಮಂತ್ರಿ ಬಳಿ ಚರ್ಚಿಸಿ ವಿಶೇಷ ಅನುದಾನ ಪಡೆದುಕೊಳ್ಳಲು ಪ್ರಯತ್ನಿಸಲಾಗುವುದು ಎಂದರು.

ಟಾಸ್ಕ್‌ಫೋರ್ಸ್‌ಗೆ ಈಗಾಗಲೇ ನೀಡಲಾಗಿರುವ ಅನುದಾನ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಆರ್ಥಿಕ ಲಭ್ಯತೆ ಜೊತೆಗೆ ವಿಶೇಷ ಅನುದಾನ ಒದಗಿಸಲಾಗುವುದು.

ಕೇಂದ್ರ ಸರ್ಕಾರ ಪ್ರಧಾನಮಂತ್ರಿ ಗ್ರಾಮ ಸಡಕ್ ಯೋಜನೆ ಸ್ಥಗಿತಗೊಳಿಸಿತ್ತು, ನಿನ್ನೆ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಮಂಡಿಸಿರುವ ಬಜೆಟ್‌ನಲ್ಲಿ ಗ್ರಾಮ ಸಡಕ್ ಯೋಜನೆ ಪುನರ್ ಆರಂಭಿಸುವ ಘೋಷಣೆ ಮಾಡಿದ್ದಾರೆ, ಎರಡು ವಾರಗಳ ಹಿಂದೆ ನಡೆದ ರಾಜ್ಯ ಸಚಿವ ಸಂಪುಟ ಸಭೆಯಲ್ಲಿ ಪ್ರಗತಿಪಥ ರಸ್ತೆಗೆ ಅನುಮೋದನೆ ನೀಡಿದೆ, ಈ ಎಲ್ಲಾ ಅನುದಾನ ಬಳಸಿಕೊಂಡು ಗ್ರಾಮೀಣ ಭಾಗದ ರಸ್ತೆಗಳ ಸುಧಾರಣೆ ಮಾಡಲಾಗುವುದು.

ಕಲ್ಯಾಣ ಕರ್ನಾಟಕ ಭಾಗದ ರಸ್ತೆಗಳ ಸುಧಾರಣೆಗಾಗಿ ಕಲ್ಯಾಣಪಥ ಯೋಜನೆ ಜಾರಿಗೆ ತರಲಾಗಿದೆ. ಇದರ ಮಾರ್ಗಸೂಚಿಗಳನ್ನು ಕಾರ್ಯನಿರ್ವಾಹಕ ಅಭಿಯಂತರರಿಗೆ ರವಾನಿಸಲಾಗಿದೆ. ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ಪ್ರಸ್ತಾವಿತ ಯೋಜನೆಗಳಿಗೆ ಮಂಜೂರಾತಿ ನೀಡಿದ್ದು ಅದನ್ನು ಯೋಜನಾ ಇಲಾಖೆಗೆ ಕಳುಹಿಸಿ ಅನುಮೋದನೆ ಪಡೆದ ಬಳಿಕ ರಸ್ತೆ ಸುಧಾರಣೆಗೆ ಅನುದಾನ ಒದಗಿಸುವುದಾಗಿ ತಿಳಿಸಿದರು.

ಕೆಸರು ಗದ್ದೆ ಕ್ರೀಡಾಕೂಟದಲ್ಲಿ ಸಂಭ್ರಮಿಸಿದ ಪತ್ರಕರ್ತರು



ನಲ್ಲೂರು ಗ್ರಾಮದಲ್ಲಿ ನಡೆದ ಕೆಸರು ಗದ್ದೆ ಕ್ರೀಡಾಕೂಟದ ಹಗ್ಗಜಗ್ಗಾಟದಲ್ಲಿ ಭಾಗವಹಿಸಿದ್ದ ಪತ್ರಕರ್ತರು.

ಗೋಣಿಕೊಪ್ಪ, ಜು.24–ನಲ್ಲೂರು ಗ್ರಾಮದ ಪ್ರಗತಿಪರ ಕೃಷಿಕ ಸೋಮೇಂಗಡ ಗಣೇಶ್ ತಿಮ್ಮಯ್ಯ ಅವರ ಗದ್ದೆಯಲ್ಲಿ ಬುಧವಾರ ಆಯೋಜಿಸಿದ್ದ ಕೆಸರು ಗದ್ದೆ ಕ್ರೀಡಾಕೂಟದಲ್ಲಿ ಜಿಲ್ಲೆಯ ಪತ್ರಕರ್ತರು ಪಾಲ್ಗೊಂಡು ಸಂಭ್ರಮಿಸಿದರು.

ಕೊಡಗು ಜಿಲ್ಲಾ, ಪೊನ್ನಂಪೇಟೆ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘ ಮತ್ತು ಕೊಡಗು ಪ್ರೆಸ್ ಕ್ಲಬ್ ವತಿಯಿಂದ ಆಯೋಜಿಸಿದ್ದ ಹ್ಯಾಂಡ್ ಬಾಲ್, ಹಗ್ಗಜಗ್ಗಾಟ, ಓಟ, ಏಡಿ ಹಿಡಿಯುವ ಸ್ಪರ್ಧೆ, ಲೆಮೆನ್ ವಿತ್ ಸ್ಪೂನ್ ನಡಿಗೆ ಸ್ಪರ್ಧೆಯಲ್ಲಿ 70ಕ್ಕೂ ಹೆಚ್ಚು ಪತ್ರಕರ್ತರು ಪಾಲ್ಗೊಂಡಿದ್ದರು.

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಉಪಾಧ್ಯಕ್ಷ ಭವಾನಿ ಸಿಂಗ್ ಠಾಕೂರ್ ಕ್ರೀಡಾಕೂಟಕ್ಕೆ ಚಾಲನೆ ನೀಡಿದರು. ಪ್ರಗತಿಪರ ಕೃಷಿಕ ಸೋಮೇಂಗಡ ಗಣೇಶ್ ತಿಮ್ಮಯ್ಯ ಅವರನ್ನು ಸನ್ಮಾನಿಸಲಾಯಿತು. ಉದ್ಯಮಿ ಬಿ.ಬಿ.ನಾಗರಾಜು, ಕಲಬುರಗಿ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಉಪಾಧ್ಯಕ್ಷ ದೇವೇಂದ್ರಪ್ಪ ಅವಂಟಿ, ಉದ್ಯಮಿ ವಿಷ್ಣು ಬಹುಮಾನ ವಿತರಿಸಿದರು. ತೀರ್ಪುಗಾರರಾಗಿ ರಘು, ಮಹೇಶ್ ಕಾರ್ಯನಿರ್ವಹಿಸಿದರು.

ವಿಜೇತರು: ಹ್ಯಾಂಡ್ ಬಾಲ್‌ನಲ್ಲಿ ಇಸ್ಮಾಯಿಲ್ ಕಂಡಕೆರೆ ನಾಯಕತ್ವದ ಚನ್ನನಾಯಕ, ಸ್ಟಾನ್ಲಿ, ಪ್ರದೀಪ್ ಕುಮಾರ್, ವಿ.ವಿ.ಅರುಣ್ ಕುಮಾರ್, ಕುಡೆಕಲ್ ಗಣೇಶ್, ಜಯಪ್ರಕಾಶ್, ಕುಪ್ಪಂಡ ದತ್ತಾತ್ರಿ, ಜಾಕಿ ದಿವಾಕರ್ ನಾಟಿ ಬಾಯ್ಸ್ ತಂಡ ಪ್ರಥಮ ಹಾಗೂ ನವೀನ್ ಡಿಸೋಜಾ ನಾಯಕತ್ವದ ನವೀನ್ ಸುವರ್ಣ, ಮಂಡೇಡ ಅಶೋಕ್, ರೆಜಿತ್ ಕುಮಾರ್, ಕೃಷ್ಣ, ಮುಸ್ತಫಾ, ಪ್ರಭುದೇವ್, ಎನ್.ಎನ್.ದಿನೇಶ್, ರವಿಕುಮಾರ್, ದಮಯಂತಿ, ವರುಣ್ ಮಡ್ ವಾರಿಯರ್ಸ್ ತಂಡ ದ್ವಿತೀಯ ಸ್ಥಾನ ಗಳಿಸಿತು.


ಹಗ್ಗಜಗ್ಗಾಟದಲ್ಲಿ ಚಿಮ್ಮಣಮಾಡ ದರ್ಶನ್ ದೇವಯ್ಯ ನಾಯಕತ್ವದ ಅಜ್ಜಮಾಡ ರಮೇಶ್ ಕುಟ್ಟಪ್ಪ, ಲೋಹಿತ್, ಪ್ರಸಿನ್‌ಗೌಡ, ಸಂಶುದ್ದೀನ್, ಆಂಥೋಣಿ, ಸಣ್ಣುವಂಡ ಕಿಶೋರ್ ನಾಚಪ್ಪ, ಸವಿತಾ ರೈ, ಹರ್ಷಿತ್ ಏಡಿ ಬಾಯ್ಸ್ ತಂಡ ಪ್ರಥಮ ಹಾಗೂ ಗೋಪಾಲ್ ಸೋಮಯ್ಯ ನಾಯಕತ್ವದ ಕೆ.ಎಂ.ವಿನೋದ್, ಶಿವರಾಜ್, ಮನು, ಆರ್.ಸುಬ್ರಮಣಿ, ಮೊಹಮ್ಮದ್ ಮುಸ್ತಫಾ, ಚೆಪ್ಪುಡೀರ ರೋಶನ್, ಮಚ್ಚಮಾಡ ಅನೀಶ್ ಮಾದಪ್ಪ, ಕಿಶೋರ್ ಶೆಟ್ಟಿ, ಪುತ್ತಮ್ ಪ್ರದೀಪ್ ಮಣ್ಣಿನ ಮಕ್ಕಳ ತಂಡ ದ್ವಿತೀಯ ಸ್ಥಾನ ಪಡೆಯಿತು.

ಮಹಿಳೆಯರ ಲೆಮನ್ ವಿತ್ ಸ್ಪೂನ್ ನಡಿಗೆಯಲ್ಲಿ ಚಂಪಾ ಗಗನ್ ಪ್ರಥಮ, ವಿಶ್ಮಾ ಪೆಮ್ಮಯ್ಯ ದ್ವಿತೀಯ, ದಮಯಂತಿ ತೃತೀಯ ಸ್ಥಾನ ಪಡೆದುಕೊಂಡರು. ಓಟದಲ್ಲಿ ವಿಶ್ಮಾ ಪೆಮ್ಮಯ್ಯ ಪ್ರಥಮ, ಚಂಪಾ ಗಗನ್ ದ್ವಿತೀಯ, ದಮಯಂತಿ ತೃತೀಯ ಹಾಗೂ 4 ವರ್ಷದೊಳಗಿನ ಬಾಲಕರ ಓಟದಲ್ಲಿ ಇಸ್ಮಾಯಿಲ್ ಕಂಡಕೆರೆ ಪ್ರಥಮ, ಆದರ್ಶ್ ದ್ವಿತೀಯ, ನವೀನ್ ಡಿಸೋಜಾ ತೃತೀಯ, 40 ವರ್ಷದ ಪುರುಷರ ವಿಭಾಗದಲ್ಲಿ ಗೋಪಾಲ್ ಸೋಮಯ್ಯ ಪ್ರಥಮ, ಪಾರ್ಥ ಚಿಣ್ಣಪ್ಪ ದ್ವಿತೀಯ, ಚನ್ನನಾಯಕ ತೃತೀಯ ಸ್ಥಾನ ಪಡೆದರು.

ಏಡಿ ಹಿಡಿಯುವ ಸ್ಪರ್ಧೆಯಲ್ಲಿ ಆಂಥೋನಿ–ವಿನೋದ್ ಮೂಡಗದ್ದೆ ಜೋಡಿ ಪ್ರಥಮ, ರೆಜಿತ್ ಕುಮಾರ್ ಗುಹ್ಯ–ಪುತ್ತಮ್ ಪ್ರದೀಪ್ ಜೋಡಿ ದ್ವಿತೀಯ ಸ್ಥಾನ ಪಡೆದರು. ಮನರಂಜನೆಯಲ್ಲಿ ಸಿದ್ದಾಪುರದ ಕೃಷ್ಣ ಪ್ರಥಮ ಬಹುಮಾನ ಪಡೆದರು.

ಕುಮಾರ್ ದೇವಯ್ಯಗೆ ಮೇಜರ್ ಜನರಲ್ ಹುದ್ದೆ

ಮಡಿಕೇರಿ, ಜು.24–ಭಾರತೀಯ ಸೇನೆಯಲ್ಲಿ ಸೇವೆ ಸಲ್ಲಿಸುತ್ತಿರುವ ಕೊಡಗು ಜಿಲ್ಲೆಯ ಕರ್ತಚ್ಚಿರ ಜಿ.ಕುಮಾರ್ ದೇವಯ್ಯ ಅವರು ಮೇಜರ್ ಜನರಲ್ ಹುದ್ದೆಗೆ ಬಡ್ತಿ ಪಡೆದಿದ್ದಾರೆ.



ಕುಮಾರ್ ದೇವಯ್ಯ

ಪ್ರಸ್ತುತ ನವದೆಹಲಿಯ ಸೇನಾ ಪ್ರಧಾನ ಕಚೇರಿಯ ಆರ್ಮಿ ಡೆಂಟಲ್ ದಳದಲ್ಲಿ ಹೆಚ್ಚುವರಿ ಮಹಾನಿರ್ದೇಶಕರಾಗಿ ಸೇವೆ ಸಲ್ಲಿಸುತ್ತಿರುವ ಕುಮಾರ್ ದೇವಯ್ಯ ಅವರಿಗೆ ಸೇನೆ ಮತ್ತು ನೌಕಾಪಡೆ ಸೇವೆ ಪರಿಗಣನೆಯೊಂದಿಗೆ ಬಡ್ತಿ ನೀಡಲಾಗಿದೆ.

ಇವರು ವಿರಾಜಪೇಟೆ ತಾಲೂಕಿನ ಆರ್ಜಿ ಗ್ರಾಮದವರಾಗಿದ್ದು, ದಿ.ಕರ್ತಚ್ಚಿರ ಎಂ.ಗಣಪತಿ ಮತ್ತು ಪೊನ್ನಕ್ಕಿ (ತಾಮನೆ ಪಟ್ಟಮಾಡ) ದಂಪತಿ ಪುತ್ರರಾಗಿದ್ದಾರೆ.

ಬೃಹತ್ ಭೂ ಪರಿವರ್ತನೆ ತಕ್ಷಣ ಸ್ಥಗಿತಗೊಳಿಸಿ

• ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ಒತ್ತಾಯ • ವಿರಾಜಪೇಟೆಯಲ್ಲಿ ಜನಜಾಗೃತಿ

ವಿರಾಜಪೇಟೆ, ಜು.24–ಕೊಡಗು ಜಿಲ್ಲೆಯ ವಿವಿಧೆಡೆ ನಡೆಯುತ್ತಿರುವ ಬೃಹತ್ ಭೂ ಪರಿವರ್ತನೆ ಮತ್ತು ಭೂ ವಿಲೇವಾರಿ ಪ್ರಕ್ರಿಯೆಯನ್ನು ತಕ್ಷಣ ಸ್ಥಗಿತಗೊಳಿಸಬೇಕು ಎಂದು ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ಅಧ್ಯಕ್ಷ ಎನ್.ಯು.ನಾಚಪ್ಪ ಒತ್ತಾಯಿಸಿದರು.

ಇಲ್ಲಿನ ಗಡಿಯಾರ ಕಂಬದ ಬಳಿ ಬುಧವಾರ ಸಿಎನ್‌ಸಿ ವತಿಯಿಂದ ಬೃಹತ್ ಭೂ ಪರಿವರ್ತನೆ ಮತ್ತು ಭೂ ವಿಲೇವಾರಿ ವಿರುದ್ಧ ನಡೆದ ಜನಜಾಗೃತಿ ಮಾನವ ಸರಪಳಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಭೂ, ಕಾರ್ಪೋರೇಟ್ ಮಾಫಿಯಾ ಹಾಗೂ ಕೊಡವ ವಿರೋಧಿ ಕೂಟಗಳು ಸೇರಿ ಆಮದು ಗಿರಿಜನರನ್ನು ಕೊಡಗಿಗೆ ಕರೆತಂದು ಸ್ಥಳೀಯರೆಂದು ಬಿಂಬಿಸಿ ಖ್ಯಾತ ಅರ್ಥಶಾಸ್ತ್ರಜ್ಞ ಡಾ.ಸುಬ್ರಮಣಿಯನ್‌ಸ್ವಾಮಿ ಅವರು ಕೊಡವರ ಪರ ನಡೆಸುತ್ತಿರುವ ಕಾನೂನು ಹೋರಾಟದ ವಿರುದ್ಧ ಅರ್ಜಿ ಸಲ್ಲಿಸಲು ಅಕ್ರಮವಾಗಿ ಹಣ ಸಂಗ್ರಹಿಸುತ್ತಿದ್ದಾರೆ ಎಂದು ಆರೋಪಿಸಿದರು.

ಭಾಗಮಂಡಲದಲ್ಲಿ ಕೊಡವ ಟ್ರಸ್ಟ್ ವತಿಯಿಂದ ನಿರ್ಮಿಸಲು ಉದ್ದೇಶಿಸಿರುವ ಸಮುದಾಯ ಭವನದ ಕಾಮಗಾರಿಗೆ ಭೂ ಪರಿವರ್ತನೆಗೆ ಜಿಲ್ಲಾಡಳಿತ ಅವಕಾಶ ನೀಡಿಲ್ಲ. ಆದರೆ, ಭೂ ಮಾಫಿಯಾ ಮತ್ತು ಕಾರ್ಪೋರೇಟ್ ವಲಯಗಳಿಗೆ ಯಾವುದೇ ವಿಳಂಬ ಮಾಡದೆ ಒತ್ತಡಕ್ಕೆ ಮಣಿದು ಬೃಹತ್ ಭೂ ಪರಿವರ್ತನೆ ಮತ್ತು ಭೂ ವಿಲೇವಾರಿ ಮಾಡಿಕೊಡಲಾಗುತ್ತಿದೆ. ತಡಿಯಂಡ್ ಮೋಳ್‌ನಿಂದ ಪುಷ್ಪಗಿರಿ ಮತ್ತು ಬ್ರಹ್ಮಗಿರಿವರೆಗೆ ನಿಷೇಧಿತ ಪ್ರದೇಶದಲ್ಲಿ ಭೂ ಪರಿವರ್ತನೆಯಾಗುತ್ತಿದೆ. ಆದರೆ, ತಲಕಾವೇರಿ, ಭಾಗಮಂಡಲ ಕೊಡವ ಟ್ರಸ್ಟ್‌ಗೆ ಸಮುದಾಯ ಭವನ ನಿರ್ಮಾಣಕ್ಕೆ ಅವಕಾಶ ನಿರಾಕರಿಸಿರುವುದು ಸಂವಿಧಾನದ ಉಲ್ಲಂಘನೆಯಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.



ವಿರಾಜಪೇಟೆಯಲ್ಲಿ ನಡೆದ ಜನಜಾಗೃತಿ ಮಾನವ ಸರಪಳಿ ಕಾರ್ಯಕ್ರಮದಲ್ಲಿ ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ಮಾತನಾಡಿದರು.

ಕೊಡವರು ತಮ್ಮ ಜನ್ಮಭೂಮಿಯಲ್ಲಿ ನ್ಯಾಯ ಸಮ್ಮತವಾಗಿ ಮನೆ ನಿರ್ಮಿಸಲು ಭೂ ಪರಿವರ್ತನೆಗೆ ಅರ್ಜಿ ಸಲ್ಲಿಸಿದರೆ ಇಲ್ಲಸಲ್ಲದ ನಿಯಮ ರೂಪಿಸಿ ಕಿರುಕುಳ ನೀಡಲಾಗುತ್ತಿದೆ. ಭೂ ಕುಸಿತವಾದ ಮಗ್ಗುಲದ ಮಲೆತಿರಿಕೆ ಬೆಟ್ಟದಲ್ಲಿ ಬೃಹತ್ ರೆಸಾರ್ಟ್ ನಿರ್ಮಾಣಗೊಂಡಿದೆ. ಬಿಟ್ಟಂಗಾಲ ಬಾಳುಗೋಡು ಬಳಿ ದೇವರಕಾಡು ಲೂಟಿ ಮಾಡಿ ಕೊಡವರ ಪವಿತ್ರ ದೇವನೆಲೆ ಬಳಿ ರೆಸಾರ್ಟ್ ಮಾಫಿಯಾ ಮತ್ತು ಡೆವಲಪರ್‌ಗೆ ಟೌನ್‌ಶಿಪ್ ನಿರ್ಮಿಸಲು ಅವಕಾಶ ನೀಡಲಾಗುತ್ತಿದೆ. ಕೊಡವ ಲ್ಯಾಂಡ್‌ನ ಸಂರಕ್ಷಣೆಗಾಗಿ ಸರ್ವ ಕೊಡವರು ಭೂ ಮಾಫಿಯಾ ವಿರುದ್ಧ ಎಚ್ಚೆತ್ತುಕೊಳ್ಳಬೇಕು ತಿಳಿಸಿದರು.

ಇದೇ ವೇಳೆ ಬೃಹತ್ ಭೂ ಪರಿವರ್ತನೆ ಮತ್ತು ಭೂ ವಿಲೇವಾರಿ ವಿರುದ್ಧ ಹಾಗೂ ಕೊಡವ ಲ್ಯಾಂಡ್ ಪರ ಪ್ರತಿಜ್ಞಾವಿಧಿ ಸ್ವೀಕರಿಸಲಾಯಿತು. ಕಾರ್ಯಕ್ರಮದಲ್ಲಿ ಕರ್ನಲ್ ಬಿ.ಎಂ.ಪಾರ್ವತಿ, ಮುದ್ದಿಯಡ ಲೀಲಾವತಿ, ಮನೆಯಪಂಡ ಕಾಂತಿ ಸತೀಶ್, ಬಲ್ಲಡಿಚಂಡ ಬೇಬಿ ಮೇದಪ್ಪ, ಮಾಳೇಟಿರ ಶ್ರೀನಿವಾಸ್, ಮಾಚೇಟಿರ ಚೋಟು ಕಾವೇರಪ್ಪ, ಬಲ್ಲಚಂಡ ರವಿ, ಸೋಮೆಯಂಡ ಬೋಸು, ಕೇಟೋಳಿರ ಸೋಮಣ್ಣ, ಉದಿಯಂಡ ಚೆಂಗಪ್ಪ, ಮಾತಂಡ ಕಂಬ ಉತ್ತಯ್ಯ, ಬಾಳೆಯಡ ಮಂದಪ್ಪ, ಐತಿಚಂಡ ಬನ್ನಿ, ಪಾಲೆಕಂಡ ಪ್ರತಾಪ್, ನಂದೇಟಿರ ರವಿ, ಪುದಿಯೋಕದ ಕಾಶಿ, ಜಮ್ಮಡ ಮೋಹನ್, ಪುಟ್ಟಿಚಂಡ ಡಾನ್ ಮತ್ತಿತರರು ಪಾಲ್ಗೊಂಡಿದ್ದರು.

ಸ್ಥಳೀಯ ಸಮಸ್ಯೆಗಳ ಪರಿಹಾರಕ್ಕೆ ಒತ್ತಾಯ



ನಂಜರಾಯಪಟ್ಟಣ ಗ್ರಾಮ ಪಂಚಾಯಿತಿಯ ಗ್ರಾಮಸಭೆಯಲ್ಲಿ ಅಧ್ಯಕ್ಷ ಸಿ.ಎಲ್.ವಿಶ್ವ ಮಾತನಾಡಿದರು.

ಕುಶಾಲನಗರ, 24–ಸಮೀಪದ ನಂಜರಾಯಪಟ್ಟಣ ಗ್ರಾಮ ಪಂಚಾಯಿತಿಯ ಗ್ರಾಮಸಭೆಯಲ್ಲಿ ಸ್ಥಳೀಯ ಸಮಸ್ಯೆಗಳನ್ನು ಪರಿಹರಿಸುವಂತೆ ಗ್ರಾಮಸ್ಥರು ಒತ್ತಾಯಿಸಿದರು.

ಗ್ರಾಪಂ ಅಧ್ಯಕ್ಷ ಸಿ.ಎಲ್.ವಿಶ್ವ ಅಧ್ಯಕ್ಷತೆಯಲ್ಲಿ ಹೊಸಪಟ್ಟಣ ಗ್ರಾಮದ ಸಮುದಾಯ ಭವನದಲ್ಲಿ ನಡೆದ ಸಭೆಯಲ್ಲಿ ಚಿಕ್ಲಿಹೊಳೆ ವ್ಯಾಪ್ತಿ ಸಮರ್ಪಕವಾಗಿ ಜಂಗಲ್ ಕ್ಲಿಯರ್ ಕಾರ್ಯ ನಡೆಯುತ್ತಿಲ್ಲ. ಮಳೆ ನೀರು ನಾಲೆ ಮೂಲಕ ಕೃಷಿಕರ ಜಮೀನುಗಳಿಗೆ ನುಗ್ಗಿ ಅಪಾರ ಹಾನಿ ಉಂಟಾಗಿದೆ. ಇದರಿಂದ ರೈತರು ಬೇಸತ್ತಿದ್ದಾರೆ ಎಂದು ಗ್ರಾಮಸ್ಥರಾದ ಕಾಳಿಂಗ, ರವಿ ಅಸಮಾಧಾನ ವ್ಯಕ್ತಪಡಿಸಿದರು.

ಚಿಕ್ಲಿಹೊಳೆ ಜಲಾಶಯ ವ್ಯಾಪ್ತಿ ಸ್ಥಳೀಯರಿಗೆ ಉದ್ಯಮಕ್ಕೆ ಅವಕಾಶ ಕಲ್ಪಿಸಬೇಕು. ಇತರೆ ಗ್ರಾಪಂ ವ್ಯಾಪ್ತಿಯ ನಿವಾಸಿಗಳು ಇಲ್ಲಿ ವ್ಯಾಪಾರ ನಡೆಸುತ್ತಿರುವುದು ಖಂಡನೀಯ ಎಂದು ಗ್ರಾಪಂ ಅಧ್ಯಕ್ಷ ಸಿ.ಎಲ್.ವಿಶ್ವ ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಮೀನುಕೊಲ್ಲಿ ಅರಣ್ಯ ವ್ಯಾಪ್ತಿ ಹ್ಯಾಂಗಿಂಗ್ ಸೋಲಾರ್ ಫೆನ್ಸ್‌ಗಳು ನೆಲಕಚ್ಚಿದ್ದು, ಈ ಬಗ್ಗೆ ಅರಣ್ಯ ಇಲಾಖೆ ಗಮನಹರಿಸಬೇಕು ಎಂದು ಸದಸ್ಯ ರಕ್ಷಿತ್ ಮಾವಾಜಿ, ಡಿಆರ್‌ಎಫ್‌ಓ ಸುಬ್ರಾಯ ಅವರನ್ನು ಆಗ್ರಹಿಸಿದರು. ಮಳೆಯಿಂದ ನೆಲಕ್ಕುರುಳಿದ ವಿದ್ಯುತ್ ಕಂಬ, ತಂತಿಗಳನ್ನು ನಿರ್ವಹಣೆ ಮಾಡುವಲ್ಲಿ ಸೆಸ್ಕ್ ವಿಳಂಭ ಧೋರಣೆ ಅನುಸರಿಸಿದೆ ಎಂದು ಸೆಸ್ಕ್ ಅಧಿಕಾರಿಯನ್ನು ತರಾಟೆಗೆ ತೆಗೆದುಕೊಂಡರು.

ಕಾಡಾನೆಗಳ ಹಾವಳಿಯಿಂದ ಬೆಳೆ ನಾಶಕ್ಕೆ ಪರಿಹಾರ ದೊರಕುತ್ತಿಲ್ಲ. ಅರಣ್ಯ ಹಕ್ಕು ಕಾಯ್ದೆ ಅನ್ವಯ ಸೂಕ್ತ ಪರಿಹಾರ ಒದಗಿಸಲು ಕ್ರಮವಹಿಸುವಂತೆ ಸದಸ್ಯ ಆರ್.ಕೆ.ಚಂದ್ರ ಆಗ್ರಹಿಸಿದರು.

ಉಳಿದಂತೆ ಸ್ಮಶಾನ, ಪಡಿತರ ಚೀಟಿ, ಕೆರೆ ಒತ್ತುವರಿ, ಸ್ವಚ್ಛತೆ ಮತ್ತಿತರ ಸಮಸ್ಯೆಗಳ ಬಗ್ಗೆ ಗಂಭೀರವಾಗಿ ಚರ್ಚಿಸಲಾಯಿತು. ಸಭೆಯಲ್ಲಿ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ಸಿದ್ದೇಗೌಡ, ಗ್ರಾಪಂ ಉಪಾಧ್ಯಕ್ಷೆ ಕುಸುಮಾ, ಸದಸ್ಯರಾದ ಸಮೀರ, ಜಾಜಿ, ಲೋಕನಾಥ್, ಗಿರಿಜಮ್ಮ, ಪಿಡಿಓ ರಾಜಶೇಖರ್, ಕಾರ್ಯದರ್ಶಿ ಶೇಷಗಿರಿ ಇದ್ದರು.

ನಾಳೆ ಕಾರ್ಗಿಲ್ ವಿಜಯ್ ದಿವಸ ಆಚರಣೆ

ಮಡಿಕೇರಿ, ಜು.24–ಕೊಡಗು ಹಿಂದೂ ಜಾಗರಣ ವೇದಿಕೆ ಹಾಗೂ ಮಡಿಕೇರಿಯ ಮಾಜಿ ಸೈನಿಕರ ಸಂಘದ ವಯಿತಿಂದ ಜು.26ರಂದು ನಗರದಲ್ಲಿ ಕಾರ್ಗಿಲ್ ವಿಜಯ್ ದಿವಸ ಆಚರಣೆ ಮತ್ತು ರಕ್ತದಾನ ಶಿಬಿರ ನಡೆಯಲಿದೆ.

ಅಂದು ಬೆಳಗ್ಗೆ 9 ಗಂಟೆಗೆ ನಗರದ ಮುಖ್ಯ ರಸ್ತೆಯ ಹುತಾತ್ಮ ಯುದ್ಧ ಸ್ಮಾರಕದಲ್ಲಿ ಕಾರ್ಗಿಲ್ ಸಮರದಲ್ಲಿ ಹುತಾತ್ಮರಾದ ಯೋಧರಿಗೆ ಗೌರವ ನಮನ ಸಲ್ಲಿಸಲಾಗುವುದು.

ಮುಖ್ಯ ಅತಿಥಿಗಳಾಗಿ ಭಾರತೀಯ ನೌಕ ದಳದ ನಿವೃತ್ತ ಸೇನಾಧಿಕಾರಿ ಚೋಂಡಿರ ಸುರೇಶ್, ಮಾಜಿ ಸೈನ್ಯಾಧಿಕಾರಿಗಳು, ಗಣ್ಯರು ಹಾಗೂ ವಿವಿಧ ಸಂಘ–ಸಂಸ್ಥೆಗಳ ಪದಾಧಿಕಾರಿಗಳು ಪಾಲ್ಗೊಳ್ಳಲಿದ್ದು, ಸಾಮಾಜಿಕ ಕಾರ್ಯಕರ್ತ ಎಸ್.ಜಯಪ್ರಕಾಶ್ ದಿಕ್ಸೂಚಿ ಭಾಷಣ ಮಾಡಲಿದ್ದಾರೆ.

ನಂತರ ಬೆಳಗ್ಗೆ 11 ಗಂಟೆಗೆ ನಗರದ ಜಿಲ್ಲಾಸ್ಪತ್ರೆಯ ರಕ್ತನಿಧಿ ಕೇಂದ್ರದ ಸಭಾಂಗಣದಲ್ಲಿ ರಕ್ತದಾನ ಶಿಬಿರ ನಡೆಯಲಿದೆ ಎಂದು ಹಿಂದೂ ಜಾಗರಣ ವೇದಕೆ ಕೊಡಗು ಜಿಲ್ಲಾ ಸಂಯೋಜಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದು ಕುಟ್ಟ, ಟಿ.ಶೆಟ್ಟಿಗೇರಿ ವ್ಯಾಪ್ತಿ ಶಾಲೆಗಳಿಗೆ ರಜೆ

ವಿರಾಜಪೇಟೆ, ಜು.24–ಭಾರಿ ಗಾಳಿ ಮತ್ತು ಮಳೆ ಹಿನ್ನೆಲೆಯಲ್ಲಿ ಪೊನ್ನಂಪೇಟೆ ತಾಲೂಕಿನ ಕುಟ್ಟ ಮತ್ತು ಟಿ.ಶೆಟ್ಟಿಗೇರಿ ಕ್ಲಸ್ಟರ್ ವ್ಯಾಪ್ತಿಯಲ್ಲಿ ಶಾಲೆಗಳಿಗೆ ಜು.25ರಂದು ರಜೆ ನೀಡಲಾಗಿದೆ ಎಂದು ವಿರಾಜಪೇಟೆ ಕ್ಷೇತ್ರ ಶಿಕ್ಷಣಾಧಿಕಾರಿ ಎಂ.ಪ್ರಕಾಶ್ ತಿಳಿಸಿದ್ದಾರೆ. ಪೊನ್ನಂಪೇಟೆ ತಾಲೂಕಿನಲ್ಲಿ ಅಧಿಕ ಮಳೆ ಆಗುತ್ತಿರುವುದರಿಂದ ಕುಟ್ಟ ಮತ್ತು ಟಿ.ಶೆಟ್ಟಿಗೇರಿ ಕ್ಲಸ್ಟರ್ ವ್ಯಾಪ್ತಿಯ 40 ಶಾಲೆಗಳಿಗೆ ರಜೆ ನೀಡಲು ಡಿಡಿಪಿಐ ರಂಗಧಾಮಪ್ಪ ಅವರು ಆದೇಶಿಸಿದ್ದಾರೆ ಎಂದು ತಿಳಿಸಿದ್ದಾರೆ.

ಸರ್ಕಾರಿ ನೌಕರ ಆತ್ಮಹತ್ಯೆ ಶಂಕೆ

ಕುಶಾಲನಗರ, ಜು.24– ಇಲ್ಲಿನ ಟೋಲ್‌ಗೇಟ್ ಬಳಿಯ ಕೊಪ್ಪ ಸೇತುವೆಯಿಂದ ಸರ್ಕಾರಿ ನೌಕರ ಕಾವೇರಿ ನದಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿರುವ ಶಂಕೆಯಿದ್ದು, ಅಗ್ನಿಶಾಮಕ ಸಿಬ್ಬಂದಿ ಬುಧವಾರ ಶೋಧ ಕಾರ್ಯ ನಡೆಸಿದರು.

ಮಡಿಕೇರಿಯ ಉಪವಿಭಾಗಾಧಿಕಾರಿ ಕಚೇರಿಯ ಪ್ರಥಮ ದರ್ಜೆ ಸಹಾಯಕ ಅರುಣ್ ಬುಧವಾರ ಸೇತುವೆಯಿಂದ ನದಿಗೆ ಹಾರಿ ಸ್ವಲ್ಪ ದೂರ ಈಜಾಡಿದ್ದು, ನಂತರ ಕಣ್ಮರೆಯಾಗಿದ್ದಾರೆ ಎನ್ನಲಾಗಿದೆ. ಈ ಸುದ್ದಿ ತಿಳಿದ ಅಗ್ನಿಶಾಮಕ ದಳದ ಸಿಬ್ಬಂದಿ ತೆಪ್ಪದ ಮೂಲಕ ಈತನ ಪತ್ತೆಗಾಗಿ ಶೋಧ ಕಾರ್ಯ ನಡೆಸಿದರು. ಆದರೆ ಯಾವುದೇ ಪತ್ತೆಯಾಗಿಲ್ಲ. ಗುರುವಾರ ಶೋಧ ಕಾರ್ಯ ಮುಂದುವರೆಯಲಿದೆ.

ನೊಂದ ಸಂತ್ರಸ್ತರಿಗೆ ನ್ಯಾಯ ಒದಗಿಸಿ

ಪ.ಜಾತಿ, ಪಂಗಡದ ದೌರ್ಜನ್ಯ ಪ್ರಕರಣಗಳ ಜಾಗೃತಿ ಸಭೆಯಲ್ಲಿ ಡಿಸಿ ಶಿಲ್ಪನಾಗ್ ಸೂಚನೆ



ಚಾಮರಾಜನಗರ ಜಿಲ್ಲಾಧಿಕಾರಿ ಕಚೇರಿಯಲ್ಲಿ ನಡೆದ ಪ.ಜಾತಿ, ಪಂಗಡದ ದೌರ್ಜನ್ಯ ಪ್ರಕರಣಗಳ ಜಿಲ್ಲಾ ಮಟ್ಟದ ಜಾಗೃತಿ ಸಭೆಯಲ್ಲಿ ಜಿಲ್ಲಾಧಿಕಾರಿ ಶಿಲ್ಪನಾಗ್ ಮಾತನಾಡಿದರು.

ಚಾಮರಾಜನಗರ, ಜು.24–ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ, ಪಂಗಡದ ದೌರ್ಜನ್ಯ ಪ್ರಕರಣಗಳಲ್ಲಿ ಪರಿಹಾರ ವಿತರಿಸಿದರಷ್ಟೇ ಸಾಲದು, ದೌರ್ಜನ್ಯದಿಂದ ನೊಂದ ಸಂತ್ರಸ್ತರಿಗೆ ಸಾಮಾಜಿಕ ನ್ಯಾಯ ಒದಗಿಸಲು ಅಧಿಕಾರಿಗಳು ಮುಂದಾಗಬೇಕು ಎಂದು ಜಿಲ್ಲಾಧಿಕಾರಿ ಶಿಲ್ಪನಾಗ್ ಕಟ್ಟುನಿಟ್ಟಿನ ಸೂಚನೆ ನೀಡಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಬುಧವಾರ ನಡೆದ ಪರಿಶಿಷ್ಟ ಜಾತಿ, ಪಂಗಡದ ದೌರ್ಜನ್ಯ ಪ್ರಕರಣಗಳ ಜಿಲ್ಲಾ ಮಟ್ಟದ ಜಾಗೃತಿ ಮತ್ತು ಉಸ್ತುವಾರಿ ಸಮಿತಿ ಸಭೆಯಲ್ಲಿ ಮಾತನಾಡಿದ ಅವರು, ಪ.ಜಾತಿ, ಪಂಗಡದ ದೌರ್ಜನ್ಯ ಪ್ರಕರಣಗಳಲ್ಲಿ ನೊಂದ ಬಡವರಿಗೆ ನ್ಯಾಯ ದೊರಕದ ಹಿನ್ನೆಲೆಯಲ್ಲಿ ಸಮಸ್ಯೆ ಜಿಲ್ಲಾಡಳಿತಕ್ಕೆ ಸಲ್ಲಿಕೆಯಾಗಲಿದೆ. ಸಮಸ್ಯೆ ಇತ್ಯರ್ಥಪಡಿಸುವಲ್ಲಿ ಸಂಬಂಧಪಟ್ಟ ಅಧಿಕಾರಿಗಳು ವಿಳಂಬ ಮಾಡದೆ ಖುದ್ದು ಸ್ಥಳ ಪರಿಶೀಲಿಸಿ, ನ್ಯಾಯ ಒದಗಿಸಬೇಕು. ಸಭೆಯಲ್ಲಿ ಕೈಗೊಳ್ಳುವ ನಿರ್ಧಾರಗಳನ್ನು ಸಮರ್ಪಕವಾಗಿ ಕಾರ್ಯರೂಪಕ್ಕೆ ತರುವುದರೊಂದಿಗೆ ಬಾಧಿತರಿಗೆ ನ್ಯಾಯ ಒದಗಿಸಬೇಕೆಂದು ಆದೇಶಿಸಿದರು.

ಜನವರಿಯಿಂದ ಇಲ್ಲಿವರೆಗೆ ಚಾಮರಾಜನಗರ ತಾಲೂಕಿನಲ್ಲಿ 4, ಕೊಳ್ಳೇಗಾಲ 3, ಹನೂರು 8, ಗುಂಡ್ಲುಪೇಟೆ 1 ಹಾಗೂ ಯಳಂದೂರು ತಾಲೂಕಿನ 2 ಪ್ರಕರಣ ಸೇರಿದಂತೆ ಜಿಲ್ಲೆಯಲ್ಲಿ ಒಟ್ಟು 18 ಪ್ರಕರಣಗಳು ದಾಖಲಾಗಿವೆ. ಈ ಪೈಕಿ 16 ಪ್ರಕರಣಗಳಿಗೆ 25 ಲಕ್ಷ ರೂ.ಗೂ ಹೆಚ್ಚಿನ ಪರಿಹಾರ ಒದಗಿಸಲಾಗಿದ್ದು, ಉಳಿದ 2 ಪ್ರಕರಣಗಳನ್ನು ಇತ್ಯರ್ಥಪಡಿಸಿ ಸದ್ಯದಲ್ಲೇ ಪರಿಹಾರ ಒದಗಿಸಲಾಗುವುದು ಎಂದರು.

ಕಳೆದ 5 ವರ್ಷಗಳಲ್ಲಿ ಜಿಲ್ಲೆಯ ಯಾವುದೇ ಭಾಗದಲ್ಲಿ ನಡೆದಿರುವ ದೌರ್ಜನ್ಯ ಪ್ರಕರಣಗಳನ್ನು ಅವಲೋಕಿಸಿ, ಅಧ್ಯಯನ ಮಾಡಿ ದೌರ್ಜನ್ಯ ಪ್ರಕರಣಗಳನ್ನು ತಡೆಯಲು ಅಧಿಕಾರಿಗಳು ಸಕ್ರಿಯರಾಗಬೇಕು. ದೌರ್ಜನ್ಯ ಪ್ರಕರಣಗಳು ಸಾಮಾಜಿಕ ಹಾಗೂ ಮಾನವ ಹಕ್ಕು ಉಲ್ಲಂಘನೆಯಾಗಲಿವೆ. ಅತ್ಯಾಚಾರ, ಹಲ್ಲೆ, ಜಾತಿನಿಂದನೆ ಪ್ರಕರಣಗಳನ್ನು ತ್ವರಿತ ಹಾಗೂ ನ್ಯಾಯ ಸಮ್ಮತವಾಗಿ ಬಗೆಹರಿಸಬೇಕು. ಯಾವುದೇ ಪ್ರಕರಣ ಬಾಕಿ ಉಳಿಯಬಾರದು. ಅಗತ್ಯವಿದ್ದರೆ ಪೊಲೀಸರ ಸಹಕಾರ ಪಡೆಯಬೇಕು ಎಂದು ತಿಳಿಸಿದರು.

ಸಭೆಯಲ್ಲಿ ಜಿಲ್ಲಾ ಜಾಗೃತಿ ಹಾಗೂ ಉಸ್ತುವಾರಿ ಸಮಿತಿ ಸಭೆ ಸದಸ್ಯರಾದ ಆರ್.ಸಿದ್ದರಾಜು, ಮುದ್ದಯ್ಯ, ಸಿದ್ದರಾಜು, ಸೋಮೇಶ್ವರ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಬಿ.ಟಿ.ಕವಿತಾ, ಅಪರ ಜಿಲ್ಲಾಧಿಕಾರಿ ಗೀತಾ ಹುಡೇದ, ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ರಾಜು, ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಕೆ.ಮಂಜುಳಾ, ತಹಸೀಲ್ದಾರ್‌ಗಳು, ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ಸುಳ್ವಾಡಿ ದುರಂತದ ಕುಟುಂಬಗಳಿಗೆ ಪೌಷ್ಟಿಕ ಆಹಾರ

ಹನೂರು ತಾಲೂಕಿನ ಸುಳ್ವಾಡಿ ದುರಂತದಲ್ಲಿ ಅಸ್ವಸ್ಥಗೊಂಡಿದ್ದ 12 ಕುಟುಂಬಗಳ 114 ಜನರಿಗೆ ಡಿಎಂಎಫ್ ಅನುದಾನದಿಂದ ಪೌಷ್ಟಿಕ ಆಹಾರದ ಕಿಟ್‌ಗಳನ್ನು ಸರಬರಾಜು ಮಾಡುತ್ತಿದ್ದು, ಇತರೆ ಸೌಲಭ್ಯಗಳನ್ನು ನಿರಂತರವಾಗಿ ಒದಗಿಸಬೇಕು. ನರೇಗಾ ಯೋಜನೆಯಡಿ ಜಾಬ್‌ಕಾರ್ಡ್ ಇಲ್ಲದವರಿಗೆ ಅಗತ್ಯ ವ್ಯವಸ್ಥೆ ಮಾಡಿ ಉದ್ಯೋಗ ಕಲ್ಪಿಸಬೇಕು. ಸರ್ಕಾರಿ ಸೌಲಭ್ಯ ಉದ್ದೇಶಕ್ಕಾಗಿ ಸುಳ್ಳು ಜಾತಿ ಪ್ರಮಾಣ ಪತ್ರ ಪಡೆದಿರುವವರ ಬಗ್ಗೆ ಪರಿಶೀಲಿಸಿ ಅಂತಹವರ ಮೇಲೆ ಪ್ರಕರಣ ದಾಖಲಿಸಬೇಕು. ಇದಕ್ಕಾಗಿ ಸಮಾಜ ಕಲ್ಯಾಣಾಧಿಕಾರಿ, ತಹಸೀಲ್ದಾರ್ ಹಾಗೂ ಪರಿಶಿಷ್ಟ ವರ್ಗಗಳ ಅಧಿಕಾರಿಗಳ ತಂಡ ರಚಿಸಿ 15 ದಿನದೊಳಗೆ ಸಮಗ್ರ ವರದಿ ಸಲ್ಲಿಸುವಂತೆ ಜಿಲ್ಲಾಧಿಕಾರಿ ತಾಕೀತು ಮಾಡಿದರು.

ದಲಿತ ಯುವಕನ ಮೇಲಿನ ದೌರ್ಜನ್ಯ ಖಂಡಿಸಿ ಪ್ರತಿಭಟನೆ



ದಲಿತ ಯುವಕನ ಮೇಲೆ ಹಲ್ಲೆ ನಡೆಸಲಾಗಿದೆ ಎಂದು ಅಂಬೇಡ್ಕರ್ ಸಂಘಟನೆಗಳ ಒಕ್ಕೂಟದ ಕಾರ್ಯಕರ್ತರು ಕೊಳ್ಳೇಗಾಲದ ಅಂಬೇಡ್ಕರ್ ಪ್ರತಿಮೆ ಎದುರು ಪ್ರತಿಭಟನೆ ನಡೆಸಿದರು.

ಕೊಳ್ಳೇಗಾಲ, ಜು.24–ಕನಕಪುರ ಸಮೀಪದ ಮಾಳಗಾಳು ಗ್ರಾಮದಲ್ಲಿ ದಲಿತ ಯುವಕನ ಮುಂಗೈ ಕತ್ತರಿಸಿ ದೌರ್ಜನ್ಯ ನಡೆಸಲಾಗಿದೆ ಎಂದು ತಾಲೂಕು ಡಾ.ಆರ್.ಅಂಬೇಡ್ಕರ್ ಸಂಘಟನೆಗಳ ಒಕ್ಕೂಟದ ಕಾರ್ಯಕರ್ತರು ಬುಧವಾರ ಪಟ್ಟಣದ ಅಂಬೇಡ್ಕರ್ ಪ್ರತಿಮೆ ಎದುರು ಪ್ರತಿಭಟನೆ ನಡೆಸಿದರು.

ಮಾಳವಾಳು ಗ್ರಾಮದಲ್ಲಿ ಜು.21ರಂದು ಗುಂಪೊಂದು ದಲಿತರ ಬಡಾವಣೆಗೆ ನುಗ್ಗಿ ವೈರಮುಡಿಯವರ ಪುತ್ರ ಅನೀಶ್ ಮೇಲೆ ದೌರ್ಜನ್ಯ ಎಸಗಿ, ಆತನ ಕೈ ಕತ್ತರಿಸಲಾಗಿದೆ. ಆದ್ದರಿಂದ ಹಲ್ಲೆ ನಡೆಸಿದ ಆರೋಪಿಗಳನ್ನು ಬಂಧಿಸಬೇಕು ಎಂದು ಆಗ್ರಹಿಸಿದರು.

ಗಡಿಪಾರಾದ ರೌಡಿ ಶೀಟರ್ ಹರ್ಷ ಅಲಿಯಾಸ್ ಕೈಮಾ ಎಂಬಾತ ತನ್ನ ಸಹಚರರೊಂದಿಗೆ ದಲಿತ ಕಾಲೋನಿಗೆ ನುಗ್ಗಿ ಅಲ್ಲಿನ ಮಹಿಳೆಯರು ಹಾಗೂ ಮಕ್ಕಳ ಮೇಲೆ ದೌರ್ಜನ್ಯ ನಡೆಸಿ, ಅನೀಶ್ ಮೇಲೆ ಹಲ್ಲೆ ನಡೆಸಿದ್ದಾನೆ. ಈ ಘಟನೆ ಬಗ್ಗೆ ಕಠಿಣ ಕ್ರಮ ವಹಿಸಬೇಕು. ಇಲ್ಲದಿದ್ದರೆ ಉಗ್ರ ಹೋರಾಟ ನಡೆಸುವುದಾಗಿ ಪ್ರತಿಭಟನಾಕಾರರು ಎಚ್ಚರಿಸಿದರು.

ನಂತರ ತಹಸೀಲ್ದಾರ್ ಮಂಜುಳಾ ಅವರಿಗೆ ಮನವಿ ಸಲ್ಲಿಸಲಾಯಿತು. ಪ್ರತಿಭಟನೆಯಲ್ಲಿ ದಲಿತ ಮುಖಂಡ ಶಂಕನಪುರ ಶೇಖರ್ ಬುದ್ಧ, ವಕೀಲ ರಾಜೇಂದ್ರ, ಪಿಎಸಿಸಿ ಮಾಜಿ ಅಧ್ಯಕ್ಷ ಸೋಮಶೇಖರ್, ಮುಖಂಡರಾದ ಎಸ್.ಸಿದ್ದಪ್ಪಾಜಿ, ನಟರಾಜು ಮಾಳಿಗೆ, ನಟರಾಜು, ಶಂಕರ್ ಚೇತನ್, ಜಯಶಂಕರ್, ಜೆ.ನಿಂಗರಾಜು, ರೇವಣ್ಣ ಹಳೇ ಹಂಪಾಪುರ, ತೇರಂಬಳ್ಳಿ ಗ್ರಾಪಂ ಸದಸ್ಯ ಪುರುಷೋತ್ತಮ್, ಲಕ್ಷ್ಮಣ್, ಕೃಷ್ಣ, ಶಿವಶಂಕರ್, ನಿಂಗರಾಜು, ವೆಂಕಟರಾಮಣ, ಹರೀಶ್, ಮುಳ್ಳೂರು ಮಂಜುನಾಥ್, ಪ್ರಭುಸ್ವಾಮಿ ಭಾಗವಹಿಸಿದ್ದರು.

ಪ್ರವೇಶಾತಿಗೆ ಅರ್ಜಿ ಆಹ್ವಾನ

ಚಾಮರಾಜನಗರ: ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಶೈಕ್ಷಣಿಕ ಸಾಲಿನ (ಜುಲೈ ಆವೃತ್ತಿ) ಪ್ರಥಮ ಪದವಿ, ಸ್ನಾತಕೋತ್ತರ ಪದವಿ, ಡೆಟಾ ಸೈನ್ಸ್, ಪಿಜಿ ಡಿಪ್ಲೋಮ ಹಾಗೂ ಸರ್ಟಿಫಿಕೇಟ್ ಕೋರ್ಸ್‌ಗಳಿಗೆ ಪ್ರವೇಶಾತಿಗೆ ಅರ್ಜಿ ಆಹ್ವಾನಿಸಲಾಗಿದೆ.

ಮಾಹಿತಿಗಾಗಿ ನಗರದ ರಾಮಸಮುದ್ರ ಬಡಾವಣೆಯ ಇವಾನ್ಯುವೆಲ್ ಕ್ರಿಶ್ಚಿಯನ್ ಸ್ಕೂಲ್ ಹತ್ತಿರದ ವಿವಿಯ ಪ್ರಾದೇಶಿಕ ಕೇಂದ್ರ ಕಚೇರಿ ಅಥವಾ ಮೊ.ಸಂ. 8453114419, 9902995879, 7760819726 ಅನ್ನು ಸಂಪರ್ಕಿಸುವಂತೆ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಸಾಲ ಸೌಲಭ್ಯಕ್ಕೆ ಅರ್ಜಿ ಆಹ್ವಾನ

ಗುಂಡ್ಲುಪೇಟೆ, ಜು.24–ಗುಂಡ್ಲುಪೇಟೆ ಪುರಸಭೆ ವ್ಯಾಪ್ತಿಯ ಬೀದಿಬದಿ ವ್ಯಾಪಾರಿಗಳಿಗೆ ಸಾಲ ಸೌಲಭ್ಯ ಕಲ್ಪಿಸಲು ಅರ್ಜಿ ಆಹ್ವಾನಿಸಲಾಗಿದೆ.

2024–25ನೇ ಸಾಲಿನ ದೀನ್ ದಯಾಳ್ ಅಂತ್ಯೋದಯ ಯೋಜನೆ–ರಾಷ್ಟ್ರೀಯ ನಗರ ಜೀವನೋಪಾಯ ಅಭಿಯಾನ ಹಾಗೂ ಡೇನಲ್ಮ್ ಯೋಜನೆಯಡಿ ಬೀದಿಬದಿ ವ್ಯಾಪಾರಿಗಳಿಗೆ ಸಾಲಸೌಲಭ್ಯ ಕಲ್ಪಿಸಲಾಗುವುದು. ಆಧಾರ್ ಕಾರ್ಡ್, ಭಾವಚಿತ್ರ, ಎಸ್‌ಎಸ್‌ಎಲ್‌ಸಿ, ಪಿಯುಸಿ, ಪದವಿ ಅಂಕಪಟ್ಟಿ ಮತ್ತು ಪ್ರಮಾಣ ಪತ್ರದ ದಾಖಲಾತಿಯೊಂದಿಗೆ 15 ದಿನದೊಳಗಾಗಿ ಅರ್ಜಿ ಸಲ್ಲಿಸಬೇಕು.

ಹೆಚ್ಚಿನ ಮಾಹಿತಿಗಾಗಿ ಡೇನಲ್ಮ್ ಶಾಖೆಯ ವಿಷಯ ನಿರ್ವಾಹಕ ಸಂಚಾರಿ ಅಥವಾ ಮೊಬೈಲ್ ಸಂಖ್ಯೆ: 7204442550 ಅನ್ನು ಸಂಪರ್ಕಿಸಬಹುದು ಎಂದು ಪುರಸಭೆಯ ಮುಖ್ಯಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಾಮಫಲಕ ಅನಾವರಣ...



ಹನೂರು ತಾಲೂಕಿನ ಅಂಬಿಕಾಪುರದಲ್ಲಿ ಆದಿಜಾಂಬವ ಸಮುದಾಯದ ರುದ್ರಭೂಮಿ ನಾಮಫಲಕ ಅನಾವರಣಗೊಳಿಸಲಾಯಿತು. ಜಿಲ್ಲಾ ಮಾದಿಗ ಮೀಸಲಾತಿ ಹೋರಾಟ ಸಮಿತಿ ಅಧ್ಯಕ್ಷ ಬಸವನಪುರ ರಾಜಶೇಖರ್ ಹಾಗೂ ಯಳಂದೂರು ತಾಲೂಕು ಜಗಜೀವನರಾಂ ಸಂಘದ ಅಧ್ಯಕ್ಷ ಕೆಸ್ತೂರು ಮರಪ್ಪ, ಸಮುದಾಯದ ಮುಖಂಡ ಎಸ್.ಬಸವರಾಜು, ಗ್ರಾಪಂ ಸದಸ್ಯ ಬಣ್ಣಾರಿ, ಯ.ಮುರುಗೇಶ್, ಪೆರುಮಾಳ್, ಶರವಣ, ರಮೇಶ್, ವೀರ, ಸ್ತ್ರೀ ಶಕ್ತಿ ಸಂಘದ ಚಿತ್ರಾ, ಕನಕ, ಕೆಂಪಮ್ಮ, ಕುಪ್ಪಮ್ಮ ಇತರರಿದ್ದರು.

ಉಪ್ಪಾರ ಸಮುದಾಯ ಶಿಕ್ಷಣಕ್ಕೆ ಒತ್ತು ನೀಡಲಿ



ಚಾಮರಾಜನಗರದಲ್ಲಿ ಭಗೀರಥ ಯುವ ಸೇನೆ ವತಿಯಿಂದ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಎಸ್‌ಎಸ್‌ಎಲ್‌ಸಿ, ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪುರಸ್ಕಾರ ನೀಡಲಾಯಿತು.

ಚಾಮರಾಜನಗರ, ಜು.24–ಉಪ್ಪಾರ ಸಮುದಾಯ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಬೇಕು ಎಂದು ಜಿಲ್ಲಾ ಹಿಂದುಳಿದ ವರ್ಗಗಳ ಒಕ್ಕೂಟದ ಅಧ್ಯಕ್ಷ ಮಂಗಲ ಶಿವಕುಮಾರ್ ಹೇಳಿದರು.

ನಗರದ ಖಾಸಗಿ ಹೋಟೆಲ್‌ನಲ್ಲಿ ಭಗೀರಥ ಯುವಸೇನೆ ವತಿಯಿಂದ ನಡೆದ ಎಸ್‌ಎಸ್‌ಎಲ್‌ಸಿ, ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ಸಮುದಾಯದ ವಿದ್ಯಾರ್ಥಿಗಳಿಗೆ ಹಮ್ಮಿಕೊಂಡಿದ್ದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ವಿದ್ಯಾರ್ಥಿಗಳು ದೊಡ್ಡ ಕನಸು ಇಟ್ಟುಕೊಂಡು ಶ್ರದ್ಧೆ, ಭಕ್ತಿಯಿಂದ ವ್ಯಾಸಂಗ ಮಾಡಬೇಕು. ಪೋಷಕರು ಕೂಡ ಮಕ್ಕಳ ವಿದ್ಯಾರ್ಜನೆಗೆ ಪ್ರೋತ್ಸಾಹ ನೀಡಬೇಕು ಎಂದರು.

ಸರ್ಕಾರ ಅನೇಕ ಸವಲತ್ತುಗಳನ್ನು ನೀಡುತ್ತಿದ್ದರೂ ಉಪ್ಪಾರ ಸಮುದಾಯ ಶಿಕ್ಷಣದಿಂದ ವಂಚಿತರಾಗಿರುವುದು ಬಹಳ ನೋವಿನ ಸಂಗತಿಯಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು. ಕ್ಷೇತ್ರ ಶಿಕ್ಷಣಾಧಿಕಾರಿ ಹನುಮಶೆಟ್ಟಿ ಕಾರ್ಯಕ್ರಮ ಉದ್ಘಾಟಿಸಿದರು. ಎಸ್‌ಎಸ್‌ಎಲ್‌ಸಿ, ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು.

ಕಾರ್ಯಕ್ರಮದಲ್ಲಿ ಸೆಸ್ಕ್ ಲೆಕ್ಕಾಧಿಕಾರಿ ಮಹೇಶ್, ಭಗೀರಥ ಸೇನೆಯ ಅಧ್ಯಕ್ಷ ರಾಜೇಂದ್ರ, ವಕೀಲ ಗೌಡಹಳ್ಳಿ ಮಹೇಶ್, ಯುವ ಮುಖಂಡ ಆನಂದ್ ಭಗೀರಥ್, ಹೊನ್ನೂರು ಮಹದೇವಸ್ವಾಮಿ, ಸೋಮಣ್ಣ ಉಪ್ಪಾರ್, ಬಿ.ಜಿ.ಶಿವಕುಮಾರ್, ಚಾ.ನಗರ ಉಪ್ಪಾರ ಸಂಘದ ಅಧ್ಯಕ್ಷ ರಾಚಶೆಟ್ಟಿ, ರಾಜ್ಯ ಮಟ್ಟದ ಕ್ರೀಡಾಪಟು ಕೃಷ್ಣಸ್ವಾಮಿ, ಕಾಳನಹುಂಡಿ ಕೃಷ್ಣ ಹಾಜರಿದ್ದರು.

ಮರಿಯಾಲದ ನೀಲಮ್ಮ ನಿಧನ

ಚಾಮರಾಜನಗರ, ಜು.24–ತಾಲೂಕಿನ ಮರಿಯಾಲ ಗ್ರಾಮದ ಲೇಟ್ ಬಸವಣ್ಣ ಅವರ ಪತ್ನಿ ನೀಲಮ್ಮ (82) ಬುಧವಾರ ಅನಾರೋಗ್ಯದಿಂದ ನಿಧನರಾದರು.



ಮೃತರು ಅಕ್ಷಯಾ ಸೌಹಾರ್ದ ಸಹಕಾರ ಸಂಘದ ಉಪಾಧ್ಯಕ್ಷ ಲಿಂಗಣ್ಣ (ಸ್ವಾಮಿ) ಸೇರಿದಂತೆ ಇಬ್ಬರು ಪುತ್ರರು, ಪುತ್ರಿ, ಸೊಸೆ ಬದನಗುಪ್ಪೆ ಗ್ರಾಪಂ ಮಾಜಿ ಅಧ್ಯಕ್ಷೆ ಸುಗುಣ ಲಿಂಗಣ್ಣ ಸೇರಿದಂತೆ ಅಪಾರ ಬಂಧು–ಬಳಗ ಅಗಲಿದ್ದಾರೆ.

ಸ್ವಗ್ರಾಮ ಮರಿಯಾಲದ ಮೃತರ ಜಮೀನಿನಲ್ಲಿ ಗುರುವಾರ ಮಧ್ಯಾಹ್ನ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬದವರು ತಿಳಿಸಿದ್ದಾರೆ.

ಚಂದ್ರಶೇಖರ್ ಆಜಾದ್, ಬಾಲಗಂಗಾಧರ ತಿಲಕ್ ಜಯಂತಿ




ಸುತ್ತೂರಿನ ಜೆಎಸ್‌ಎಸ್ ಶಿಕ್ಷಣ ಮಹಾವಿದ್ಯಾಲಯದಲ್ಲಿ ಚಂದ್ರಶೇಖರ ಆಜಾದ್ ಹಾಗೂ ಬಾಲಗಂಗಾಧರ ತಿಲಕ್ ಜಯಂತ್ಯುತ್ಸವ ಆಚರಿಸಲಾಯಿತು.

ಮೈಸೂರು,ಜು.24–ಸುತ್ತೂರಿನ ಜೆಎಸ್‌ಎಸ್ ಶಿಕ್ಷಣ ಮಹಾವಿದ್ಯಾಲಯದಲ್ಲಿ ಸ್ವಾತಂತ್ರ್ಯ ಹೋರಾಟಗಾರರಾದ ಚಂದ್ರಶೇಖರ ಆಜಾದ್ ಹಾಗೂ ಬಾಲಗಂಗಾಧರ ತಿಲಕ್ ಜಯಂತ್ಯುತ್ಸವವನ್ನು ಆಚರಿಸಲಾಯಿತು. ಕಾರ್ಯಕ್ರಮದ ಬಗ್ಗೆ ಪ್ರಾಸ್ತಾವಿಕ ನುಡಿಗಳನ್ನಾಡಿದ ಸಹಾಯಕ ಪ್ರಾಧ್ಯಾಪಕ ಕೆ.ವಿ.ಯೋಗೇಶ, ಸ್ವಾತಂತ್ರ್ಯ ಹೋರಾಟಗಾರರ ತ್ಯಾಗ ಹಾಗೂ ಬಲಿದಾನಗಳು ಇಂದಿನ ಯುವ ಪೀಳಿಗೆಗೆ ಸ್ಫೂರ್ತಿಯ ಸೆಲೆಯಾಗಿದ್ದು, ಮುಂದೆ ಅವುಗಳನ್ನು ಭಾವಿ ಶಿಕ್ಷಕರಾದ ನೀವು ಅಳವಡಿಸಿಕೊಳ್ಳಬೇಕೆಂದು ಕರೆ ನೀಡಿದರು.

ಉಪನ್ಯಾಸ ನೀಡಿದ ಸಹಾಯಕ ಪ್ರಾಧ್ಯಾಪಕರಾದ ಶ್ರೀಮತಿ ಡಿ.ಎಸ್.ವೀಣಾ, ಭಾವಿ ಶಿಕ್ಷಕರು ರಾಷ್ಟ್ರೀಯ ನಾಯಕರ ಆದರ್ಶಗಳನ್ನು ಮೈಗೂಡಿಸಿಕೊಳ್ಳಬೇಕೆಂದು ಕರೆ ನೀಡಿದರು. ಅಧ್ಯಕ್ಷತೆ ವಹಿಸಿದ್ದ ಪ್ರಾಂಶುಪಾಲರಾದ ಡಾ.ಹೆಚ್.ಎಂ. ಮಹೇಶ್, ಆಜಾದ್ ಅವರ ಆದರ್ಶಗಳು ಭಾವಿ ಶಿಕ್ಷಕರಿಗೆ ಪೂರಕವಾಗಿದ್ದು, ಯುವ ಶಕ್ತಿಯೇ ದೇಶಶಕ್ತಿ ಎಂದು ತಿಳಿಸಿದರು.


ಕು॥ ದೀಪ್ತಿ ಆರ್ ಸಹನಾ ಪ್ರಾರ್ಥಿಸಿದರು. ಪ್ರದೀಪ್‌ಗೌಡ ಸ್ವಾಗತಿಸಿದರು. ಕಾರ್ತಿಕ್ ವಂದಿಸಿದರು. ಶ್ರೀಮತಿ ಶ್ರೀದೇವಿ ನಿರೂಪಿಸಿದರು.

ಡಾ.ಅರ್ಪಿತ್.ಎಂ.ಎನ್ SAST RC ಮೈಸೂರು ವಿಭಾಗಕ್ಕೆ ನೇಮಕ



ನೂತನವಾಗಿ 8 ಜಿಲ್ಲೆಯ ಪ್ರಾದೇಶಿಕ ಸಮಾಲೋಚಕರಾಗಿ (SAST RC) ಮೈಸೂರು ವಿಭಾಗಕ್ಕೆ ನೇಮಕಗೊಂಡಿರುವ ಡಾ.ಅರ್ಪಿತ್.ಎಂ.ಎನ್ ಅವರನ್ನು ಕಾವೇರಿ ಹಾರ್ಟ್ & ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯ ಅಧ್ಯಕ್ಷ ಡಾ.ಜಿ.ಆರ್. ಚಂದ್ರಶೇಖರ್ ಸ್ವಾಗತಿಸಿದರು. ಡಾ.ಅರ್ಪಿತ್, ಡೆಂಗ್ಯೂಗೆ ತುತ್ತಾಗಿರುವ ರೋಗಿಗಳ ಪ್ರಸ್ತುತ ಆರೋಗ್ಯ ಪರಿಸ್ಥಿತಿಗಳು, ಆಸ್ಪತ್ರೆಯೊಂದಿಗಿನ ಇಲಾಖೆಯ ಸಂಬಂಧ ಹಾಗೂ ಕಾರ್ಯವೈಖರಿ ಬಗ್ಗೆ ವೈದ್ಯರಿಗೆ ಮಾಹಿತಿ ನೀಡಿದರು.

ಮಳೆ ಹಾನಿ; ರೈತರಿಗೆ ಪರಿಹಾರ ಕಲ್ಪಿಸಲು ಮನವಿ



ರೈತ ಕಲ್ಯಾಣ ಸಂಘದ ರಾಜ್ಯಾಧ್ಯಕ್ಷ ಭೂಮಿಪುತ್ರ ಸಿ.ಚಂದನ್‌ಗೌಡ ಹಾಗೂ ಪದಾಧಿಕಾರಿಗಳು ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ ರೆಡ್ಡಿ ಅವರನ್ನು ಭೇಟಿ ಮಾಡಿ, ಮಳೆ ಹಾನಿಯಿಂದಾಗಿ ಸಂಕಷ್ಟಕ್ಕೆ ಸಿಲುಕಿರುವ ರೈತರಿಗೆ ಪರಿಹಾರ ಸೇರಿದಂತೆ ಇನ್ನಿತರ ನೆರವಿಗೆ ಅಗತ್ಯ ಕ್ರಮ ಕೈಗೊಳ್ಳುವಂತೆ ಮನವಿ ಮಾಡಿದರು.

ರಾಜ್ಯ ಪತ್ರಿಕಾ ವಿತರಕರ ಸಮ್ಮೇಳನದ ಲಾಂಛನ ಬಿಡುಗಡೆ



ಸೆಪ್ಟೆಂಬರ್ 8ನೇ 2024ರಂದು ಚಿತ್ರದುರ್ಗ ಜಿಲ್ಲೆಯಲ್ಲಿ ನಡೆಯಲಿರುವ ವಿಶ್ವ ಪತ್ರಿಕಾ ವಿತರಕರ ದಿನಾಚರಣೆಯ ಅಂಗವಾಗಿ 4ನೇ ರಾಜ್ಯ ಪತ್ರಿಕಾ ವಿತರಕರ ಸಮ್ಮೇಳನದ ಲಾಂಛನವನ್ನು ಪತ್ರಿಕಾ ವಿತರಕರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಮೈಸೂರು ಜಿಲ್ಲಾ ಪತ್ರಕರ್ತರ ಸಂಘದಲ್ಲಿ ಮಾಜಿ ಮುಡಾ ಅಧ್ಯಕ್ಷ ಹೆಚ್.ವಿ.ರಾಜೀವ್ ಬಿಡುಗಡೆಗೊಳಿಸಿದರು. ಈ ವೇಳೆ ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ದೀಪಕ್, ಕಾರ್ಯದರ್ಶಿ ಧರ್ಮಾಪುರ ನಾರಾಯಣ್, ಜೆಡಿಎಸ್ ಕಾರ್ಯಾಧ್ಯಕ್ಷ ಪ್ರಕಾಶ್ ಪ್ರಿಯದರ್ಶನ್, ಪತ್ರಿಕಾ ವಿತರಕರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಹೋಮದೇವ ಜೆ.ಎಸ್, ಉಪಾಧ್ಯಕ್ಷ ಎಮ್.ಎನ್.ಆರ್, ಕಾರ್ಯದರ್ಶಿ ಸಿ.ಶಿವಣ್ಣ, ಸಿ.ಆರ್.ದತ್ತಾತ್ರೇಯ, ಶಿವಣ್ಣ, ಶ್ರೀಕಾಂತ್, ಎಲ್.ರಮೇಶ್, ಎಂ.ಮಂಜು ಇನ್ನಿತರರು ಉಪಸ್ಥಿತರಿದ್ದರು.

ರಾಜೇಶ್ ಕೃಷ್ಣನ್ ಗಾನಸುಧೆ ಮೂಲಕ ಹೊಸ ಕಲಾವಿದರಿಗೆ ಅವಕಾಶ



ಸೆ.19ರಂದು ಡಾ.ವಿಷ್ಣುವರ್ಧನ್ ಹುಟ್ಟುಹಬ್ಬದ ಪ್ರಯುಕ್ತ ಆಯೋಜಿಸಿರುವ 'ವಿಷ್ಣು ಸಂಭ್ರಮ 2024'ರ ಭಿತ್ತಿಪತ್ರವನ್ನು ಅನಾವರಣಗೊಳಿಸಲಾಯಿತು.

ಮೈಸೂರು,ಜು.24–ನಗರದ ಡಾ.ರಾಜ್‌ಕುಮಾರ್ ಮ್ಯೂಸಿಕಲ್ ಗ್ರೂಪ್ ವತಿಯಿಂದ ಅಣ್ಣಾವ್ರ ಆರಾಧ್ಯ ಅಭಿಮಾನಿ ಮೈಸೂರು ಜಯರಾಂ ನೇತೃತ್ವದಲ್ಲಿ ಇತ್ತೀಚೆಗೆ ನಾದಬ್ರಹ್ಮ ಸಭಾಂಗಣದಲ್ಲಿ ನಾಡಿನ ಜನಪ್ರಿಯ ಗಾಯಕ ರಾಜೇಶ್ ಕೃಷ್ಣನ್ ಅವರು ಹಾಡಿರುವ ಚಲನಚಿತ್ರ ಗೀತೆಗಳನ್ನು ಪ್ರಸ್ತುತಪಡಿಸಲಾಯಿತು.

ಕಾರ್ಯಕ್ರಮವನ್ನು ಉದ್ಘಾಟಿಸಿ, ಮಾತನಾಡಿದ ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ರಾಜೇಶ್ ಕೃಷ್ಣನ್ ಹಾಡಿರುವ ಗೀತೆಗಳ ಗಾಯನದ ಮೂಲಕ ನಾಡಿನ ಕಲಾವಿದರಿಗೆ ಪ್ರೋತ್ಸಾಹ ನೀಡುತ್ತಿರುವುದು ಸ್ತುತ್ಯಾರ್ಹ ಸಂಗತಿ ಎಂದರು.

ಪ್ರತಿ ಕಾರ್ಯಕ್ರಮದಲ್ಲಿ ಹೊಸ ಕಲಾವಿದರಿಗೆ ವೇದಿಕೆ ಕಲ್ಪಿಸಿ, ಅವರನ್ನು ಪ್ರೋತ್ಸಾಹಿಸುವ ಕಾರ್ಯ ಮೈಸೂರು ಜಯರಾಂ ಮಾಡುತ್ತಿರುವುದು ಉತ್ತಮ ಬೆಳವಣಿಗೆ ಎಂದು ತಿಳಿಸಿದರು.

ಅವರಂತಹ ಎಲೆಮರೆಕಾಯಿ ಕಲಾವಿದರನ್ನು ಸರ್ಕಾರ ಗುರುತಿಸಿ ನವೆಂಬರ್‌ನಲ್ಲಿ ಕೊಡಮಾಡುವ ಪ್ರತಿಷ್ಠಿತ 'ರಾಜ್ಯೋತ್ಸವ' ಪ್ರಶಸ್ತಿಯನ್ನು ನೀಡಬೇಕು ಎಂದು ಕರೆ ನೀಡಿದರು. ಇದೇ ಸಂದರ್ಭದಲ್ಲಿ ನಗರದಲ್ಲಿ ಸೆ.19ರಂದು ಡಾ.ವಿಷ್ಣುವರ್ಧನ್ ಹುಟ್ಟುಹಬ್ಬದ ಪ್ರಯುಕ್ತ ಆಯೋಜಿಸಿರುವ 'ವಿಷ್ಣು ಸಂಭ್ರಮ 2024' ಕಾರ್ಯಕ್ರಮದ ಭಿತ್ತಿಪತ್ರವನ್ನು ಅನಾವರಣಗೊಳಿಸಲಾಯಿತು.

ವೇದಿಕೆಯಲ್ಲಿ ಮೈಸೂರು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್, ಖ್ಯಾತ ನೇತ್ರತಜ್ಞ ಡಾ.ಪವನ್ ವಿ.ಜೋಷಿ, ಚಲನಚಿತ್ರ ನಿರ್ಮಾಪಕ ಎಂ.ಡಿ.ಪಾರ್ಥಸಾರಥಿ, ಮೈಸೂರು ನಗರಪಾಲಿಕೆ ಗುತ್ತಿಗೆದಾರರ ಸಂಘದ ಅಧ್ಯಕ್ಷ ಉದಯಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

ಮಾಧ್ಯಮ ಕ್ಷೇತ್ರವನ್ನು ಹಣ, ಅಧಿಕಾರ ನಿಯಂತ್ರಿಸುತ್ತಿದೆ

'ಜರ್ನೋತ್ರಿ–24' ಮಾನಸ ಮಾಧ್ಯಮ ಹಬ್ಬಕ್ಕೆ ಚಾಲನೆ ನೀಡಿದ ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ.ಲೋಕನಾಥ್ ವಿಷಾದ

ಮೈಸೂರು,ಜು.24(ಎಂಟಿವೈ)–ಪ್ರಸ್ತುತ ಸಂದರ್ಭದಲ್ಲಿ ಹಣ ಮತ್ತು ಅಧಿಕಾರವು ಮಾಧ್ಯಮ ಕ್ಷೇತ್ರವನ್ನು ನಿಯಂತ್ರಿಸುತ್ತಿರುವ ಹಿನ್ನೆಲೆಯಲ್ಲಿ ಪತ್ರಿಕೋದ್ಯಮದ ವಿದ್ಯಾರ್ಥಿಗಳಿಗೆ ಜನರ ಪರವಾಗಿ ನಿಲ್ಲುವ ಮತ್ತು ಧ್ವನಿ ಎತ್ತುವಂತೆ ಪ್ರೇರಣೆ ನೀಡುವ ಅವಶ್ಯಕತೆ ಇದೆ ಎಂದು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎನ್.ಕೆ. ಲೋಕನಾಥ್ ಅಭಿಪ್ರಾಯಪಟ್ಟಿದ್ದಾರೆ.



ಮೈಸೂರು ವಿಶ್ವವಿದ್ಯಾನಿಲಯದ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಅಧ್ಯಯನ ವಿಭಾಗವು ರಾಣಿ ಬಹದ್ದೂರ್ ಸಭಾಂಗಣದಲ್ಲಿ ಬುಧವಾರ ಆಯೋಜಿಸಿರುವ ಎರಡು ದಿನಗಳ 'ಜರ್ನೋತ್ರಿ–24' ಮಾನಸ ಮಾಧ್ಯಮ ಹಬ್ಬಕ್ಕೆ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಚಾಲನೆ ನೀಡಿದರು.

ಮೈಸೂರು ವಿಶ್ವವಿದ್ಯಾನಿಲಯದ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಅಧ್ಯಯನ ವಿಭಾಗವು ಮಾನಸಗಂಗೋತ್ರಿಯ ರಾಣಿ ಬಹದ್ದೂರ್ ಸಭಾಂಗಣದಲ್ಲಿ ಆಯೋಜಿಸಿರುವ ಎರಡು ದಿನಗಳ 'ಜರ್ನೋತ್ರಿ–24' ಮಾನಸ ಮಾಧ್ಯಮ ಹಬ್ಬಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಪತ್ರಿಕೋದ್ಯಮ ವಿದ್ಯಾರ್ಥಿಗಳು ನೈತಿಕತೆಯನ್ನು ಮರೆಯದೆ, ಸತ್ಯದ ಪರವಾಗಿ ಕಾರ್ಯನಿರ್ವಹಿಸುವ ಪಣ ತೊಡಬೇಕು. ಪತ್ರಿಕೋದ್ಯಮದ ವಿದ್ಯಾರ್ಥಿಗಳ ಮೇಲೆ ಹೆಚ್ಚಿನ ಜವಾಬ್ದಾರಿ ಇದೆ. ಶಿಕ್ಷಣ ಪಡೆದ ಬಳಿಕ ಯಾವುದೇ ಸಂಸ್ಥೆಗೆ ಸೇರಿದರೂ ಸಮಾಜಕ್ಕೆ ಪೂರಕವಾದ ಸುದ್ದಿ ನೀಡುತ್ತೇವೆ ಎನ್ನುವುದು ಮುಖ್ಯ. ವಿದ್ಯಾರ್ಥಿಗಳು ಸಮಾಜ ಸ್ನೇಹಿಯಾಗಿ, ಸಾರ್ವಜನಿಕ ಪರವಾಗಿ ಕಾರ್ಯನಿರ್ವಹಿಸುವುದನ್ನು ಅರಿತುಕೊಳ್ಳಬೇಕು. ಎಂದು ಸಲಹೆ ನೀಡಿದರು.

ಕರ್ನಾಟಕ ಮಾಧ್ಯಮ ಅಕಾಡೆಮಿಯ ಅಧ್ಯಕ್ಷೆ ಆಯೇಷಾ ಖಾನಂ ಮಾತನಾಡಿ, ಪ್ರಸ್ತುತ ಸಂದರ್ಭದಲ್ಲಿ ಮಾಧ್ಯಮ ಅಕಾಡೆಮಿ ಮತ್ತು ಮಾಧ್ಯಮದ ನಡುವೆ ದೊಡ್ಡ ಅಂತರವಿದೆ. ಅಕಾಡೆಮಿ ಕೇವಲ ಪ್ರಶಸ್ತಿ ಮತ್ತು ಪ್ರಕಾಶನಕ್ಕೆ ಮಾತ್ರ ಸೀಮಿತವಾದಂತಾಗಿದೆ. ಈ ಹಿನ್ನೆಲೆಯಲ್ಲಿ ಅಕಾಡೆಮಿ ಚಟುವಟಿಕೆ ಶೈಕ್ಷಣಿಕ ಕ್ಷೇತ್ರದಲ್ಲೂ ನಡೆಸಲು ಉದ್ದೇಶಿಸಲಾಗಿದೆ. ಯುವ ಮಾಧ್ಯಮ ಕಲಿಕಾರ್ಥಿಗಳು ಉತ್ತಮ ಕೌಶಲ್ಯ ರೂಪಿಸಿಕೊಳ್ಳಬೇಕು. ಶ್ರಮದೊಂದಿಗೆ ಕುತೂಹಲ, ಸಮರ್ಪಣಾ ಮನೋಭಾವದಿಂದ ಪತ್ರಿಕಾ ಕ್ಷೇತ್ರದಲ್ಲಿ ಸಾಧನೆ ಮಾಡಿ, ತಾರಾ ಪತ್ರಕರ್ತರಾಗಿ ಹೊರಹೊಮ್ಮಬೇಕು. ಪತ್ರಕರ್ತರು ಆತ್ಮಾವಲೋಕನ ಮಾಡಿಕೊಳ್ಳಬೇಕು. ನೈತಿಕತೆ, ಪ್ರಾಮಾಣಿಕತೆ ಸೇರಿದಂತೆ ಪತ್ರಿಕೋದ್ಯಮದ ಎಲ್ಲಾ ಮೂಲಮಂತ್ರಗಳನ್ನು ಪುನಃ ಸ್ಥಾಪಿಸಬೇಕಿದೆ ಎಂದು ಪ್ರೊ.ಲೋಕನಾಥ್ ಸಲಹೆ ನೀಡಿದರು.

ಇದೇ ವೇಳೆ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಅಧ್ಯಯನ ವಿಭಾಗದ ನಿವೃತ್ತ ಪ್ರಾಧ್ಯಾಪಕ ಪ್ರೊ.ಕುಶಾಲ್ ಕುಮಾರ್, ಹಿರಿಯ ಪತ್ರಕರ್ತರಾದ ಆರ್.ಪಿ.ಜಗದೀಶ್, ದಾ.ಕೋ.ಹಳ್ಳಿ ಚಂದ್ರಶೇಖರ್, ಶಾಂತಲಾ ಧರ್ಮರಾಜ್, ಪ್ರೀತಿ ನಾಗರಾಜ್ ಅವರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಅಧ್ಯಯನ ವಿಭಾಗದ ಮುಖ್ಯಸ್ಥೆ ಪ್ರೊ.ಎಂ.ಎಸ್.ಸಪ್ನಾ ವಹಿಸಿದ್ದರು.

ಆ.1ರಂದು ಗುತ್ತಿಗೆ ನೌಕರರಿಗೆ ಮತ್ತೆ ಕೆಲಸ ಕೊಡದ ಅರಣ್ಯ ಇಲಾಖೆ ವಿರುದ್ಧ ಬೈಕ್ ರ‍್ಯಾಲಿ

ಮೈಸೂರು,ಜು.24(ಜಿಎ)–ಅರಣ್ಯ ಇಲಾಖೆಯು ಮೈಸೂರು ವೃತ್ತದ ಗುತ್ತಿಗೆ ನೌಕರರಲ್ಲಿ ಹಲವರನ್ನು ಮತ್ತೆ ಕೆಲಸಕ್ಕೆ ತೆಗೆದುಕೊಳದಿರುವುದು ಹಾಗೂ ಕಾಯಂಗೊಳಿಸದಿರುವುದನ್ನು ಖಂಡಿಸಿ ಕರ್ನಾಟಕ ಪ್ರಜಾ ಪಾರ್ಟಿ ರೈತ ಪರ್ವದ ವತಿಯಿಂದ ಆ.1ರಂದು ಬೈಕ್ ರ‍್ಯಾಲಿ ಹಮ್ಮಿಕೊಳ್ಳಲಾಗಿದೆ ಎಂದು ರಾಜ್ಯಾಧ್ಯಕ್ಷ ಡಾ.ಶಿವಣ್ಣ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 11 ಗಂಟೆಗೆ ಮೈಸೂರು ಜಿಲ್ಲಾ ಅರಣ್ಯ ವ್ಯಾಪ್ತಿಗೆ ಒಳಪಟ್ಟಿರುವ ಮೈಸೂರು ತಾಲೂಕು ಜಯಪುರ ಹೋಬಳಿ ಮಹದೇವಪುರ ಗ್ರಾಮದ ಗೇಟ್‌ನಿಂದ ಜಯಪುರ–ಮೈಸೂರು ಮಾರ್ಗವಾಗಿ ನಗರ ಜಿಲ್ಲಾಧಿಕಾರಿ ಕಚೇರಿಗೆ ಈ ಬೈಕ್ ರ‍್ಯಾಲಿ ಆಗಮಿಸಲಿದೆ. ರ‍್ಯಾಲಿಯಲ್ಲಿ ಮೈಸೂರು ವಿಭಾಗದ ಎಲ್ಲಾ ಅರಣ್ಯ ಇಲಾಖೆಯ ಸಂತ್ರಸ್ತ ಗುತ್ತಿಗೆ ನೌಕರರು ಪಾಲ್ಗೊಳ್ಳಲಿದ್ದಾರೆ ಎಂದರು.



ಡಾ.ಶಿವಣ್ಣ

ಅರಣ್ಯ ಇಲಾಖೆ ಅಧಿಕಾರಿಗಳು ಮೈಸೂರು ವಿಭಾಗದ ಅರಣ್ಯ ಇಲಾಖೆ ವ್ಯಾಪ್ತಿಯ ಸುಮಾರು 400 ಗುತ್ತಿಗೆ ನೌಕರರನ್ನು ಯಾವುದೇ ನೋಟಿಸ್ ನೀಡದೇ ಏಕಾಏಕಿ ಕೆಲಸದಿಂದ ತೆಗೆದು ಹಾಕಿದ್ದಾರೆ. ಹೀಗಾಗಿ ಇವರು ಜೀವನ ನಿರ್ವಹಣೆ ಮಾಡುವುದು ಕಷ್ಟಕರವಾಗಿದೆ. ಈ ಬಗ್ಗೆ ಹಲವಾರು ಬಾರಿ ಮನವಿ ನೀಡಿದರೂ ಪ್ರಯೋಜನವಾಗಿಲ್ಲ. ಇದಲ್ಲದೆ ಇನ್ನಿತರ ರೀತಿಯಲ್ಲಿಯೂ ಈಗ ಕೆಲಸ ಮಾಡುತ್ತಿರುವ ಹಲವರನ್ನು ಶೋಷಿಸಲಾಗುತ್ತಿದೆ. ಹೀಗಾಗಿ ಇದನ್ನು ಪ್ರತಿಭಟಿಸುವ ಸಲುವಾಗಿ ರಾಜ್ಯ ಅರಣ್ಯ ಇಲಾಖೆಯ ಸರ್ಕಾರಿ ದಿನ ಗೂಲಿ/ಪಿಸಿಪಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗಗಳ ನೌಕರರ ಸಂಘದ ಸಹಯೋಗದೊಡನೆ ಈ ಪ್ರತಿಭಟನಾ ಬೈಕ್ ರ‍್ಯಾಲಿ ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಹೆಚ್.ಜಿ. ಹೇಮಲತ, ಆರ್.ಶ್ರೀನಿವಾಸ್, ಸ್ಟೀಫನ್ ಜೋಸೆಫ್, ಶಿವುಗೌಡ, ಪಿ.ಕುಮಾರಸ್ವಾಮಿ ಉಪಸ್ಥಿತರಿದ್ದರು.

ಮುಕ್ತ ವಿವಿ ನಿವೃತ್ತ ಪ್ರಾಧ್ಯಾಪಕ ಡಾ.ಎ.ರಂಗಸ್ವಾಮಿಗೆ ಅಭಿನಂದನೆ



ಡಾ.ಎ.ರಂಗಸ್ವಾಮಿ

ಮೈಸೂರು,ಜು.24(ಜಿಎ)–ಕರ್ನಾಟಕ ರಾಜ್ಯ ಮುಕ್ತ ವಿವಿಯ ನಿವೃತ್ತ ಪ್ರಾಧ್ಯಾಪಕರಾದ ಡಾ.ಎ.ರಂಗಸ್ವಾಮಿ ಅವರಿಗೆ ಅಭಿನಂದನೆ ಜೊತೆಗೆ 'ಅಭಿವರ್ಧನ' ಗ್ರಂಥ ಬಿಡುಗಡೆ ಸಮಾರಂಭವನ್ನು ಜುಲೈ 28ರಂದು ಬೆಳಗ್ಗೆ 11 ಗಂಟೆಗೆ ಮಾನಸ ಗಂಗೋತ್ರಿಯ ರಾಣಿ ಬಹದ್ದೂರ್ ಸಭಾಂಗಣದಲ್ಲಿ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಡಾ.ಎ.ರಂಗಸ್ವಾಮಿ ಅಭಿನಂದನಾ ಸಮಿತಿಯ ಸಂಚಾಲಕ ಪ್ರೊ.ಜಯಪ್ರಕಾಶ್‌ಗೌಡ ಈ ವಿಷಯ ತಿಳಿಸಿ, ಮಾಜಿ ಶಾಸಕ ಎ.ಟಿ. ರಾಮಸ್ವಾಮಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವರು. ಮಾಜಿ ಸಂಸದ ಪ್ರತಾಪ್ ಸಿಂಹ ಅಭಿನಂದಿಸುವರು. ಮುಕ್ತ ವಿವಿ ಮಾಜಿ ಕುಲಪತಿ ಡಾ.ಕೆ.ಸುಧಾರಾವ್ ಅಭಿನಂದನಾ ಕೃತಿ ಬಿಡುಗಡೆಗೊಳಿಸಲಿದ್ದಾರೆ. ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಮಾನಸ, ಪ್ರಾಧ್ಯಾಪಕ ಡಾ.ಪಿ. ಬೆಟ್ಟೇಗೌಡ ಆಗಮಿಸಲಿದ್ದಾರೆ ಎಂದರು.

ಡಾ.ಎ.ರಂಗಸ್ವಾಮಿ ಅವರು ಮೂಲತಃ ಹಾಸನ ಜಿಲ್ಲೆಯ ಅರಕಲಗೂಡು ತಾಲೂಕಿನವರಾಗಿದ್ದು, ಮೈಸೂರು ವಿವಿಯಿಂದ ಕನ್ನಡ ಸಾಹಿತ್ಯದಲ್ಲಿ ಸ್ನಾತಕೋತ್ತರ, ಪಿಎಚ್‌ಡಿ ಪದವಿ ಪಡೆದಿದ್ದಾರೆ. ಇವರು ವಿವಿಧ ಸಾಹಿತ್ಯ ಪ್ರಕಾರಗಳಲ್ಲಿ ನೂರಕ್ಕೂ ಹೆಚ್ಚು ಕೃತಿ ಪ್ರಕಟಿಸಿ, ಹಲವಾರು ಮೌಲ್ಯಯುತ ಸಾಹಿತ್ಯಕ ಕಾರ್ಯಕ್ರಮಗಳ ಮೂಲಕ ಮುಕ್ತ ವಿವಿಯ ಕನ್ನಡ ವಿಭಾಗಕ್ಕೊಂದು ಘನತೆ ತಂದುಕೊಟ್ಟಿದ್ದಾರೆ. ಹಲವಾರು ವಿದ್ಯಾರ್ಥಿಗಳಿಗೆ ಸಂಶೋಧನಾ ಮಾರ್ಗದರ್ಶಕರಾಗಿಯೂ ಕಾರ್ಯನಿರ್ವಹಿಸಿದ್ದಾರೆ. ಹೀಗಾಗಿ ಇವರ ಕೊಡುಗೆ ಪರಿಗಣಿಸಿ ಈ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಗ್ರಂಥದ ಪ್ರಧಾನ ಸಂಪಾದಕ ಡಾ.ರಾಗೌ, ಡಾ.ನೀ.ಗೂ. ರಮೇಶ್, ಹೆಚ್.ಟಿ.ನಾಗಪ್ಪ ಉಪಸ್ಥಿತರಿದ್ದರು.

ಜು.27ರಂದು ಮೈಸೂರಲ್ಲಿ ಕಮಲಮ್ಮ, ಶಿವಲಿಂಗಯ್ಯ ಶರಣ ದತ್ತಿ ಪ್ರದಾನ ಕಾರ್ಯಕ್ರಮ

ಮೈಸೂರು, ಜು.24(ಜಿಎ)–ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಮೈಸೂರು ಜಿಲ್ಲಾ, ನಗರ ಘಟಕ ಮತ್ತು ಕದಳಿ ಮಹಿಳಾ ವೇದಿಕೆ ವತಿಯಿಂದ ಜು.27ರಂದು ಬೆಳಗ್ಗೆ 10.30ಕೆಕ ಜೆಎಸ್‌ಎಸ್ ಆಸ್ಪತ್ರೆ ಆವರಣದಲ್ಲಿರುವ ಶಿವರಾತ್ರಿ ರಾಜೇಂದ್ರ ಭವನದಲ್ಲಿ ಕಮಲಮ್ಮ ಮತ್ತು ಜಿ.ಎ. ಶಿವಲಿಂಗಯ್ಯ ಶರಣ ದತ್ತಿ ಪ್ರಶಸ್ತಿ ಕಾರ್ಯಕ್ರಮ ನಡೆಯಲಿದೆ ಎಂದು ಅಧ್ಯಕ್ಷ ಮ.ಗು.ಸದಾನಂದಯ್ಯ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದಿನ ಕಾರ್ಯಕ್ರಮದಲ್ಲಿ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯ ವಹಿಸುವರು, ವಚನ ಸಾಹಿತ್ಯಕ್ಕೆ ಸಲ್ಲಿಸಿರುವ ಅನುಪಮ ಸೇವೆ ಪರಿಗಣಿಸಿ ಚಾಮರಾಜನಗರ ಜಿಲ್ಲೆ ಕಾಗಲವಾಡಿಯ ಕೆ.ಸಿ.ಶಿವಪ್ಪ ಅವರಿಗೆ ಮತ್ತು ಬೆಳಗಾವಿ ಜಿಲ್ಲೆಯ ಯರಗಝರವಿ ಗ್ರಾಮದ ಡಾ.ಎಸ್.ಎನ್.ಅಂಗಡಿ, ಬೆಳಗಾವಿ ಜಿಲ್ಲೆಯ ತೇಗುಣಿಸಿಯ ಡಾ. ನಾನಾಸಾಹೇಬ ಹಚ್ಚಡದ, ಮಂಡ್ಯ ಜಿಲ್ಲೆಯ ಮಂಗಳ ಗ್ರಾಮದ ಡಾ.ಎಂ.ಎಸ್. ಅನಿತಾ ಅವರಿಗೆ ದತ್ತಿ ಪ್ರಶಸ್ತಿ ನೀಡಿ ಗೌರವಿಸಲಾಗುವುದು ಎಂದರು.

ಸೆ.5ರಿಂದ ಮನೆ ಮನೆಗೆ ಶರಣ ಸಂದೇಶ ಕಾರ್ಯಕ್ರಮ

ಆಗಸ್ಟ್ 5ರಿಂದ ಸೆಪ್ಟೆಂಬರ್ ಎರಡರವರೆಗೆ ಶ್ರಾವಣದ ಅಂಗವಾಗಿ ಮನೆ ಮನೆಗೆ ಶರಣ ಸಂದೇಶ ಕಾರ್ಯಕ್ರಮ ವಚನ–ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು, ಈ ವೇಳೆ ಬೇರೆ ಬೇರೆ ಬಡಾವಣೆಗಳ ಮನೆಗಳಲ್ಲಿ ಸಂಜೆ 5.30ಕ್ಕೆ ಉಪನ್ಯಾಸ ಕಾರ್ಯಕ್ರಮ ಆಯೋಜಿಸಲಾಗುವುದು. ಶರಣರ ವಚನಗಳನ್ನು ವಿದ್ವಾಂಸರು ಈ ವೇಳೆ ವಿಶ್ಲೇಷಿಸಲಿದ್ದಾರೆ ಎಂದು ಇದೇ ಸಂದರ್ಭದಲ್ಲಿ ತಿಳಿಸಿದರು.

ಜೊತೆಗೆ ವಚನಗಳ ಮೂರು ಸಾವಿರ ಕಿರು ಹೊತ್ತಿಗೆಗಳನ್ನು ಉಚಿತವಾಗಿ ಮನೆ ಮನೆಗೆ ತಲುಪಿಸಲಾಗುವುದು. ಇನ್ನು ಆ.5ರಂದು ಸಂಜೆ 5.30ಕ್ಕೆ ಕುವೆಂಪು ನಗರದಲ್ಲಿರುವ ಜೆಎಸ್‌ಎಸ್ ಕಾನೂನು ಕಾಲೇಜು ಸಭಾಂಗಣದಲ್ಲಿ ವಚನ ಶ್ರಾವಣ ಕಾರ್ಯಕ್ರಮ ಅಧಿಕೃತವಾಗಿ ಚಾಲನೆ ಪಡೆಯಲಿದೆ. ಖ್ಯಾತ ವಿಜ್ಞಾನಿ ಡಿ.ಎಸ್.ಗುರು ಈ ವೇಳೆ ಉಪನ್ಯಾಸ ನೀಡಲಿದ್ದಾರೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಟಿ.ಎಸ್. ಕುಮಾರಸ್ವಾಮಿ, ಶಾರದಾ ಶಿವಲಿಂಗಸ್ವಾಮಿ ಮತ್ತಿತರರು ಉಪಸ್ಥಿತರಿದ್ದರು.

ಜಿಲ್ಲಾ ಗಂಗಾಮತಸ್ಥರ ಸಂಘದಿಂದ ವೇದವ್ಯಾಸರ ಜಯಂತಿ ಆಚರಣೆ



ಮೈಸೂರು ಜಿಲ್ಲಾ ಗಂಗಾಮತಸ್ಥರ ಸಂಘದಿಂದ ವೇದವ್ಯಾಸರ ಜಯಂತಿ ಆಚರಿಸಲಾಯಿತು. ಈ ವೇಳೆ ಜಿಲ್ಲಾ ಅಧ್ಯಕ್ಷ ಪ್ರೊ. ವಸಂತಮ್ಮ, ಚಿಕ್ಕಲಿಂಗಸ್ವಾಮಿ, ನಾಗೇಂದ್ರ, ರವೀಂದ್ರ, ಮಲ್ಲೇಶ್, ರವಿ, ರಾಜು, ರಾಚಪ್ಪ, ನಾಗರಾಜು, ಉತ್ತಮ್, ಸೋಮಶೇಖರ್ ಮತ್ತಿತರರು ಉಪಸ್ಥಿತರಿದ್ದರು.

ಮಹಾಜನ ಕಾಲೇಜಲ್ಲಿ ಹಿರಿಯ ವಿದ್ಯಾರ್ಥಿಗಳ ಸಮಾವೇಶ



ಮೈಸೂರಿನ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಅಬ್ದುಲ್ ಕಲಾಂ ಸಭಾಂಗಣದಲ್ಲಿ ಹಿರಿಯ ವಿದ್ಯಾರ್ಥಿಗಳ ಸಮಾವೇಶ ಏರ್ಪಡಿಸಲಾಗಿತ್ತು.

ಮೈಸೂರು,ಜು.24–ಮೈಸೂರಿನ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಅಬ್ದುಲ್ ಕಲಾಂ ಸಭಾಂಗಣದಲ್ಲಿ ಹಿರಿಯ ವಿದ್ಯಾರ್ಥಿಗಳ ಸಮಾವೇಶ ಏರ್ಪಡಿಸಲಾಗಿತ್ತು. 1982ರಿಂದ 2024ರವರೆಗೆ ಕಾಲೇಜಿನಿಂದ ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ಪಡೆದು ದೇಶದ ವಿವಿಧೆಡೆಗಳಲ್ಲಿ ನೆಲೆಸಿರುವ ಹಲವಾರು ಹಿರಿಯ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಹಿರಿಯ ವಿದ್ಯಾರ್ಥಿಗಳ ಸಂಘವು ಈ ವೇಳೆ ಆಟೋಟಗಳು, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಿತ್ತು.

ಕಾಲೇಜಿನ ಪ್ರಾಂಶುಪಾಲರಾದ ಡಾ. ಬಿ.ಆರ್.ಜಯಕುಮಾರಿ, ಹಿರಿಯ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷರಾದ ಶ್ರೀಮತಿ ರಾಧಿಕಾರಾಣಿ, ಉಪಾಧ್ಯಕ್ಷ ನಾಗೇಶ, ಕಾರ್ಯದರ್ಶಿ ರೋಷನ್, ಜಂಟಿ ಕಾರ್ಯದರ್ಶಿ ಶ್ರೀಮತಿ ಸ್ಮಿತಾ ಗ್ರೇಸ್, ಖಜಾಂಚಿ ಶ್ರೀಮತಿ ಸಹನಶ್ರೀ ಹಾಗೂ ಸದಸ್ಯರು ಹಾಜರಿದ್ದರು.

ತರಬೇತಿ ಭತ್ಯೆಗಾಗಿ ಅರ್ಜಿ ಆಹ್ವಾನ

ಮೈಸೂರು,ಜು.24– ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ವತಿಯಿಂದ 2024–25ನೇ ಸಾಲಿಗೆ ಅಲ್ಪಸಂಖ್ಯಾತರ ವರ್ಗಕ್ಕೆ ಸೇರಿದ ಅಭ್ಯರ್ಥಿಗಳ ಕಾನೂನು ಪದವೀಧರರಿಂದ ನ್ಯಾಯಾಂಗ ಆಡಳಿತದಲ್ಲಿ ತರಬೇತಿ ಪಡೆಯುವ ಅಭ್ಯರ್ಥಿಗಳಿಗೆ ತರಬೇತಿ ಭತ್ಯೆ ನೀಡಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿಯನ್ನು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳ ಕಾರ್ಯಾಲಯದಲ್ಲಿ ಪಡೆದು, ಆಗಸ್ಟ್ 23ರೊಳಗೆ ಅರ್ಜಿ ಸಲ್ಲಿಸಬಹುದು.

ಹೆಚ್ಚಿನ ಮಾಹಿತಿಗಾಗಿ ದೂ.ಸಂ:0821–2422088 ಅನ್ನು ಸಂಪರ್ಕಿಸಬಹುದು.

ಕೇಂದ್ರ ಬಜೆಟ್‌ನಲ್ಲಿ ಕರ್ನಾಟಕ ಸೇರಿ ದಕ್ಷಿಣದ ನಾಲ್ಕು ರಾಜ್ಯಗಳಿಗೆ ಖಾಲಿ ಚೊಂಬು

ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ ಆರೋಪ

ಮೈಸೂರು, ಜು.24(ಎಂಟಿವೈ)– ಕೇಂದ್ರ ಬಜೆಟ್‌ನಲ್ಲಿ ಕರ್ನಾಟಕ ಸೇರಿದಂತೆ ದಕ್ಷಿಣದ ನಾಲ್ಕು ರಾಜ್ಯಗಳನ್ನು ಸಂಪೂರ್ಣ ಕಡೆಗಣಿಸಿದ್ದು, ಕರ್ನಾಟಕಕ್ಕೆ ಖಾಲಿ ಚೊಂಬು, ತೆಂಗಿನಕಾಯಿ ಚಿಪ್ಪು ನೀಡಿದೆ ಎಂದು ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ ಆರೋಪಿಸಿದ್ದಾರೆ.



ಮೈಸೂರು ಕಾಂಗ್ರೆಸ್ ಭವನದಲ್ಲಿ ಬುಧವಾರ ನಡೆದ ಸುದ್ದಿಗೋಷ್ಠಿಯಲ್ಲಿ ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ ಖಾಲಿ ಚೊಂಬು, ಮೂರು ನಾಮ ಬಳಿದ ತೆಂಗಿನ ಕಾಯಿ ಚಿಪ್ಪನ್ನು ಪ್ರದರ್ಶಿಸಿದರು.

ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಖಾಲಿ ಚೊಂಬು, ಮೂರು ನಾಮ ಬಳಿದ ತೆಂಗಿನ ಕಾಯಿ ಚಿಪ್ಪನ್ನು ಪ್ರದರ್ಶಿಸಿ ಮಾತನಾಡಿದ ಅವರು, ಕೇಂದ್ರ ಸರ್ಕಾರ ರೈತರು, ಯುವಜನರು, ಪರಿಶಿಷ್ಟರು ಹಾಗೂ ಅಲ್ಪಸಂಖ್ಯಾತ ವಿರೋಧಿ ನೀತಿ ಅನುಸರಿಸುತ್ತಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿಯಾಗಿ ರಾಜ್ಯದ ಬೇಡಿಕೆಗಳ ಪಟ್ಟಿ ಸಲ್ಲಿಸಿದ್ದರೂ ಅವುಗಳಿಗೆ ಸ್ಪಂದಿಸಿಲ್ಲ. ರಾಜ್ಯದಿಂದ ಆಯ್ಕೆಯಾದ ಸಂಸದರು, ಸಚಿವರ ಸಭೆ ನಡೆಸಿ ರಾಜ್ಯದ ಪರ ನಿಲುವು ತಾಳುವಂತೆ ಹಾಗೂ ಬಜೆಟ್‌ನಲ್ಲಿ ರಾಜ್ಯಕ್ಕೆ ಕೊಡುಗೆ ಸಿಗುವಂತೆ ಒತ್ತಡ ಹೇರಲು ಮನವಿ ಮಾಡಿದ್ದರೂ ಯಾವುದೇ ಪ್ರಯೋಜನವಾಗಿಲ್ಲ. ಕೇಂದ್ರದ ಬಜೆಟ್‌ನಲ್ಲಿ ಕರ್ನಾಟಕದ ಪ್ರಸ್ತಾಪವೇ ಮಾಡಿಲ್ಲ. ಖಾಲಿ ಚೊಂಬು ಹಾಗೂ ತೆಂಗಿನಕಾಯಿ ಚಿಪ್ಪು ನೀಡಿರುವ ಬಿಜೆಪಿಯನ್ನು ರಾಜ್ಯದ ಮತದಾರರು ಬೆಂಬಲಿಸಬೇಕೆ ಎಂಬುದನ್ನು ಇನ್ನಾದರೂ ಯೋಚಿಸಬೇಕು ಎಂದು ಸಲಹೆ ನೀಡಿದರು.

ರಾಜ್ಯದಿಂದ ಆಯ್ಕೆಯಾಗಿರುವ ಬಿಜೆಪಿ, ಜೆಡಿಎಸ್‌ನ 19 ಸಂಸದರು ಏನು ಮಾಡುತ್ತಿದ್ದಾರೆ? ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರಿಂದಲೂ ಏನೇನೂ ಪ್ರಯೋಜನವಾಗಿಲ್ಲ. ತನ್ನನ್ನು ಗೆಲ್ಲಿಸಿದ ಮಂಡ್ಯ ಜನರ ಋಣ ತೀರಿಸುವ ನಿಟ್ಟಿನಲ್ಲಾದರೂ ಕೇಂದ್ರದಿಂದ ಒಂದು ಯೋಜನೆಯನ್ನು ಮಂಡ್ಯಕ್ಕೂ ನೀಡಿಸುವಲ್ಲಿ ಕುಮಾರಸ್ವಾಮಿ ವಿಫಲರಾಗಿದ್ದಾರೆ. ಅಲ್ಲದೆ, ಮೈಸೂರಿನ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಎಲ್ಲಿದ್ದಾರೆ? ಅವರೂ ಯಾವ ಯೋಜನೆಯನ್ನು ಮೈಸೂರಿಗೆ ತರಲಿಲ್ಲ ಎಂದು ಟೀಕಿಸಿದರು.

ಸುದ್ದಿಗೋಷ್ಠಿಯಲ್ಲಿ ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್‌ಖಾನ್, ಕಾಂಗ್ರೆಸ್ ನಗರಾಧ್ಯಕ್ಷ ಆರ್.ಮೂರ್ತಿ, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ಮಾಜಿ ಮೇಯರ್‌ಗಳಾದ ಮೋದಾಮಣಿ, ಟಿ.ಬಿ.ಚಿಕ್ಕಣ್ಣ, ಪುಷ್ಪಲತಾ ಚಿಕ್ಕಣ್ಣ, ಎಂ.ಸಿ.ರಾಜೇಶ್ವರಿ ಪುಟ್ಟಸ್ವಾಮಿ, ಜಿಪಂ ಮಾಜಿ ಅಧ್ಯಕ್ಷ ಬಿ.ಎಂ.ರಾಮು, ಮಾಜಿ ಉಪಮೇಯರ್ ಪುಷ್ಪವಲ್ಲಿ, ಹಿರಿಯ ಮುಖಂಡ ವಾಸು, ನಗರಪಾಲಿಕೆ ಮಾಜಿ ಸದಸ್ಯ ಕೆ.ವಿ.ಮಲ್ಲೇಶ್, ವಕ್ತಾರ ಕೆ.ಮಹೇಶ್ ಇನ್ನಿತರರು ಇದ್ದರು.

ರೈತರಿಗೆ ಮೂರು ದಿನಗಳ ತರಬೇತಿ

ಮೈಸೂರು,ಜು.24– ನಾಗನಹಳ್ಳಿಯ ಜಿಲ್ಲಾ ಕೃಷಿ ತರಬೇತಿ ಕೇಂದ್ರದಲ್ಲಿ ಆಗಸ್ಟ್ 1ರಿಂದ 3ರವರೆಗೆ 'ಬಾಳೆ ಬೆಳೆಗಳಲ್ಲಿ ತಳಿ ಆಯ್ಕೆ, ಆಧುನಿಕ ಕೃಷಿ ಪದ್ಧತಿಗಳು, ಸೂಕ್ಷ್ಮ ನೀರಾವರಿ ಮತ್ತು ರಸಾವರಿ ತಾಂತ್ರಿಕತೆಗಳ ಅಳವಡಿಕೆ ಮೂಲಕ ಅಧಿಕ ಲಾಭ' ವಿಷಯದ ಬಗ್ಗೆ ರೈತ, ರೈತ ಮಹಿಳೆಯರಿಗೆ ಮೂರು ದಿನಗಳ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

ತರಬೇತಿಯಲ್ಲಿ ಭಾಗವಹಿಸುವ ರೈತ, ರೈತ ಮಹಿಳೆಯರಿಗೆ ಊಟ ಮತ್ತು ವಸತಿ ವ್ಯವಸ್ಥೆಯನ್ನು ಒದಗಿಸಲಾಗುತ್ತಿದ್ದು, ಆಸಕ್ತ ರೈತ, ರೈತ ಮಹಿಳೆಯರು ತಮ್ಮ ಹೆಸರನ್ನು ತರಬೇತಿ ಕೇಂದ್ರದ ಕೃಷಿ ಅಧಿಕಾರಿ ದೂ. ಸಂ: 82779 33177ಕ್ಕೆ ಕರೆಮಾಡಿ ತಮ್ಮ ಹೆಸರುಗಳನ್ನು ನೋಂದಾಯಿಸಿಕೊಳ್ಳಬಹುದು. ಕೇವಲ ಮೈಸೂರು ಜಿಲ್ಲೆಯ 40 ರೈತ/ರೈತಮಹಿಳೆಯರಿಗೆ ಮಾತ್ರ ಅವಕಾಶವಿದ್ದು, ಮೊದಲು ನೋಂದಣಿ ಮಾಡಿದವರಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು ಎಂದು ನಾಗನಹಳ್ಳಿ ಜಿಲ್ಲಾ ಕೃಷಿ ತರಬೇತಿ ಕೇಂದ್ರದ ಉಪ ಕೃಷಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು ಮಿತ್ರ ಗುರುವಾರ 25 ಜುಲೈ 2024

ಅದ್ದೂರಿ ಮೆರವಣಿಗೆಯೊಂದಿಗೆ ಚಾಮುಂಡೇಶ್ವರಿ ಹಬ್ಬ ಆಚರಣೆ



ಚಾಮುಂಡೇಶ್ವರಿ ಹಬ್ಬದ ಅಂಗವಾಗಿ ಅದ್ದೂರಿ ಮೆರವಣಿಗೆ ನಡೆಸಲಾಯಿತು.

ಪಿರಿಯಾಪಟ್ಟಣ, ಜು.24– ಗೋಂದೊಳ್ಳಿ ಮರಾಠ ಸಮಾಜದ ವತಿಯಿಂದ ಮೂರು ದಿನಗಳ ಕಾಲ ನಡೆದ 35ನೇ ವರ್ಷದ ಚಾಮುಂಡೇಶ್ವರಿ ಹಬ್ಬದ ವಾರ್ಷಿಕ ಪೂಜಾ ಮಹೋತ್ಸವ ಅದ್ದೂರಿ ಮೆರವಣಿಗೆಯೊಂದಿಗೆ ಮುಕ್ತಾಯಗೊಂಡಿತು.

ಸೋಮವಾರ ಸಮಾಜ ಬಾಂಧವರು ಪಟ್ಟಣದ ಅರಸೀಕೆರೆಯಿಂದ ಶ್ರೀ ಚಾಮುಂಡಿ ಮಾತೆಯನ್ನು ಅದ್ದೂರಿ ಮೆರವಣಿಗೆಯೊಂದಿಗೆ ಪೂಜಾ ಸ್ಥಳಕ್ಕೆ ತಂದು ಪ್ರಾಣ ಪ್ರತಿಷ್ಠಾಪನೆ ಮಾಡಿ ಗಣಪತಿ ಹೋಮ ಸೇರಿದಂತೆ ಪೂಜಾ ವಿಧಿ ವಿಧಾನಗಳನ್ನು ನಡೆಸಿ ಸಾರ್ವಜನಿಕರಿಗೆ ಅನ್ನಸಂತರ್ಪಣೆ ನೆರವೇರಿಸಲಾಯಿತು.

ಮೂರು ದಿನಗಳ ಕಾಲ ನಡೆದ ಪೂಜಾ ಸಮಾರಂಭದಲ್ಲಿ ಸಾವಿರಾರು ಭಕ್ತರು ಹಾಗೂ ಸಮಾಜ ಬಾಂಧವರು ಪಾಲ್ಗೊಂಡು ಸಂಭ್ರಮಿಸಿದರು. ಕೊನೆಯ ದಿನವಾದ ಇಂದು ಬೆಳಗ್ಗೆಯಿಂದಲೇ ಚಾಮುಂಡೇಶ್ವರಿ ದೇವಿಗೆ ಹೂವು ಹಾಗೂ ಪೂಜಾ ಸಾಮಗ್ರಿಗಳಿಂದ ಅಲಂಕರಿಸಿ ಅಲಂಕೃತ ರಥದಲ್ಲಿ ಶ್ರೀ ಚಾಮುಂಡೇಶ್ವರಿ ದೇವಿಯ ಮೆರವಣಿಗೆ ಪಟ್ಟಣದ ಪ್ರಮುಖ ಬೀದಿಯಲ್ಲಿ ಡೊಳ್ಳು ಕುಣಿತ, ಗೊಂಬೆ ಕುಣಿತ ಸೇರಿದಂತೆ ಜಾನಪದ ಕಲಾತಂಡದೊಂದಿಗೆ ಅದ್ದೂರಿ ಮೆರವಣಿಗೆ ನಡೆಸಿ, ಪಟ್ಟಣದ ದೊಡ್ಡ ಕೆರೆಯಲ್ಲಿ ವಿಸರ್ಜಿಸಲಾಯಿತು.

ಈ ಮೆರವಣಿಗೆಯಲ್ಲಿ ನೂರಾರು ಮಂದಿ ಸಮಾಜದ ಬಾಂಧವರು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು.





ಅಧಿಕಾರಿಗಳ ನಿರ್ಲಕ್ಷ್ಯವೇ ಕಾರಣ..

ಕಬಿನಿ ಜಲಾಶಯ ಭರ್ತಿಯಾದ ಹಿನ್ನೆಲೆಯಲ್ಲಿ ಕಬಿನಿ ಜಲಾಶಯದಿಂದ ತಾರಕ ಜಲಾಶಯಕ್ಕೆ ಏತ ನೀರಾವರಿ ಮೂಲಕ ನೀರನ್ನು ತುಂಬಿಸುವ ಕೆಲಸವನ್ನು ಮಾಡಿ ಎಂದು ಕಳೆದ ಒಂದು ತಿಂಗಳ ಹಿಂದೆಯೇ ಅಧಿಕಾರಿಗಳಿಗೆ ಶಾಸಕ ಅನಿಲ್ ಸೂಚನೆ ನೀಡಿದ್ದರು. ಅನಿಲ್ ಅವರು ಅಧಿಕಾರಿಗಳಿಗೆ ತರಾಟೆ ತೆಗೆದು ಕೊಂಡ ಹಿನ್ನೆಲೆಯಲ್ಲಿ ಜು.13ರಂದು ತಾರಕ ಜಲಾಶಯಕ್ಕೆ ನೀರು ತುಂಬುವುದಕ್ಕೆ ಪೂಜೆ ಸಲ್ಲಿಸಿ ಚಾಲನೆ ನೀಡಿದರು. ಆದರೆ ತಾರಕ ಜಲಾಶಯಕ್ಕೆ ನೀರು ಹರಿದು ಹೋಗುವ ಪೈಪುಗಳು ಅಲ್ಲಲ್ಲಿ ಒಡೆದು ನೀರು ಪೋಲಾಗುತ್ತಿರುವುದರಿಂದ ಜಲಾಶಯ ತುಂಬಿಲ್ಲ. ನೀರು ಪೋಲಾಗುತ್ತಿದೆ. ಇದಕ್ಕೆ ಅಧಿಕಾರಿಗಳ ನಿರ್ಲಕ್ಷ್ಯವೇ ಕಾರಣ ಎಂದು ರೈತರು ಆರೋಪಿಸಿದ್ದಾರೆ.

ಕಬಿನಿ, ನುಗು ಭರ್ತಿಯಾದರು, ಇನ್ನೂ ತುಂಬದ ತಾರಕ ಜಲಾಶಯ

ನೀರಿನ ಪೈಪುಗಳು ಒಡೆದು ನೀರು ಪೋಲಾಗುತ್ತಿರುವುದೇ ಕಾರಣ



ಹೆಚ್.ಡಿ.ಕೋಟೆ, ಜು.24– ಕಬಿನಿ ಮತ್ತು ನುಗು ಜಲಾಶಯ ತುಂಬಿದ್ದರೂ ತಾರಕ ಜಲಾಶಯ ಇನ್ನೂ ತುಂಬದೇ ಇರುವುದು ರೈತರಲ್ಲಿ ಅಸಮಾಧಾನವನ್ನುಂಟು ಮಾಡಿದೆ.

ಸರಗೂರು ತಾಲೂಕಿನಲ್ಲಿ ಕಬಿನಿ, ತಾರಕ, ನುಗು ಜಲಾಶಯಗಳಿದ್ದು, ಕಬಿನಿ ಜಲಾಶಯ ಹಾಗೂ ನುಗು ಜಲಾಶಯ ಸಂಪೂರ್ಣ ಭರ್ತಿಯಾಗಿ ಮೈದುಂಬಿ ಹರಿಯುತ್ತಿವೆ, ಆದರೆ ತಾರಕ ಜಲಾಶಯ ಇನ್ನೂ ಭರ್ತಿ ಆಗಿಲ್ಲ. ನೀರು ಹರಿಯುವ ಪೈಪುಗಳು ಒಡೆದು ಅಲ್ಲಲ್ಲಿ ನೀರು ಪೋಲಾಗುತ್ತಿರುವುದರಿಂದ ಜಲಾಶಯ ತುಂಬಿಲ್ಲ. ಕಬಿನಿ ಮತ್ತು ನುಗು ಜಲಾಶಯದಿಂದ ಸಂಪರ್ಕ ಕಲ್ಪಿಸಲಾಗಿರುವ ಭಾರಿ ಗಾತ್ರದ ಪೈಪುಗಳ ಮೂಲಕ ತಾರಕ ಜಲಾಶಯಕ್ಕೆ ನೀರು ತುಂಬಿಸಲಾಗುತ್ತಿದೆ.

ಕಬಿನಿ ಜಲಾಶಯದ ಜಲಾನಯನ ಪ್ರದೇಶದಲ್ಲಿ ಸುಮಾರು 1.27 ಲಕ್ಷ ಎಕರೆ ಅಚ್ಚುಕಟ್ಟು ಪ್ರದೇಶವಿದ್ದು, ಅದರಲ್ಲಿ ಹೆಚ್.ಡಿ.ಕೋಟೆ ತಾಲೂಕು ಹಾಗೂ ಸರಗೂರು ತಾಲೂಕು ಪ್ರದೇಶದಲ್ಲಿ 7,400 ಎಕರೆ ಅಚ್ಚುಕಟ್ಟು ಪ್ರದೇಶಕ್ಕೆ ನೀರು ಉಪಯೋಗ ಆಗಲಿದೆ. ಸರಗೂರು ತಾಲೂಕಿನ ನುಗು ಜಲಾಶಯದ ಜಲಾನಯನ ಪ್ರದೇಶದಲ್ಲಿ ಒಟ್ಟು 18110 ಎಕರೆ ಅಚ್ಚುಕಟ್ಟು ಪ್ರದೇಶವಿದ್ದು, ಅದರಲ್ಲಿ ಸರಗೂರು ತಾಲೂಕಿನಲ್ಲಿ 1500 ಎಕರೆ ಅಚ್ಚುಕಟ್ಟು ಪ್ರದೇಶಕ್ಕೆ ಇದರ ಉಪಯೋಗವಾಗಲಿದೆ.

ತಾರಕ ಜಲಾಶಯದ ಜಲಾನಯನ ಪ್ರದೇಶದಲ್ಲಿ ಹೆಚ್.ಡಿ.ಕೋಟೆ ತಾಲೂಕಿನಲ್ಲಿ 17400 ಎಕರೆ ಅಚ್ಚುಕಟ್ಟು ಪ್ರದೇಶವಿದ್ದು, ಹೆಚ್.ಡಿ.ಕೋಟೆ ತಾಲೂಕಿನ ಜನತೆಗೆ ಅತೀ ಹೆಚ್ಚು ಅನುಕೂಲವಾಗುವ ಜಲಾಶಯ ಎಂದರೆ ತಾರಕ ಜಲಾಶಯ, ಆದರೆ ತಾರಕ ಜಲಾಶಯ ತುಂಬದೇ ಇರುವುದು ಈ ಭಾಗದ ರೈತರಲ್ಲಿ ಬೇಸರ ಉಂಟು ಮಾಡಿದೆ.

ತಾರಕ ಜಲಾಶಯದಲ್ಲಿ ಅತಿ ಹೆಚ್ಚು ಅಚ್ಚುಕಟ್ಟು ಇರುವುದರಿಂದ ನಮ್ಮ ತಾಲೂಕಿನ ರೈತರಿಗೆ ಅನುಕೂಲ ಆಗುವ ನಿಟ್ಟಿನಲ್ಲಿ ಶಾಸಕ ಅನಿಲ್ ಚಿಕ್ಕಮಾದು ಅವರು ಅಧಿಕಾರಿಗಳೊಂದಿಗೆ ಸಭೆ ನಡೆಸಿ ಕಬಿನಿ ಜಲಾಶಯ ತುಂಬಿರುವುದರಿಂದ ತಾರಕ ಏತ ನೀರಾವರಿಯಿಂದ ತಾರಕ ಜಲಾಶಯಕ್ಕೆ ನೀರು ತುಂಬಿಸುವ ಕಾರ್ಯಕ್ಕೆ ಚಾಲನೆ ನೀಡಿದ್ದರು. ಆದರೂ ಇನ್ನೂ ತಾರಕ ಜಲಾಶಯ ಭರ್ತಿ ಆಗದೆ ಇರುವುದು ತಾರಕ ಜಲಾಶಯ ಅಚ್ಚುಕಟ್ಟು ಭಾಗದ ಹೆಚ್.ಡಿ.ಕೋಟೆ ರೈತರು ಬೇಸರಗೊಂಡಿದ್ದಾರೆ.

ಹಾರಂಗಿ ಯೋಜನಾ ಮಟ್ಟದ ನೀರು ಬಳಕೆದಾರರ ಸಹಕಾರ ಮಹಾಮಂಡಳಕ್ಕೆ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ



ಚೌಡೇಗೌಡ



ಮಂಜುನಾಥ್

ಹುಣಸೂರು, ಜು.24– ಹಾರಂಗಿ ಯೋಜನಾ ಮಟ್ಟದ ನೀರು ಬಳಕೆದಾರರ ಸಹಕಾರ ಮಹಾಮಂಡಲದ ಅಧ್ಯಕ್ಷರಾಗಿ ಅರಕಲಗೂಡು ತಾಲೂಕಿನ ಎಸ್.ಸಿ. ಚೌಡೇಗೌಡ ಹಾಗೂ ಉಪಾಧ್ಯಕ್ಷರಾಗಿ ಹುಣಸೂರು ತಾಲೂಕಿನ ಹನಗೋಡು ಮಂಜುನಾಥ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಸಂಘದ ಕಾರ್ಯದರ್ಶಿ ಎಸ್.ಮಹೇಶ್ ತಿಳಿಸಿದ್ದಾರೆ.

ಕೊಡಗಿನ ಕುಶಾಲನಗರದ ಮಹಾಮಂಡಲದ ಕಚೇರಿಯಲ್ಲಿ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಎಸ್.ಸಿ. ಚೌಡೇಗೌಡ, ಉಪಾಧ್ಯಕ್ಷ ಸ್ಥಾನಕ್ಕೆ ಹನಗೋಡು ಮಂಜುನಾಥ್ ಇಬ್ಬರು ಮಾತ್ರ ನಾಮಪತ್ರ ಸಲ್ಲಿಸಿದ್ದರಿಂದ ಅವಿರೋಧವಾಗಿ ಆಯ್ಕೆಯಾಗಿದ್ದಾರೆಂದು ಚುನಾವಣಾಧಿಕಾರಿಯಾದ ತಹಶೀಲ್ದಾರ್ ಕಿರಣ್‌ಗೌರಯ್ಯ ಪ್ರಕಟಿಸಿದರು.

ಚುನಾವಣೆಯಲ್ಲಿ ನಿರ್ದೇಶಕರಾದ ಎಂ.ದೇವರಾಜ್, ಎಚ್.ಎನ್. ಮಹದೇವ್, ಕಿರಣ್‌ಕುಮಾರ್, ಸಿ.ಕೆ.ರಮೇಶ್, ತಿಮ್ಮೇಗೌಡ, ಯತೀಶ್, ಬಿ.ಎಸ್.ಹರೀಶ್, ಎಚ್.ಟಿ.ದಿನೇಶ್, ಎಸ್.ಆರ್. ಕೇಶವೇಗೌಡ, ರಾಜೇಗೌಡ, ಟಿ.ಎಸ್.ಲೋಕೇಶ್, ಶಿವಣ್ಣ, ಎನ್.ಅಶೋಕ್ ಭಾಗವಹಿಸಿದ್ದರು. ಸಹಕಾರ ಸಂಘದ ಕಾರ್ಯದರ್ಶಿ ಮಹೇಶ್ ಇದ್ದರು. ಚುನಾವಣೆ ನಂತರ ಅಭಿಮಾನಿಗಳು ನೂತನ ಪದಾಧಿಕಾರಿಗಳನ್ನು ಅಭಿನಂದಿಸಿದರು.

ಮುತ್ತುಮಾರಮ್ಮ ದೇವಸ್ಥಾನದಲ್ಲಿ 3ನೇ ಆಷಾಢ ಶುಕ್ರವಾರದ ಪೂಜೆ

ಸಂಗೊಳ್ಳಿ ರಾಯಣ್ಣ ಸಂಘದಿಂದ 10 ಸಾವಿರ ಲಾಡು ಪ್ರಸಾದ





ಹುಣಸೂರು, ಜು.24– ನಗರದ ಮಾರಿಗುಡಿ ಬೀದಿಯಲ್ಲಿರುವ ಮುತ್ತುಮಾರಮ್ಮ ದೇವಸ್ಥಾನದಲ್ಲಿ ನಾಳೆ ಆಷಾಢ ಮಾಸದ 3ನೇ ಶುಕ್ರವಾರದ ವಿಶೇಷ ಪೂಜೆ ನಡೆಯಲಿದ್ದು, ಸಂಗೊಳ್ಳಿ ರಾಯಣ್ಣ ಸಂಘದವರಿಂದ ಪೂಜಾ ಪ್ರಸಾದವಾಗಿ ಹತ್ತು ಸಾವಿರ ಲಾಡುಗಳನ್ನು ಭಕ್ತಾದಿಗಳಿಗೆ ಹಂಚಲಾಗುವುದು ಎಂದು ಸಂಘದ ಅಧ್ಯಕ್ಷ ಅಶೋಕ್ ರಾಜಲಿಂಗಯ್ಯ ತಿಳಿಸಿದರು.

ಬೆಳಗ್ಗೆ ಮುತ್ತುಮಾರಮ್ಮ ತಾಯಿಗೆ ವಿಶೇಷ ಪೂಜೆ ನಡೆಯಲಿದ್ದು, ಸಂಜೆ ದೇವಿಯ ಉತ್ಸವ ನಡೆಯಲಿದೆ. ಹಾಗೂ ಬೆಳಗ್ಗಿನಿಂದ ಸಂಜೆವರೆವಿಗೂ ದೇವಾಲಯಕ್ಕೆ ಬರುವ ಭಕ್ತರಿಗೆ ಹತ್ತು ಸಾವಿರ ಲಾಡು ಹಂಚಲಾಗುವುದು. ಜೊತೆಗೆ ದೇವಸ್ಥಾನದ ಪ್ರಸಾದವನ್ನೂ ಸಹ ನೀಡಲಾಗುತ್ತದೆ ಎಂದರು.

ನಮ್ಮ ಸಂಘದಿಂದ ಕಳೆದ ಐದು ವರ್ಷಗಳಿಂದ ಆಷಾಢ ಮಾಸದ ಮೂರನೇ ಶುಕ್ರವಾರ ಲಾಡು ಪ್ರಸಾದ ಹಂಚಲು ಪ್ರಾರಂಭಿಸಿದ್ದು, ಮೊದಲ ವರ್ಷ ಐದು ಸಾವಿರ, ಎರಡನೇ ವರ್ಷ ಆರು ಸಾವಿರ, ಮೂರನೇ ವರ್ಷ ಏಳು ಸಾವಿರ, ನಾಲ್ಕನೆ ವರ್ಷ ಎಂಟು ಸಾವಿರ, ಈ ವರ್ಷ ಹತ್ತು ಸಾವಿರ ಲಾಡು ಪ್ರಸಾದವನ್ನು ಹಂಚಲಾಗುತ್ತಿದೆ. ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಬಂದು ದೇವಿ ಕೃಪೆಗೆ ಪಾತ್ರರಾಗಬೇಕೆಂದು ಕೋರಿದ್ದಾರೆ. ಸಂಜೆ ನಡೆಯುವ ದೇವಿ ಉತ್ಸವದಲ್ಲಿ ನೂರಾರು ಭಕ್ತರು, ಮಹಿಳೆಯರು ಹಾಗೂ ಸಂಗೊಳ್ಳಿ ರಾಯಣ್ಣ ಸಂಘದ ಪದಾಧಿಕಾರಿಗಳು ಪಾಲ್ಗೊಳ್ಳಲಿದ್ದಾರೆ ಎಂದರು.

ವಿದ್ಯುತ್ ತಂತಿ ತುಳಿದ ವ್ಯಕ್ತಿ, ಮೇಕೆ ಸಾವು



ತಿ.ನರಸೀಪುರ, ಜು.24– ತುಂಡಾಗಿ ಬಿದ್ದಿದ್ದ ವಿದ್ಯುತ್ ತಂತಿಯನ್ನು ತುಳಿದ ಪರಿಣಾಮ ವ್ಯಕ್ತಿ ಹಾಗೂ ಜೊತೆಯಲ್ಲಿದ್ದ ಮೇಕೆಯೊಂದು ಸಾವನ್ನಪ್ಪಿರುವ ಘಟನೆ ತಾಲೂಕಿನ ಕನ್ನನಾಯಕನಹಳ್ಳಿ ಗ್ರಾಮದಲ್ಲಿ ಇಂದು ಬೆಳಗ್ಗೆ ಸಂಭವಿಸಿದೆ.

ಗ್ರಾಮದ ನಿಂಗೇಗೌಡ (70) ಮೃತಪಟ್ಟವರಾಗಿದ್ದು, ಇವರೊಂದಿಗೆ ಮೇಕೆಯೊಂದು ಸಾವನ್ನಪ್ಪಿದೆ.

ಇಂದು ಬೆಳಗ್ಗೆ ಎಂದಿನಂತೆ ದನ ಮೇಯಿಸಲು ನಿಂಗೇಗೌಡ ಮನೆಯಿಂದ ದನ ಹಾಗೂ ಮೇಕೆಯೊಂದಿಗೆ ಹೊಲದ ಕಡೆ ಹೋಗಿದ್ದಾರೆ. ದಾರಿ ಮಧ್ಯೆ ತುಂಡಾಗಿ ಬಿದ್ದಿದ್ದ ವಿದ್ಯುತ್ ತಂತಿಯನ್ನು ತುಳಿದ ಪರಿಣಾಮ ವಿದ್ಯುತ್ ಪ್ರವಹಿಸಿ ರೈತ ನಿಂಗೇಗೌಡ ಹಾಗೂ ಮೇಕೆ ಮರಿ ಸಾವನ್ನಪ್ಪಿದೆ.

ತಿ.ನರಸೀಪುರ ಬಳಿ ದುರಂತ

ವಿಷಯ ತಿಳಿಯುತ್ತಿದ್ದಂತೆ ಸ್ಥಳಕ್ಕೆ ಜಮಾಯಿಸಿದ ರೈತರು ಕೂಡಲೇ ಪೊಲೀಸ್ ಹಾಗೂ ಚೆಸ್ಕಾಂ ಇಲಾಖೆಗೆ ಸುದ್ದಿ ಮುಟ್ಟಿಸಿದ್ದಾರೆ. ಆದರೆ 10 ಘಂಟೆಗೆ ಸುದ್ದಿ ಮುಟ್ಟಿಸಿದರೂ 12 ಗಂಟೆಯಾದರೂ ಇಲಾಖೆಯವರು ಯಾರೂ ಸ್ಥಳಕ್ಕೆ ಬಾರದ ಹಿನ್ನೆಲೆಯಲ್ಲಿ ರೈತರು ಇಲಾಖೆ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿದರು. ಕೂಡಲೇ ಸಂಬಂಧಿಸಿದ ಇಲಾಖೆ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ, ಮೃತನ ಕುಟುಂಬಕ್ಕೆ ಪರಿಹಾರ ನೀಡಬೇಕೆಂದು ಗ್ರಾಮಸ್ಥರು ಒತ್ತಾಯಿಸಿದರು. ಅಲ್ಲದೇ ಚೆಸ್ಕಾಂ ಇಲಾಖೆಯ ಬೇಜವಾಬ್ದಾರಿತನದಿಂದ ಘಟನೆ ಸಂಬಂಧಿಸಿದ್ದು, ಘಟನೆ ಕಾರಣರಾದ ಇಲಾಖೆ ಸಿಬ್ಬಂದಿ ಮೇಲೆ ಕಾನೂನು ಕ್ರಮ ಜರುಗಿಸಬೇಕೆಂದು ಒತ್ತಾಯಿಸಿದ್ದಾರೆ.

ಹುಣಸೂರಲ್ಲಿ ಡೆಂಗ್ಯೂ ಜಾಗೃತಿ ಅಭಿಯಾನ



ಡೆಂಗ್ಯೂ ನಿಯಂತ್ರಣ ಕುರಿತು ಅರಿವು ಮೂಡಿಸುವ ಜಾಥಾ ನಡೆಸಲಾಯಿತು.

ಹುಣಸೂರು, ಜು.24– ಟ್ಯಾಲೆಂಟ್ ಶಿಕ್ಷಣ ಸಂಸ್ಥೆಯ ಪದವಿ ಪೂರ್ವ ಕಾಲೇಜು, ಪ್ರೌಢಶಾಲೆ ಹಾಗೂ ಹುಣಸೂರು ಪ್ರಾಥಮಿಕ ಆರೋಗ್ಯ ಕೇಂದ್ರದ ಸಹಯೋಗದೊಂದಿಗೆ ಹುಣಸೂರು ಪಟ್ಟಣದಾದ್ಯಂತ ಡೆಂಗ್ಯೂ ನಿಯಂತ್ರಣ ಕುರಿತು ಅರಿವು ಮೂಡಿಸುವ ಜಾಥಾ ನಡೆಸಲಾಯಿತು.

ನಗರದ ಸಂವಿಧಾನ ವೃತ್ತದಿಂದ ಸುಮಾರು 300ಕ್ಕೂ ಹೆಚ್ಚು ವಿದ್ಯಾರ್ಥಿಗಳು ಸಾರ್ವಜನಿಕರಿಗೆ ಡೆಂಗ್ಯೂ ಎಚ್ಚರಿಕೆಯ ಕುರಿತು ಕರಪತ್ರವನ್ನು ನೀಡುವುದರ ಜೊತೆಗೆ ಘೋಷಣೆಗಳನ್ನು ಕೂಗುವ ಮೂಲಕ ನಗರದ ಬಜಾರ್ ರಸ್ತೆ ಮೂಲಕ ಸಾಗಿ ಮಂಟಿ ಸರ್ಕಲ್ ಹಾದು ಮಂಜುನಾಥ ಬಡಾವಣೆಯ ಪ್ರಮುಖ ಬೀದಿಗಳಲ್ಲಿ ಸಾಗಿ ಅರಿವು ಮೂಡಿಸಲಾಯಿತು. ಟ್ಯಾಲೆಂಟ್ ಶಿಕ್ಷಣ ಸಂಸ್ಥೆಯ ನಿರ್ದೇಶಕ ಮಂಜುನಾಥ್ ಆರ್.ಎನ್, ಪ್ರಾಂಶುಪಾಲ ಮಂಜುನಾಥ ಎಂ.ಟಿ, ಉಪಪ್ರಾಂಶುಪಾಲ ಜಗದೀಶ್, ಹುಣಸೂರು ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಅನಂತಿ, ಅಂಗನವಾಡಿ ಕಾರ್ಯಕರ್ತರು, ಆರೋಗ್ಯ ಸಿಬ್ಬಂದಿಗಳು, ಶಾಲಾ ಶಿಕ್ಷಕರಾದ ಸುಧಾಕರ್, ಲೋಹಿತ್, ಕನ್ನಿಕ, ಪೊಲೀಸ್ ಸಿಬ್ಬಂದಿ ಮಹೇಶ್ ಹಾಜರಿದ್ದರು.

ಪಾರ್ಶ್ವವಾಯು ವ್ಯಕ್ತಿಗಳು ದೈಹಿಕ, ಮಾನಸಿಕವಾಗಿ ದೃತಿಗೆಡಬಾರದು

ನಾರಾಯಣ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯ ನರರೋಗ ತಜ್ಞ ಡಾ. ವಿಜೇತ್ ಸಲಹೆ

ಸರಗೂರು, ಜು.24– ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್, ವಿವೇಕಾನಂದ ಸ್ಮಾರಕ ಆಸ್ಪತ್ರೆ ಹಾಗೂ ಸಮುದಾಯದ ಸಹಭಾಗಿತ್ವದೊಂದಿಗೆ ವಿವೇಕಾನಂದ ಸ್ಮಾರಕ ಆಸ್ಪತ್ರೆಯಲ್ಲಿ ಪಾರ್ಶ್ವವಾಯು ವ್ಯಕ್ತಿಗಳು ಮತ್ತು ಪೋಷಕರಿಗೆ ಪುನರ್ವಸತಿ ಚಿಕಿತ್ಸೆಯನ್ನು ಏರ್ಪಡಿಸಲಾಗಿತ್ತು.

ಮೈಸೂರು ನಾರಾಯಣ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯ ನರರೋಗ ತಜ್ಞ ಡಾ. ವಿಜೇತ್ ಮಾತನಾಡಿ, ಪಾರ್ಶ್ವವಾಯು ವ್ಯಕ್ತಿಗಳು ಜೀವನ ಮುಗಿದಿದೆ ಎಂದು ತಿಳಿಯಬಾರದು. ನೀವು ವೈದ್ಯಕೀಯವಾಗಿ ಜೀವನವನ್ನು ಸುಧಾರಿಸುವುದು ಹೇಗೆ ಎಂಬುದನ್ನು ತಿಳಿದುಕೊಳ್ಳಬೇಕು ಹಾಗೂ ದೈಹಿಕವಾಗಿ, ಮಾನಸಿಕವಾಗಿ ದೃತಿಗೆಡಬಾರದು ಎಂದರು.

ಇಂತಹ ಸಮಯದಲ್ಲಿ ಕೆಟ್ಟ ಚಟಗಳಿಗೆ, ಧೂಮಪಾನ, ಮದ್ಯಪಾನಗಳಿಗೆ ಒಳಗಾಗಬಾರದು. ನೀವು ಸ್ವತಂತ್ರವಾಗಿ ಜೀವಿಸಲು ಕೆಲವು ತರಬೇತಿಗಳು ನಿಮಗೆ ಬೇಕಾಗುತ್ತದೆ. ದುಡಿಯುವ ಮಾರ್ಗಗಳನ್ನು ಕಂಡುಕೊಳ್ಳಬೇಕು ಎಂದು ಕಿವಿಮಾತನ್ನು ಹೇಳಿದರು.



ಶಿಬಿರವನ್ನು ಉದ್ಘಾಟಿಸುತ್ತಿರುವ ವೈದ್ಯರು ಹಾಗೂ ಗಣ್ಯರು.

ಸರಗೂರು ತಾಲೂಕು ಸಾರ್ವಜನಿಕ ಆಸ್ಪತ್ರೆಯ ಆಡಳಿತ ವೈದ್ಯಾಧಿಕಾರಿ ಡಾ. ಪಾರ್ಥಸಾರಥಿ ಮಾತನಾಡಿ, ಪಾರ್ಶ್ವವಾಯು ಎಂಬುದು ಸಮಾಜದಲ್ಲಿ ತುಂಬಾ ಜಾಸ್ತಿಯಾಗಿದೆ. ತಲೆ, ಕತ್ತು, ಬೆನ್ನು ಭಾಗದ ನರಗಳಿಗೆ ಪೆಟ್ಟಾದಾಗ ಪಾರ್ಶ್ವವಾಯು ಆಗುತ್ತದೆ ಪಾರ್ಶ್ವವಾಯು ದೇಹದ ಯಾವುದೇ ಭಾಗಕ್ಕೆ ಆಗಬಹುದು, ಪಾರ್ಶ್ವವಾಯು ವ್ಯಕ್ತಿಗಳಿಗೆ ಉಪಶಮನ ಆರೈಕೆ ಬಹಳ ಮುಖ್ಯ ಶಿಬಿರದಲ್ಲಿ ನೀಡುವ ಔಷಧೋಪಚಾರ ಹಾಗೂ ಶಾರೀರಿಕ ಚಿಕಿತ್ಸೆಯನ್ನು ಪಡೆದು ಸಮಾಜದ ಮುಖ್ಯವಾಹಿನಿಗೆ ಬರಬೇಕು ಎಂದು ಹೇಳಿದರು.

ಇದಕ್ಕೂ ಮುನ್ನ ವೈದ್ಯರು, ಗಣ್ಯರು ಶಿಬಿರದ ಉದ್ಘಾಟನೆ ನಡೆಸಿದರು, ಶಿಬಿರವು ಜು.24 ರಿಂದ 28ರವರೆಗೆ ನಡೆಯಲಿದೆ ಎಂದು ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್, ವಿವೇಕಾನಂದ ಸ್ಮಾರಕ ಆಸ್ಪತ್ರೆಯವರು ತಿಳಿಸಿದ್ದಾರೆ.

ವೇದಿಕೆಯಲ್ಲಿ ದಡದಹಳ್ಳಿ ಗ್ರಾಮದ ಪಾರ್ಶ್ವವಾಯು ಚೇತರಿಕೆ ವ್ಯಕ್ತಿ ನಾಗಪ್ಪ ಡಿ ಜಿ, ಮೈಸೂರು ಎಲ್.ಅರಸ್, ಹೆಚ್.ಡಿ. ಕೋಟೆ ತಾಲೂಕು ಜೀವನಜ್ಯೋತಿ ವಿಶೇಷ ಚೇತನರ ಕ್ಷೇಮಾಭಿವೃದ್ಧಿ ಒಕ್ಕೂಟದ ಅಧ್ಯಕ್ಷ ನಾಗರಾಜು, ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ ನಿರ್ದೇಶಕರು–ವೈವಿಧ್ಯತೆ ಮತ್ತು ಸೇರ್ಪಡೆ ದೀಪಶ್ರೀ ಎಸ್.ಆರ್., ಕಾರ್ಯನಿರ್ವಾಹಕ ಸಹಾಯಕ ಮಮತ ಜಿ, ವಿವೇಕಾನಂದ ಸ್ಮಾರಕ ಆಸ್ಪತ್ರೆ ಸ್ವಾಗತಕಾರರಾದ ಮಂಜುಳ ಬಿ.ವಿ., ಉಪಶಮನ ಆರೈಕೆ ಕಾರ್ಯಕ್ರಮದ ಆರೋಗ್ಯ ಕಾರ್ಯಕರ್ತ ನಂದೀಶ್ ಇದ್ದರು.

ಅನಾರೋಗ್ಯದಿಂದ ಎಎಸ್ಐ ನಿಧನ



ತಿ.ನರಸೀಪುರ, ಜು.24– ಪಟ್ಟಣ ಪೊಲೀಸ್ ಠಾಣೆಯಲ್ಲಿ ಎಎಸ್ಐ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದ ಭಾನುಪ್ರಕಾಶ್ (57) ಬುಧವಾರ ಅನಾರೋಗ್ಯದಿಂದ ನಿಧನರಾದರು.

ಪಟ್ಟಣ ಪೊಲೀಸ್ ಠಾಣೆಯಲ್ಲಿ ಕಳೆದ ಮೂರು ವರ್ಷಗಳಿಂದ ಕರ್ತವ್ಯ ನಿರ್ವಹಿಸುತ್ತಿದ್ದ ಇವರು ಅನಾರೋಗ್ಯ ನಿಮಿತ್ತ ಮೈಸೂರಿನ ನಾರಾಯಣ ಹೃದಯಾಲಯದಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಚಿಕಿತ್ಸೆ ಫಲಕಾರಿಯಾಗದೇ ಬುಧವಾರ ಮಧ್ಯಾಹ್ನ ನಿಧನರಾಗಿದ್ದು, ಮೃತರ ಅಂತ್ಯಕ್ರಿಯೆ ಹುಟ್ಟೂರು ನಂಜನಗೂಡಿನಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೃತರಿಗೆ ಪತ್ನಿ, ಓರ್ವ ಪುತ್ರ ಹಾಗೂ ಪುತ್ರಿ ಇದ್ದು, ಇವರ ನಿಧನಕ್ಕೆ ಪಟ್ಟಣ ಠಾಣೆಯ ವೃತ್ತ ನಿರೀಕ್ಷಕ ಧನಂಜಯ ಹಾಗೂ ಪಿಎಸ್ಐ ಜಗದೀಶ್ ದೂಳ್‌ಶೆಟ್ಟಿ ಸೇರಿದಂತೆ ಠಾಣೆಯ ಸಿಬ್ಬಂದಿಗಳು ಕಂಬನಿ ಮಿಡಿದಿದ್ದಾರೆ.

ಕಾರ್ಖಾನೆಗೆ ಭೂಮಿ ನೀಡಿದ ರೈತರಿಗೆ ಕೆಲಸ ಕೊಡಲು ಒಪ್ಪಿಗೆ; ಮುಷ್ಕರ ವಾಪಸ್



ನಂಜನಗೂಡು ತಾಲೂಕಿನ ಅಳಗಂಚಿ ಗ್ರಾಮದ ಬಣ್ಣಾರಿ ಅಮ್ಮನ್ ಸಕ್ಕರೆ ಕಾರ್ಖಾನೆ ಮುಂಭಾಗ ಕಾರ್ಖಾನೆಗೆ ಭೂಮಿ ನೀಡಿದ ರೈತರು ಹಾಗೂ ಕೆಐಎಡಿಬಿ ಅಧಿಕಾರಿಗಳ ನಡುವೆ ಬುಧವಾರ ಸಭೆ ನಡೆಯಿತು.

ನಂಜನಗೂಡು, ಜು.24– ತಾಲೂಕಿನ ಅಳಗಂಚಿ ಗ್ರಾಮದ ಬಣ್ಣಾರಿ ಅಮ್ಮನ್ ಸಕ್ಕರೆ ಕಾರ್ಖಾನೆ ಮುಂಭಾಗ ಕಾರ್ಖಾನೆಗೆ ಭೂಮಿ ನೀಡಿದ ರೈತರು ಹಾಗೂ ಕೆಐಎಡಿಬಿ ಅಧಿಕಾರಿಗಳ ನಡುವೆ ಬುಧವಾರ ಸಭೆ ನಡೆದು 42 ರೈತರ ಮಕ್ಕಳನ್ನು ಹೊರಗುತ್ತಿಗೆ ಆಧಾರದ ಮೇಲೆ ಕೆಲಸಕ್ಕೆ ತೆಗೆದುಕೊಳ್ಳಲು ಕಾರ್ಖಾನೆ ಒಪ್ಪಿಗೆ ನೀಡಿರುವ ಪತ್ರವನ್ನು ಮುಷ್ಕರನಿರತ ರೈತರಿಗೆ ನೀಡಲಾಯಿತು.

ಒಪ್ಪಂದಕ್ಕೆ ಸ್ಪಂದಿಸಿರುವ ಕಾರ್ಖಾನೆಗೆ ಭೂಮಿ ನೀಡಿದ ರೈತರು ಕೆಲಸ ನೀಡುವಂತೆ ಒತ್ತಾಯಿಸಿ, ಕಳೆದ 169 ದಿನಗಳಿಂದ ನಡೆಸುತ್ತಿದ್ದ ಅನಿರ್ದಿಷ್ಟಾವಧಿ ಮುಷ್ಕರವನ್ನು ಕೈಬಿಟ್ಟಿದ್ದಾರೆ. ಕೊಟ್ಟ ಮಾತಿನಂತೆ ಕಾಯಂ ಉದ್ಯೋಗ ಕೊಡಲು ತಪ್ಪಿದರೆ ಮತ್ತೆ ತೀವ್ರವಾದ ಹೋರಾಟವನ್ನು ಮಾಡುವ ಎಚ್ಚರಿಕೆಯನ್ನು ನೀಡಿದ್ದಾರೆ.

ಒಪ್ಪಂದದ ಅನುಸಾರ 42 ರೈತ ಮಕ್ಕಳನ್ನು, ಸದ್ಯಕ್ಕೆ ಹೊರಗುತ್ತಿಗೆ ಆಧಾರದ ಮೇಲೆ ಕೆಲಸಕ್ಕೆ ತೆಗೆದುಕೊಳ್ಳಲಾಗುತ್ತದೆ. ಕಾರ್ಖಾನೆಯಲ್ಲಿ ಕಾಯಂ ಉದ್ಯೋಗ ಮಾಡುತ್ತಿರುವ ಕಾರ್ಮಿಕರು ವಯೋನಿವೃತ್ತಿ ಹೊಂದಿದ ನಂತರ ಅವರ ಸ್ಥಾನಗಳಿಗೆ ಈ 42 ಮಂದಿಯನ್ನು ಕಾಯಂಗೊಳಿಸಲು ತೀರ್ಮಾನಿಸಲಾಗಿದೆ. ಇವರೆಲ್ಲರಿಗೂ ಕಾನೂನಿನ ಪ್ರಕಾರ ನೀಡಬೇಕಿದ್ದ ಎಲ್ಲಾ ಸೌಲಭ್ಯಗಳನ್ನು ನೀಡಲಾಗುತ್ತದೆ. ಭವಿಷ್ಯದಲ್ಲಿ ಹೆಚ್ಚುವರಿ ಉದ್ಯೋಗಗಳು ಸೃಷ್ಟಿಯಾಗುವ ಸಂದರ್ಭದಲ್ಲಿ ಇವರನ್ನು ಆದ್ಯತೆಯ ಮೇರೆಗೆ ನೇಮಿಸಿಕೊಳ್ಳುವುದಾಗಿ ಕಾರ್ಖಾನೆಯವರು ತಿಳಿಸಿದ್ದಾರೆ.

ಈ ಕುರಿತು ಒಮ್ಮತಕ್ಕೆ ಬರಲಾಗಿದೆ. ಈ ವಿಷಯವನ್ನು ಪ್ರಸ್ತಾಪಿಸಿ ಕೆಐಎಡಿಬಿಗೆ ಕಾರ್ಖಾನೆಯ ವತಿಯಿಂದ ಪತ್ರವನ್ನು ನೀಡಲಾಗಿದೆ. ಈ ವಿಷಯವನ್ನು ಕೆಐಎಡಿಬಿಯ ಪರವಾಗಿ ಸ್ಥಳಕ್ಕೆ ಆಗಮಿಸಿದ್ದ ಕೆಐಎಡಿಬಿ ಎಇಇ ಅರುಣ್ ಕುಮಾರ್ ಹಾಗೂ ಎಇ ಶಬರೀಶ್ ತಿಳಿಸಿ, ರೈತ ಮುಖಂಡರಿಗೆ ಪತ್ರವನ್ನು ಹಸ್ತಾಂತರಿಸಿದರು.

ಈ ಸಂದರ್ಭದಲ್ಲಿ ಜನಾಂದೋಲನಗಳ ಮಹಾಮೈತ್ರಿಯ ರಾಜ್ಯ ಸಂಚಾಲಕ ಉಗ್ರ ನರಸಿಂಹೇಗೌಡ, ಎಐಯುಟಿಯುಸಿ ಕಾರ್ಮಿಕ ಸಂಘಟನೆಯ ಜಿಲ್ಲಾ ಕಾರ್ಯದರ್ಶಿ ಚಂದ್ರಶೇಖರ್ ಮೇಟಿ, ಕರ್ನಾಟಕ ರಾಜ್ಯ ರೈತ ಸಂಘದ ಜಿಲ್ಲಾ ಉಪಾಧ್ಯಕ್ಷ ಬೊಕ್ಕಹಳ್ಳಿ ನಂಜುಂಡಸ್ವಾಮಿ, ಅಖಿಲ ಭಾರತ ರೈತ ಕೃಷಿ ಕಾರ್ಮಿಕ ಸಂಘಟನೆಯ ಜಿಲ್ಲಾ ಸಂಚಾಲಕ ಬಸವರಾಜು, ರೈತ ಮಹಿಳೆಯರಾದ ಕೆಂಬಾಳಮ್ಮ, ಲಕ್ಷ್ಮಮ್ಮ, ಮಹಾದೇವಮ್ಮ, ಪುಟ್ಟಮ್ಮ, ರಾಜು, ಪುನೀತ್, ಮಂಜು, ಮಹೇಶ್, ಮಹದೇವೇಗೌಡ, ಬಸವಣ್ಣ, ಮಹದೇವ್ ಮುಂತಾದ ಪ್ರತಿಭಟನಾಕಾರರು ಉಪಸ್ಥಿತರಿದ್ದರು.

ತಿ.ನರಸೀಪುರ ತಾಲೂಕು ಆಡಳಿತದ ವಿರುದ್ಧ ರೈತರ ಆಕ್ರೋಶ

ಕೃಷಿ, ನೀರಾವರಿ, ಅಬಕಾರಿ ಇಲಾಖೆ, ಪುರಸಭೆ, ಪೊಲೀಸ್ ಇಲಾಖೆ ವಿರುದ್ಧ ಆರೋಪ

ತಿ.ನರಸೀಪುರ, ಜು.24– ಕೃಷಿ, ನೀರಾವರಿ ಸೇರಿದಂತೆ ಅಬಕಾರಿ ಇಲಾಖೆ, ಪುರಸಭೆ, ಪೊಲೀಸ್ ಇಲಾಖೆಯ ಅಧಿಕಾರಿಗಳ ಕಾರ್ಯವೈಖರಿಗೆ ರೈತ ಮುಖಂಡರು ಬೇಸರ ವ್ಯಕ್ತಪಡಿಸಿದ್ದಾರೆ.

ಪಟ್ಟಣದ ತಾಲೂಕು ಪಂಚಾಯಿತಿ ಸಭಾಂಗಣದಲ್ಲಿ ತಹಶೀಲ್ದಾರ್ ಟಿ.ಜಿ.ಸುರೇಶ್ ಆಚಾರ್ ಅಧ್ಯಕ್ಷತೆಯಲ್ಲಿ ನಡೆದ ರೈತರ ಕುಂದು ಕೊರತೆ ಸಭೆಯಲ್ಲಿ ಅಧಿಕಾರಿಗಳ ಕಾರ್ಯವೈಖರಿಗೆ ರೈತ ಮುಖಂಡರೆಲ್ಲಾ ಬಹಿರಂಗವಾಗಿ ಅಸಮಾಧಾನ ವ್ಯಕ್ತಪಡಿಸಿದರು.

ತಾಲೂಕಿನ ಬನ್ನೂರು ಟೌನ್ ಮತ್ತು ತಿ.ನರಸೀಪುರ ಪಟ್ಟಣದಲ್ಲಿ ಪುರಸಭೆಯವರು ಮಟನ್ ಮಾರ್ಕೆಟ್‌ಗಳ ಸಮೀಪ ಸ್ವಚ್ಛತೆ ಕಾಪಾಡದಿರುವುದರಿಂದ ಮಾರ್ಕೆಟ್ ಸುತ್ತಮುತ್ತಲಿನ ಪ್ರದೇಶ ಕೊಳೆತು ಗಬ್ಬೆದ್ದು ನಾರುತಿದೆ. ಸಾಂಕ್ರಾಮಿಕ ರೋಗಗಳು ಉಲ್ಬಣವಾದರೆ ಅದಕ್ಕೆ ಪುರಸಭೆ ಅಧಿಕಾರಿಗಳೇ ಹೊಣೆ ಮಾಡಬೇಕು ಎಂದು ರೈತ ಮುಖಂಡರು ತಾಲೂಕು ಆಡಳಿತವನ್ನು ಆಗ್ರಹಿಸಿದರು.

ನೀರಾವರಿ ಇಲಾಖೆಯವರು ನಾಲೆಗಳಿಗೆ ನೀರು ಬಿಡುವ ಮುಂಚೆ ಕಾಲುವೆಗಳ ಹೂಳೆತ್ತಿಸಿಲ್ಲ. ಕೆರೆ–ಕಟ್ಟೆಗಳ ಅಭಿವೃದ್ಧಿ ಮಾಡಿಲ್ಲ. ಕೆರೆಗಳ ಒತ್ತುವರಿಯನ್ನು ತೆರವು ಮಾಡದಿದ್ದರಿಂದ ಓಡಾಡುವ, ಅಡ್ಡಹಳ್ಳ ರಸ್ತೆಗಳಿಗೆ ನೀರು ನುಗ್ಗಿ ರೈತರ ಜಮೀನುಗಳಿಗೆ ಸಮರ್ಪಕವಾಗಿ ನೀರು ಅರಿಯದೆ ರೈತರುಗಳು ಸಂಕಷ್ಟ ಎದುರಿಸುವಂತಾಗಿದೆ ಎಂದು ರೈತರು ದೂರಿದರು.

ತಾಲೂಕಿನಲ್ಲಿ ಅಬಕಾರಿ ಇಲಾಖೆ ಸರಿಯಾದ ರೀತಿಯಲ್ಲಿ ಕರ್ತವ್ಯ ನಿರ್ವಹಿಸದೆ ಇರುವುದರಿಂದ ಪ್ರತಿ ಗ್ರಾಮದಲ್ಲೂ ಮದ್ಯ ಮುಕ್ತವಾಗಿ ಎಲ್ಲರಿಗೂ ಸಿಗುವಂತಾಗಿದೆ. ಸರ್ಕಾರವೇ ಮದ್ಯ ಮಾರಾಟಕ್ಕೂ ಟಾರ್ಗೆಟ್ ನೀಡುತ್ತದೆ. ಮತ್ತೊಂದೆಡೆ ಕುಡಿದವರನ್ನು ಹಿಡಿದು ದಂಡ ಕಟ್ಟಿಸುತ್ತಿದ್ದಾರೆ ಎಂದು ಆಡಳಿತ ನಡೆಸುವವರ ದ್ವಂದ್ವ ನಿಲುವಿನ ಬಗ್ಗೆ ರೈತ ನಾಯಕರು ಆಕ್ರೋಶ ವ್ಯಕ್ತಪಡಿಸಿದರು.



ತಿ.ನರಸೀಪುರ ತಾಲೂಕು ಪಂಚಾಯಿತಿ ಸಭಾಂಗಣದಲ್ಲಿ ನಡೆದ ರೈತರ ಕುಂದು ಕೊರತೆ ಸಭೆಯಲ್ಲಿ ತಹಶೀಲ್ದಾರ್ ಟಿ.ಜಿ.ಸುರೇಶ್ ಆಚಾರ್ ಮಾತನಾಡಿದರು.

ಮುಂಗಾರು ಹಂಗಾಮಿಗೆ ಕೃಷಿ ಇಲಾಖೆ ಅಧಿಕಾರಿಗಳು ರೈತರಿಗೆ ಉತ್ತಮವಾದ ಬಿತ್ತನೆ ಬೀಜ ನೀಡಬೇಕು. ಅಲ್ಲದೆ ರಸಗೊಬ್ಬರ ಮಾರಾಟ ಮಾಡುವ ಖಾಸಗಿ ಅಂಗಡಿಗಳಲ್ಲಿ ಧರ ನಿಗದಿ ಬಗ್ಗೆ ಬೋರ್ಡ್ ಹಾಕಬೇಕು. ಮುಖಂಡರುಗಳು ಹೋದರೆ ಐವತ್ತು ನೂರು ಕಡಿಮೆ ಕೊಡುವುದು. ಸಾಮಾನ್ಯ ರೈತ ಖರೀದಿಗೆ ಹೆಚ್ಚು ದರವನ್ನು ಪಡೆಯುವುದು ಮಾಮೂಲಿಯಾಗಿದ್ದು, ಇಂತಹ ತಾರತಮ್ಯ ನಿಲ್ಲುವಂತಾಗಲು ಅಧಿಕಾರಿಗಳು ಕ್ರಮವಹಿಸಬೇಕು. ಗ್ರಾಮೀಣ ಪ್ರದೇಶದಲ್ಲಿ ರೈತರಿಗೆ ಬೆಳೆಯ ಬಗ್ಗೆ ಅರಿವು ಮೂಡಿಸಬೇಕು ಎಂದು ಹಲವು ಆಗ್ರಹಿಸಿದರು.

ಸರ್ಕಾರದ ಜಮೀನಿನಲ್ಲಿ ರೈತರ ಓಡಾಟಕ್ಕೆ ಸರಿಯಾದ ದಾರಿ ಮಾಡಿಕೊಡದೆ ಸರ್ಕಾರಿ ಜಮೀನನ್ನು ಉಳಿಸಿಕೊಳ್ಳುವಲ್ಲಿ ಕಂದಾಯ ಮತ್ತು ನೀರಾವರಿ ನಿಗಮದ ಅಧಿಕಾರಿಗಳು ವಿಫಲರಾಗಿದ್ದಾರೆ. ಅಂತಹವರ ವಿರುದ್ಧ ತಾಲೂಕು ಆಡಳಿತವೂ ಕಠಿಣ ಕಾನೂನು ಕ್ರಮ ಕೈಗೊಳ್ಳುತ್ತಿಲ್ಲ. ಇಂಥವರ ವಿರುದ್ಧ ಪೊಲೀಸ ಇಲಾಖೆಯ ಎಫ್ಐಆರ್ ಹಾಕದೆ ಇರುವುದು ಬೇಸರ ಸಂಗತಿ ಎಂದು ರೈತ ಮುಖಂಡರು ಆರೋಪಿಸಿದರು.

ಸಭೆಯಲ್ಲಿ ರೈತ ಮುಖಂಡರಾದ ಅತ್ತಹಳ್ಳಿ ದೇವರಾಜ್, ನಾರಾಯಣ್, ಕರೋಹಟ್ಟಿ ಕುಮಾರಸ್ವಾಮಿ, ಆಲಗೂಡು ಮಹದೇವ್, ಕುರುಬೂರು ಸಿದ್ದೇಶ್, ಅತ್ತಹಳ್ಳಿ ಶಿವನಂಜು, ಬಿ.ಸೀಹಳ್ಳಿ ರಾಜೂಗೌಡ, ಎ.ಶಿವಕುಮಾರ್(ಬಡ್ಡು), ತಾ.ಪಂ ಕಾರ್ಯನಿರ್ವಾಹಕ ಅಧಿಕಾರಿ ಕೃಷ್ಣ ಸೇರಿದಂತೆ ತಾಲೂಕು ಮಟ್ಟದ ಅಧಿಕಾರಿಗಳು ಹಾಜರಿದ್ದರು.

ಲಲಿತಾ ಕಲಾ ಶ್ರೀಮಂತಿಕೆಯಲ್ಲಿ ಮೈಸೂರು-ಬೆಂಗಳೂರು ಎರಡು ಕಣ್ಣುಗಳಿದ್ದಂತೆ

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ.ಪುರುಷೋತ್ತಮ ಬಿಳಿಮಲೆ ಅಭಿಮತ

ಮೈಸೂರು, ಜು.24(ಎಸ್‌ಪಿಎನ್)– ಲಲಿತಾ ಕಲಾ ಶ್ರೀಮಂತಿಕೆಯಲ್ಲಿ ಮೈಸೂರು–ಬೆಂಗಳೂರು ಎರಡು ಕಣ್ಣುಗಳಿದ್ದಂತೆ ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ.ಪುರುಷೋತ್ತಮ್ ಬಿಳಿಮಲೆ ಅಭಿಪ್ರಾಯಪಟ್ಟರು.

ಮೈಸೂರು ಆದಿಚುಂಚನಗಿರಿ ರಸ್ತೆ ಗಾನಭಾರತಿ ವೀಣೆ ಶೇಷಣ್ಣ ಭವನದಲ್ಲಿ ಧ್ವನಿ ಫೌಂಡೇಷನ್ ಸಹಯೋಗದೊಂದಿಗೆ ನಡೆದ ಅಂತರರಾಷ್ಟ್ರೀಯ ಸರೋದ್ ವಾದಕ ಪಂ.ರಾಜೀವ್ ತಾರಾನಾಥ್ ಹಾಗೂ ಹಿರಿಯ ರಂಗಕರ್ಮಿ ಡಾ.ನ.ರತ್ನ ಅವರಿಗೆ ಗೌರವ ಸ್ಮರಣೆ ಸಲ್ಲಿಸುವ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಜಾನಪದ, ಸಾಹಿತ್ಯ, ನಾಟಕ, ಚಿತ್ರಕಲೆ, ಆಧುನಿಕ ರಂಗಭೂಮಿ, ಶಾಸ್ತ್ರೀಯ ಸಂಗೀತ, ನೃತ್ಯ, ಸಾಮಾಜಿಕ ಚರ್ಚೆ ಹಾಗೂ ಆಧ್ಯಾತ್ಮಕತೆ ಕುರಿತಾದ ಚಟುವಟಿಕೆಗಳು ಮೈಸೂರು ಭಾಗದಲ್ಲಿ ಹೆಚ್ಚಾಗಿ ನಡೆಯುತ್ತವೆ. ಹಾಗಾಗಿ ಮೈಸೂರು–ಬೆಂಗಳೂರಲ್ಲಿ ಕಲಾ ಚಟುವಟಿಕೆಗಳು ಹೆಚ್ಚಾಗಿವೆ. ಈ ಕೊಡುಗೆಯಲ್ಲಿ ಸರೋದ್ ವಾದಕ ಪಂ.ರಾಜೀವ್ ತಾರಾನಾಥ್, ಹಿರಿಯ ರಂಗಕರ್ಮಿ ಡಾ.ನ.ರತ್ನ ಪಾಲಿದೆ ಎಂದರಲ್ಲದೆ, ಬೌದ್ಧಿಕ ಪ್ರಪಂಚದಲ್ಲಿ ಇವರಿಬ್ಬರು ಪ್ರಖಾಂಡ ಪಂಡಿತರ ಸಾಲಿನಲ್ಲಿ ಎರಡು ಕಣ್ಣುಗಳಿದ್ದಂತೆ ಎಂದರು.

ಪ್ರಖರ ಬುದ್ಧಿಜೀವಿಗಳು: ಪಂ.ರಾಜೀವ್ ತಾರಾನಾಥ್ ಒಂದು ನಿಲುವಿಗೆ ನಿಂತವರಲ್ಲ. ಅಥವಾ ವೃತ್ತಿಗೆ ಅಂಟಿಕೊಂಡವರಲ್ಲ. ಅವರು ಸಮಾಜದಲ್ಲಿ ನಿತ್ಯ ಹೊಸತನದ ಹುಡುಕಾಟದಲ್ಲಿ ತೊಡಗಿದ್ದರು. ಆ ಕ್ಷಣಕ್ಕೆ ಯಾವುದು ಸತ್ಯವೂ ಅದರ ಪರ ನಿಲ್ಲುತ್ತಿದ್ದರು. ಇಂತಹ ವ್ಯಕ್ತಿತ್ವ ಎಲ್ಲರಲ್ಲೂ ನೋಡಲು ಸಾಧ್ಯವಿಲ್ಲ. ಹಾಗಾಗಿ ರಾಜೀವ್ ತಾರಾನಾಥ್ ತಮ್ಮ ಅನುಭವದಿಂದಾಚೆಗೆ ನಿಂತು ಸಾಮಾಜಿಕ ಸಮಸ್ಯೆಗಳ ಬಗ್ಗೆ ನಿಲುವು ಪ್ರಕಟಿಸುತ್ತಿದ್ದರು. ಅವರನ್ನು 20ನೇ ಶತಮಾನದ ಪ್ರಖರ ಬುದ್ಧಿಜೀವಿಗಳ ಸಾಲಿನಲ್ಲಿ ಮೊದಲಿಗರು ಎನ್ನುವುದಕ್ಕೆ ಸಂತೋಷವಾಗುತ್ತದೆ ಎಂದರು.

ಸಂಗೀತ ಸಂಯೋಜನೆಯಲ್ಲೂ ಛಾಪು: ಇವರಿಬ್ಬರ ಸಾಧನೆ ಬಗ್ಗೆ ಬೇರೆ ಬೇರೆ ರಾಜ್ಯಗಳ ವಿದ್ಯಾರ್ಥಿಗಳಿಗೆ ಪಾಠ ಮಾಡಿದ್ದೇನೆ. ಇವತ್ತು ಅವರಿಬ್ಬರ ಬಗ್ಗೆ ಭಾವನಾಲೋಕದಲ್ಲಿ ಭಾವನಾತ್ಮಕವಾಗಿ ಮಾತನಾಡಿ, ಸ್ಮರಿಸುತ್ತಿದ್ದೇನೆ. ಅಲ್ಲದೆ, ಸಂಸ್ಕಾರ ಚಿತ್ರಕ್ಕೆ ರಾಜೀವ್ ತಾರಾನಾಥ್ ಅವರೇ ಸಂಗೀತ ಸಂಯೋಜನೆ ಮಾಡಿದ್ದಾರೆ. ಅಲ್ಲದೆ, ಪಲ್ಲವಿ, ಖಂಡವಿದುಕೋ ಮಾಂಸವಿದುಕೋ ಸೇರಿದಂತೆ ಇತರೆ ಭಾಷಾ ಸಿನಿಮಾಗಳಿಗೂ ಸಂಗೀತ ಸಂಯೋಜನೆ ಮಾಡಿ, ಗಮನ ಸೆಳೆದಿದ್ದಾರೆ ಎಂದರು.

ಗುರು–ಶಿಷ್ಯ ಪರಂಪರೆಗೆ ಮಾದರಿ: ರಾಜೀವ್ ತಾರಾನಾಥ್ ಅವರು, ಭಾರತೀಯ ಸಂಗೀತ ಪರಂಪರೆಯಲ್ಲಿ ಗುರು–ಶಿಷ್ಯ ಪರಂಪರೆಗೆ ಮಾದರಿಯಾಗಿದ್ದರು ಎನ್ನುವುದಕ್ಕೆ ಸಂತೋಷವಾಗುತ್ತದೆ. ಅವರು ಕಲಿತ ಸಂಗೀತ ವಿದ್ಯೆಯನ್ನು ಬೇರೆಯವರೆಗೆ ಉಚಿತವಾಗಿ ಕಲಿಸುತ್ತಿದ್ದರು. ಕಲಿಕೆಗೆ ಹೆಚ್ಚಿನ ಪ್ರಾಧಾನ್ಯತೆ ನೀಡುತ್ತಿದ್ದರು. ಇಂತಹ ಪ್ರಬುದ್ಧರ ಸಾಧನೆಯನ್ನು ಅಕ್ಷರ ರೂಪದಲ್ಲಿ ತರುವುದು ಒಳ್ಳೆಯದು ಎಂದು ಸಲಹೆ ನೀಡಿದರು. ಈ ವೇಳೆ ಕಾಂಗ್ರೆಸ್ ಮುಖಂಡ ಹಾಗೂ ಮುಡಾ ಮಾಜಿ ಅಧ್ಯಕ್ಷ ಎಚ್.ವಿ.ರಾಜೀವ್, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಬಿಜೆಪಿ ಮುಖಂಡ ಯಶಸ್ವಿ ಸೋಮಶೇಖರ್, ಸಚಿನ್ ಹಂಪಿ ಉಪಸ್ಥಿತರಿದ್ದರು.



ಖ್ಯಾತ ಸರೋದ್ ವಾದಕ ಪಂ.ರಾಜೀವ್ ತಾರಾನಾಥ್ ಹಾಗೂ ಹಿರಿಯ ರಂಗಕರ್ಮಿ ಡಾ.ನ.ರತ್ನ ಅವರ ಭಾವಚಿತ್ರಕ್ಕೆ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ.ಪುರುಷೋತ್ತಮ್ ಬಿಳಿಮಲೆ, ಸುಗಮ ಸಂಗೀತ ಹಿರಿಯ ಕಲಾವಿದೆ ಹೆಚ್.ಆರ್.ಲೀಲಾವತಿ ಹಾಗೂ ಇತರರು ಪುಷ್ಪ ನಮನ ಸಲ್ಲಿಸಿದರು.

“ರಾಜೀವ್ ತಾರಾನಾಥ್ 20 ವರ್ಷದ ಯುವಕನಿದ್ದಾಗ ನಮ್ಮ ಮನೆಗೆ ಬರುತ್ತಿದ್ದರು. ಆ ವೇಳೆಗೆ ಉತ್ತಮ ಗಾಯಕರಾಗಿ ಗುರುತಿಸಿಕೊಂಡಿದ್ದರು. ಸದಾ ಸಂಗೀತದಲ್ಲಿ ಹೊಸತನವನ್ನು ಹುಡುಕುತ್ತಿದ್ದರು. ಅವರಿಗೆ ಆ ಸಂಗೀತದ ಶೈಲಿ ಇಷ್ಟವಾದರೆ, ಕಲಿಯಲು ಮುಂದಾಗುತ್ತಿದ್ದು. ಅವು ಪ್ರತಿಹುತದಲ್ಲೂ ನಾನೊಬ್ಬ ಫ್ರೆಶ್ ವಿದ್ಯಾರ್ಥಿ ಎಂದೇ ಪರಿಭಾವಿಸುತ್ತಿದ್ದರು. ಅಲ್ಲದೆ, ಮಹಾರಾಜ ಪದವಿ ಕಾಲೇಜಿನಲ್ಲಿ ವಿದ್ಯಾರ್ಥಿ ದಿಸೆಯಲ್ಲಿ ನಾನು ಮತ್ತು ನ.ರತ್ನ ಬಿ.ಎ.ಆನರ್ಸ್ ತೆಗೆದುಕೊಂಡಿದ್ದೆವು. ಆ ಸಂದರ್ಭದಲ್ಲಿ ಹೆಣ್ಣು ಮಕ್ಕಳು ಯುವಕರೊಂದಿಗೆ ಹೆಚ್ಚು ಮಾತನಾಡುವಂತಿರಲಿಲ್ಲ. ನಗು ಅಷ್ಟೆ ನಮ್ಮ– ಅವರ ನಡುವೆ ನಡೆಯುತ್ತಿದ್ದ ಸಂಭಾಷಣೆ. ನಾಟಕದಲ್ಲಿ ನಟಿಸಲು ನನಗೂ ಅವರಂತೆ ಆಸಕ್ತಿ ಇತ್ತು.

– ಹೆಚ್.ಆರ್.ಲೀಲಾವತಿ, ಸುಗಮ ಸಂಗೀತ ಹಿರಿಯ ಕಲಾವಿದೆ

“ಪಂ.ರಾಜೀವ್ ತಾರಾನಾಥ್ ಅವರ ಜೊತೆ 13 ವರ್ಷಗಳ ಒಡನಾಟವಿತ್ತು ಅವರಲ್ಲಿ ಸಂಗೀತ, ಸಾಹಿತ್ಯದ ಮುನ್ನೋಟ ಅವರ ಮನಸ್ಸಿನಲ್ಲಿ ಸದಾ ತುಡಿಯುತ್ತಿತ್ತು. ರಾಗ ಸಂಯೋಜನೆಯಲ್ಲಿ ಸ್ವಲ್ಪ ತಪ್ಪಿದ್ದರೂ ಸರಿಪಡಿಸುತ್ತಿದ್ದರು. ಅವರಿಗೆ ಬದುಕಿನ ಸೂಕ್ಷ್ಮತೆ, ಸಮಾಜದ ನಿರೀಕ್ಷೆಗಳು ಕುರಿತು ಸದಾ ಚರ್ಚಿಸುತ್ತಿದ್ದರು.

–ಲೇಖಕಿ ಶೈಲಜಾ ವೇಣುಗೋಪಾಲ್

ಪ್ರಸಕ್ತ ಕೇಂದ್ರ ಬಜೆಟ್‌ನಲ್ಲಿ ಕರ್ನಾಟಕ ರೈಲ್ವೆಗೆ 7,559 ಕೋಟಿ ಅನುದಾನ

- ಯುಪಿಎ ಸರ್ಕಾರ ನೀಡಿದ್ದಕ್ಕಿಂತ 9 ಪಟ್ಟು ಹೆಚ್ಚು
- ರೈಲ್ವೆ ವಿಭಾಗಗಳ ಅಧಿಕಾರಿಗಳೊಂದಿಗೆ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ವಿಡಿಯೋ ಕಾನ್ಫರೆನ್ಸ್

ಮೈಸೂರು, ಜು.24(ಎಂಕೆ)– 2024–25ನೇ ಸಾಲಿನ ಕೇಂದ್ರ ಬಜೆಟ್‌ನಲ್ಲಿ ಕರ್ನಾಟಕ ರೈಲ್ವೆಗೆ 7,559 ಕೋಟಿ ರೂ. ಅನುದಾನ ನೀಡಿದ್ದು, ಯುಪಿಎ ಅವಧಿಯಲ್ಲಿ ನೀಡಿದ್ದ ಅನುದಾನಕ್ಕಿಂತ 9 ಪಟ್ಟು ಹೆಚ್ಚಾಗಿದೆ ಎಂದು ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ತಿಳಿಸಿದರು.



ನೈರುತ್ಯ ರೈಲ್ವೆ ಮೈಸೂರು ವಿಭಾಗ ಸೇರಿದಂತೆ ದೇಶದ ವಿವಿಧ ರೈಲ್ವೆ ವಿಭಾಗಗಳ ಅಧಿಕಾರಿಗಳೊಂದಿಗೆ ಬುಧವಾರ ವಿಡಿಯೋ ಕಾನ್ಫರೆನ್ಸ್ ನಡೆಸಿದ ಅವರು, ಬಜೆಟ್‌ನ ಗಮನಾರ್ಹ ಭಾಗವನ್ನು ಭಾರತೀಯ ರೈಲ್ವೆಯನ್ನು ಮೇಲ್ದರ್ಜೆಗೇರಿಸಲು ಮೀಸಲಿಡಲಾಗಿದೆ. ಇದು ಸರ್ಕಾರದ ಕೇಂದ್ರಬಿಂದುವಾಗಿದೆ ಎಂದ ಅವರು, ಕರ್ನಾಟಕ ರಾಜ್ಯಕ್ಕೆ ಪ್ರಸಕ್ತ ಸಾಲಿನ ಬಜೆಟ್‌ನಲ್ಲಿ 7559 ಕೋಟಿ ರೂ. ಅನುದಾನ ನೀಡಿದ್ದು, 2014ರಲ್ಲಿ ಯುಪಿಎ ಸರ್ಕಾರದ ಅವಧಿಯಲ್ಲಿ 835 ಕೋಟಿ ರೂ. ನೀಡಲಾಗಿತ್ತು. ಅದರ 9 ಪಟ್ಟು ಹೆಚ್ಚು ಅನುದಾನವನ್ನು ನೀಡಲಾಗಿದೆ ಎಂದರು.

ರಾಜ್ಯದಲ್ಲಿ 47 ಸಾವಿರ ಕೋಟಿ ರೂ. ವೆಚ್ಚದ 31 ಯೋಜನೆಗಳು ಚಾಲ್ತಿಯಲ್ಲಿದ್ದು, ಅದರಲ್ಲಿ ಅಮೃತ್ ಭಾರತ್ ಯೋಜನೆಯಡಿ 59 ರೈಲ್ವೆ ನಿಲ್ದಾಣಗಳನ್ನು ಮೇಲ್ದರ್ಜೆಗೇರಿಸಲಾಗುತ್ತಿದೆ. ಕಳೆದ 10 ವರ್ಷದಲ್ಲಿ 638 ಮೇಲ್ಸೇತುವೆ ಮತ್ತು ಕೆಳಸೇತುವೆ ನಿರ್ಮಾಣ ಮಾಡಲಾಗಿದೆ. ರಾಜ್ಯ ಸರ್ಕಾರ ಭೂ ಸ್ವಾಧೀನ ಮಾಡಿಕೊಟ್ಟಂತೆ ಬಾಕಿ ಯೋಜನೆಗಳನ್ನು ತ್ವರಿತವಾಗಿ ಪೂರ್ಣಗೊಳಿಸಲಾಗುವುದು. ಹಾಗೆಯೇ ಸಾಮಾನ್ಯ ಬೋಗಿಗಳನ್ನು ಹೆಚ್ಚಿಸಲು ಆದ್ಯತೆ ನೀಡಿದ್ದು, 2500 ಬೋಗಿಗಳನ್ನು ಜೋಡಿಸಲಾಗುವುದು. ಇನ್ನೂ 10 ಸಾವಿರ ಬೋಗಿಗಳ ತಯಾರಿ ನಡೆಯುತ್ತಿದೆ ಎಂದು ಮಾಹಿತಿ ನೀಡಿದರು.

ಕವಚ್‌ಗೆ 1,112 ಕೋಟಿ ಮೀಸಲು: ರೈಲು ಅಪಘಾತಗಳ ತಡೆಗೆ ಸ್ವಯಂಚಾಲಿತ ರೈಲು ಭದ್ರತೆ(ಎಟಿಪಿ) ವ್ಯವಸ್ಥೆ 'ಕವಚ್' ಅಳವಡಿಕೆಗೆ ಪ್ರಸಕ್ತ ಹಣಕಾಸು ವರ್ಷದಲ್ಲಿ 1,112 ಕೋಟಿಯನ್ನು ರೈಲ್ವೆ ಸಚಿವಾಲಯ ವಿನಿಯೋಗಿಸುತ್ತಿದೆ. ಈವರೆಗೆ 'ಕವಚ್' ವ್ಯವಸ್ಥೆಗೆ 1,216.77 ಕೋಟಿ ವಿನಿಯೋಗಿಸಲಾಗಿದ್ದು, 2024–25ರ ಹಣಕಾಸು ವರ್ಷದಲ್ಲಿ 1,112.57 ಕೋಟಿ ರೂ.ನಿಗದಿಪಡಿಸಲಾಗಿದೆ ಎಂದು ತಿಳಿಸಿದರು.

ಸ್ವದೇಶಿ ನಿರ್ಮಿತ 'ಕವಚ್' ಎಂದರೆ ಸ್ವಯಂಚಾಲಿತ ರೈಲು ಭದ್ರತೆ(ಎಟಿಪಿ) ವ್ಯವಸ್ಥೆಯಾಗಿದ್ದು, ಅತ್ಯಾಧುನಿಕ ತಂತ್ರಜ್ಞಾನವನ್ನು ಒಳಗೊಂಡಿದೆ. ಲೋಕೊ ಪೈಲಟ್ ರೈಲನ್ನು ನಿಯಂತ್ರಿಸುವಲ್ಲಿ ವಿಫಲವಾದರೆ 'ಕವಚ್' ಸ್ವಯಂಚಾಲಿತ ವ್ಯವಸ್ಥೆ ಮೂಲಕ ಬ್ರೇಕ್ ಹಾಕಿ ರೈಲಿನ ವೇಗವನ್ನು ನಿಯಂತ್ರಿಸುತ್ತದೆ. ಪ್ರತಿಕೂಲ ಹವಾಮಾನದ ಸಂದರ್ಭ ರೈಲು ಸುರಕ್ಷಿತವಾಗಿ ಚಲಿಸಲು ನೆರವಾಗುತ್ತದೆ ಎಂದು ಹೇಳಿದರು.

'ಕವಚ್' ಸ್ಥಾಪನಾ ಕೆಲಸವು ಹಲವು ಹಂತದ ಪ್ರಕ್ರಿಯೆ ಹೊಂದಿದೆ. ಮೊದಲಿಗೆ ಪ್ರತಿಯೊಂದು ರೈಲು ನಿಲ್ದಾಣದಲ್ಲಿ 'ಸ್ಟೇಷನ್ ಕವಚ್' ಸ್ಥಾಪಿಸಬೇಕು. ಹಳಿಯುದ್ದಕ್ಕೂ ಆರ್‌ಎಫ್‌ಐಡಿ ಟ್ಯಾಗ್ ಅಳವಡಿಸಬೇಕು. ಎಲ್ಲ ವಿಭಾಗಗಳಲ್ಲಿ ಟೆಲಿಕಾಂ ಟವರ್ ಅಳವಡಿಸಬೇಕು ಮತ್ತು ಹಳಿಗಳ ಪಕ್ಕದಲ್ಲಿ ಆಪ್ಟಿಕಲ್ ಫೈಬರ್ ಕೇಬಲ್ ಹಾಕಬೇಕು. ಈವರೆಗೆ ದೇಶದ 1,465 ಕಿ.ಮೀ ರೈಲು ಮಾರ್ಗದಲ್ಲಿ 'ಕವಚ್' ವ್ಯವಸ್ಥೆ ಕಲ್ಪಿಸಲಾಗಿದೆ. ಇತ್ತೀಚೆಗೆ, ಒಡಿಶಾದ ಬಾಲೇಶ್ವರದಲ್ಲಿ ಸಂಭವಿಸಿದ ರೈಲು ಅಪಘಾತದ ಬಳಿಕ ಕವಚ್ ವ್ಯವಸ್ಥೆ ಕುರಿತಂತೆ ಭಾರಿ ಚರ್ಚೆ ನಡೆಯುತ್ತಿದೆ ಎಂದು ಸಚಿವರು ತಿಳಿಸಿದರು. ವಿಡಿಯೋ ಕಾನ್ಫರೆನ್ಸ್‌ನಲ್ಲಿ ನೈರುತ್ಯ ರೈಲ್ವೆ ಮೈಸೂರು ವಿಭಾಗದ ಡಿಆರ್‌ಎಂ ಶಿಲ್ಪಿ ಅಗರ್‌ವಾಲ್ ಸೇರಿದಂತೆ ಇನ್ನಿತರೆ ಅಧಿಕಾರಿಗಳು ಉಪಸ್ಥಿತರಿದ್ದರು.


ಸೆಪ್ಟೆಂಬರ್‌ಗೆ ಅರಸು ಭವನ ಕಾಮಗಾರಿ ಪೂರ್ಣ

ವಿಧಾನಸಭೆಯಲ್ಲಿ ಜಿ.ಡಿ.ಹರೀಶ್‌ಗೌಡರ ಪ್ರಶ್ನೆಗೆ ಸಚಿವ ಶಿವರಾಜ್ ತಂಗಡಗಿ ಭರವಸೆ

ಬೆಂಗಳೂರು, ಜು.24(ಕೆಎಂಶಿ)– ದೇವರಾಜ್ ಅರಸು ಜನ್ಮದಿನೋತ್ಸವ ಅಂಗವಾಗಿ ಹುಣಸೂರಿನಲ್ಲಿ ನಡೆಯುತ್ತಿರುವ ಅರಸು ಭವನ ನಿರ್ಮಾಣ ಕಾಮಗಾರಿ ಬರುವ ಸೆಪ್ಟೆಂಬರ್‌ಗೆ ಪೂರ್ಣಗೊಳ್ಳಲಿದೆ ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ ಶಿವರಾಜ್ ತಂಗಡಗಿ ತಿಳಿಸಿದ್ದಾರೆ.



ಶಿವರಾಜ್ ತಂಗಡಗಿ



ಹರೀಶ್‌ಗೌಡ

ಜಿ.ಡಿ.ಹರೀಶ್‌ಗೌಡರ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ದೇವರಾಜ ಅರಸು ಜನ್ಮದಿನೋತ್ಸವ ಅಂಗವಾಗಿ ಮೈಸೂರು ಜಿಲ್ಲೆ ಹುಣಸೂರು ಪಟ್ಟಣದಲ್ಲಿ 7.90 ಕೋಟಿ ರೂ. ವೆಚ್ಚದಲ್ಲಿ ಅರಸು ಭವನ ನಿರ್ಮಾಣ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ, ನಿರ್ಮಾಣ ಪೂರ್ಣಗೊಂಡಿದೆ, ಒಳಾಂಗಣ ವಿನ್ಯಾಸ ಹಾಗೂ ಹೊರಾಂಗಣ ಗೋಡೆ ನಿರ್ಮಾಣ ಬಾಕಿ ಇದೆ, ಇದಕ್ಕಾಗಿ 1.90 ಕೋಟಿ ರೂ. ಅಗತ್ಯವಿದೆ. ರಾಜ್ಯ ಸರ್ಕಾರ ಈಗಾಗಲೇ ಹಣ ಬಿಡುಗಡೆ ಮಾಡಿದ್ದು, ಜಿಲ್ಲಾಧಿಕಾರಿಗಳ ಪಿಡಿ ಖಾತೆಯಲ್ಲಿ ಹಣ ಇದೆ. ಬಹುತೇಕ ಸೆಪ್ಟೆಂಬರ್ ವೇಳೆಗೆ ಕಾಮಗಾರಿ ಪೂರ್ಣಗೊಳ್ಳಲಿದೆ ಎಂದರು.

ಇದಕ್ಕೂ ಮೊದಲು ಮಾತನಾಡಿದ ಹರೀಶ್‌ಗೌಡರು, ದೇವರಾಜ ಅರಸು ಭವನ ಕಾಮಗಾರಿ ಪೂರ್ಣಗೊಳಿಸಬೇಕು, ಅರಸು ಹೆಸರಿನಲ್ಲಿ ನಿರ್ಮಿಸುತ್ತಿರುವ ಆಸ್ಪತ್ರೆ ಕೆಲಸ ಬಾಕಿ ಉಳಿದಿದ್ದು, ಆದ್ಯತೆ ಮೇರೆಗೆ ಕೈಗೆತ್ತಿಕೊಳ್ಳಬೇಕು, ಅರಸು ಹುಟ್ಟೂರು ಕಲ್ಲಳ್ಳಿಯ ಸಮಗ್ರ ಅಭಿವೃದ್ಧಿಗೆ ಯೋಜನೆ ರೂಪಿಸಬೇಕು ಎಂದರು.

ನೂತನ ಪದಾಧಿಕಾರಿಗಳಿಗೆ ಸುತ್ತೂರು ಶ್ರೀಗಳ ಆಶೀರ್ವಾದ



ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಮೈಸೂರು ಜಿಲ್ಲಾ ಘಟಕಕ್ಕೆ ಅಧ್ಯಕ್ಷರು ಹಾಗೂ ನಿರ್ದೇಶಕರುಗಳಾಗಿ ಆಯ್ಕೆಯಾದವರನ್ನು ಸುತ್ತೂರು ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮೀಜಿಗಳು ಸುತ್ತೂರು ಮಠದಲ್ಲಿ ಸನ್ಮಾನಿಸಿ ಆಶೀರ್ವದಿಸಿದರು. ನೂತನ ಅಧ್ಯಕ್ಷ ಹಿನಕಲ್ ಹೆಚ್.ವಿ.ಬಸವರಾಜು, ನಿರ್ದೇಶಕರಾದ ವಕೀಲ ಮೂಡಳ್ಳಿ ಪಿ.ಶೇಖರ್, ಎಲ್.ಪಿ.ಧರ್ಮಮಂಜುನಾಥ್, ಬಿ.ಎಂ.ಪರಮೇಶ್, ಎನ್.ಜಿ.ಗಿರೀಶ್, ನಟರಾಜು ಕಲ್ಮಳ್ಳಿ, ಎಂ.ಚಂದ್ರಶೇಖರ್, ಎ.ವಿ.ವಿರೂಪಾಕ್ಷ, ಎಂ.ಎಸ್.ರೇಚಣ್ಣ, ಗೆಜ್ಜಗಳ್ಳಿ ಜಿ.ಎಂ.ಮಹೇಶ್, ಎಂ.ಷಡಕ್ಷರಿ, ಎಂ.ಬಸವರಾಜು, ಬಿ.ವಿ.ಬಸವರಾಜು, ಕೆ.ಶಿವಕುಮಾರ್, ಕೆ.ಗಿರಿಕುಮಾರ್, ಸಿ.ಆರ್.ನಟರಾಜು, ದಕ್ಷಿಣಾಮೂರ್ತಿ, ಕೆ.ನಾಗರಾಜು, ಕೆ.ಎಂ.ಮಾದಪ್ಪ, ಡಾ. ಎಂ.ಎಂ.ಮಹದೇವಪ್ಪ ಮಾದಹಳ್ಳಿ, ಬೀರಿಹುಂಡಿ ಎಸ್.ಗಿರೀಶ್, ಅನಸೂಯ ಗಣೇಶ್, ರೂಪ ಸತೀಶ್, ದಾಕ್ಷಾಯಿಣಿ ಲಿಂಗರಾಜು, ಎಂ.ದಾಕ್ಷಾಯಿಣಿ, ಹೆಚ್.ಎನ್.ಸರ್ವಮಂಗಳ, ರಾಜೇಶ್ವರಿ ಮಹೇಶ್, ಸೌಭಾಗ್ಯ, ಭಾಗ್ಯ ಎನ್.ಬಿ.ಸುರೇಶ್, ಶೈಲಾ ನಾಗರಾಜ್ ಅವರು ಶ್ರೀಗಳಿಂದ ಆಶೀರ್ವಾದ ಪಡೆದರು. ಈ ವೇಳೆ ಟಿ.ಎಸ್.ಲೋಕೇಶ್, ಟಿ.ಲಿಂಗರಾಜು, ಈರಪ್ಪನ ಎಲ್.ಎಸ್.ಕೊಪ್ಪಲು ಕಾವಿಬಸಪ್ಪ, ಮಹದೇವಸ್ವಾಮಿ, ದೂರ ಡಿ.ಎ.ಮಹದೇವಸ್ವಾಮಿ, ಗೆಜ್ಜಗಳ್ಳಿ ಶಂಕರ್, ಇಮ್ಮಾವು ದಕ್ಷಿಣಾಮೂರ್ತಿ, ನಾಗೇಶ್, ಚಿಕ್ಕಹಳ್ಳಿ ಕುಮಾರ್, ಶಿವಸ್ವಾಮಿ, ಬ್ಯಾತಹಳ್ಳಿ ಶಿವಣ್ಣ, ಮಹೇಂದ್ರ ಶೈವ, ದಾರಿಪುರ ಡಿ.ಚಂದ್ರಶೇಖರ್ ಉಪಸ್ಥಿತರಿದ್ದರು.

ಸಂತ್ರಸ್ತೆಗೆ ಅರ್ಧ ಎಕರೆ ಜಮೀನು; ಪುತ್ರನಿಗೆ 6.5 ಲಕ್ಷ ರೂ. ಪರಿಹಾರ; ಅತ್ಯಾಚಾರಿಗೆ ಶಿಕ್ಷೆ ಕಡಿತ: ಹೈಕೋರ್ಟ್ ಮಹತ್ವದ ತೀರ್ಪು

ಬೆಂಗಳೂರು, ಜು.24– ಮದುವೆಯಾಗುವುದಾಗಿ ನಂಬಿಸಿ ಗರ್ಭಿಣಿಯನ್ನಾಗಿಸಿ ನಂತರ ವಂಚಿಸಿದ ಪ್ರಕರಣದಲ್ಲಿ ಯುವತಿ ಹಾಗೂ ಆಕೆಯ ಪುತ್ರನಿಗೆ ಆರೂವರೆ ಲಕ್ಷ ರೂ. ಪರಿಹಾರ ಮತ್ತು ಅರ್ಧ ಎಕರೆ ಜಮೀನು ಪರಿಹಾರವಾಗಿ ನೀಡಿದ್ದನ್ನು ಪರಿಗಣಿಸಿದ ಹೈಕೋರ್ಟ್, ಅಪರಾಧಿಗೆ ವಿಚಾರಣಾ ನ್ಯಾಯಾಲಯ ವಿಧಿಸಿದ್ದ ಗರಿಷ್ಠ ಐದು ವರ್ಷ ಕಠಿಣ ಕಾರಾಗೃಹ ಶಿಕ್ಷೆಯನ್ನು ನಾಲ್ಕೂವರೆ ತಿಂಗಳಿಗೆ ಕಡಿತಗೊಳಿಸಿ, ಆದೇಶಿಸಿದೆ.

ವಿವರ: ಮೈಸೂರು ಜಿಲ್ಲೆಯ ಎಚ್.ಡಿ.ಕೋಟೆ ತಾಲೂಕು ನಿವಾಸಿ ಸಣ್ಣೇಗೌಡ (40) ಅವರನ್ನು ದೋಷಿಯಾಗಿ ತೀರ್ಮಾನಿಸಿದ್ದ ವಿಚಾರಣಾ ನ್ಯಾಯಾಲಯ, ಅತ್ಯಾಚಾರ ಅಪರಾಧಕ್ಕೆ ಐದು ವರ್ಷ, ವಂಚನೆಗೆ ಒಂದು ವರ್ಷ ಮತ್ತು ಜೀವ ಬೆದರಿಕೆಗೆ ಎರಡು ವರ್ಷ ಕಠಿಣ ಕಾರಾಗೃಹ ಶಿಕ್ಷೆ ವಿಧಿಸಿತ್ತು. ಅಲ್ಲದೆ, ಮೂರು ಅಪರಾಧಗಳಿಗೆ ತಲಾ ಐದು ಸಾವಿರದಂತೆ ಒಟ್ಟು 15 ಸಾವಿರ ರು. ದಂಡ ವಿಧಿಸಿ 2011ರ ಅ.31ರಂದು ಆದೇಶಿಸಿತ್ತು.

ಈ ಆದೇಶ ಪ್ರಶ್ನಿಸಿ ಹೈಕೋರ್ಟ್ ಮೆಟ್ಟಿಲೇರಿದ್ದ ಸಣ್ಣೇಗೌಡ, ಸಂತ್ರಸ್ತೆಯೊಂದಿಗೆ ಒಪ್ಪಂದ ಮಾಡಿಕೊಂಡು ಆಕೆಗೆ 4 ಲಕ್ಷ ರೂ. ಪರಿಹಾರ, ಆಕೆಯ ಪುತ್ರನ ಜೀವನಾಂಶಕ್ಕೆ ಬ್ಯಾಂಕಿನಲ್ಲಿ 2,47,500 ರೂ. ಠೇವಣಿ ಇಡಲಾಗಿದೆ. ತನ್ನ ಪಾಲಿನ ಅರ್ಧ ಎಕರೆ ಭೂಮಿ ನೀಡಿದ್ದೇನೆ. ಅದನ್ನು ಪರಿಗಣಿಸಿ ವಿಚಾರಣಾ ನ್ಯಾಯಾಲಯದ ಆದೇಶದ ನಂತರ ಜೈಲುವಾಸ ಅನುಭವಿಸಿದ ನಾಲ್ಕೂವರೆ ತಿಂಗಳಿಗೆ ಶಿಕ್ಷಾವಧಿಯನ್ನು ಕಡಿತಗೊಳಿಸಬೇಕು ಎಂದು ಮನವಿ ಮಾಡಿದ್ದ.



ಕ್ರಿಮಿನಲ್ ಮೇಲ್ಮನವಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಶಿವಶಂಕರ ಅಮರಣ್ಣನವರ್ ಅವರ ಪೀಠ, ಪ್ರಕರಣದಲ್ಲಿ ಸಂತ್ರಸ್ತೆಯ ಸಾಕ್ಷ್ಯ, ಆಕೆ 2009ರ ನ.11 ರಂದು ಗಂಡು ಮಗುವಿಗೆ ಜನ್ಮ ನೀಡಿರುವುದು ಹಾಗೂ ಆಕೆಗೆ ಚಿಕಿತ್ಸೆ ನೀಡಿದ್ದ ವೈದ್ಯರ ಸಾಕ್ಷ್ಯ ಪರಿಗಣಿಸಿ ಸಣ್ಣೇಗೌಡನನ್ನು ದೋಷಿಯಾಗಿ ತೀರ್ಮಾನಿಸಿದ ವಿಚಾರಣಾ ನ್ಯಾಯಾಲಯದ ಆದೇಶವನ್ನು ಎತ್ತಿ ಹಿಡಿಯಿತು. ವಿಚಾರಣಾ ನ್ಯಾಯಾಲಯವು 2011ರ ಅ.31ರಂದು ಅಪರಾಧಿಗೆ ಶಿಕ್ಷೆ ವಿಧಿಸಿತ್ತು. ಈ ಆದೇಶವನ್ನು 2012ರ ಮಾ.14 ರಂದು ಅಮಾನತ್ತಿನಲ್ಲಿರಿಸಿದ್ದ ಹೈಕೋರ್ಟ್ ಸಣ್ಣೇಗೌಡನನ್ನು ಜಾಮೀನು ಮೇಲೆ ಬಿಡುಗಡೆಗೊಳಿಸಲು ಆದೇಶಿಸಿತ್ತು. ವಿಚಾರಣಾ ನ್ಯಾಯಾಲಯದ ಆದೇಶದ ಬಳಿಕ ನಾಲ್ಕೂವರೆ ತಿಂಗಳು ಸಣ್ಣೇಗೌಡ ಜೈಲು ಶಿಕ್ಷೆ ಅನುಭವಿಸಿದ್ದಾನೆ. ನಂತರ ಸಂತ್ರಸ್ತೆ ಮತ್ತು ಅಪರಾಧಿ ನಡುವೆ ಒಪ್ಪಂದವಾಗಿ ಯುವತಿಗೆ ನಗದು ಪರಿಹಾರ ಹಾಗೂ ಆಕೆಯ ಪುತ್ರನಿಗೆ ಜಮೀನು, ಜೀವನಾಂಶ ಠೇವಣಿ ಇರಿಸಿರುವುದನ್ನು ಪರಿಗಣಿಸಿದರೆ ಶಿಕ್ಷಾವಧಿಯನ್ನು ನಾಲ್ಕೂವರೆ ತಿಂಗಳಿಗೆ ಕಡಿತಗೊಳಿಸುವುದು ಸೂಕ್ತ ಎಂದು ನ್ಯಾಯಪೀಠ ತೀರ್ಮಾನಿಸಿತು.

ಅಪರಾಧಿಗೆ ವಿಧಿಸಿರುವ 15 ಸಾವಿರ ರೂ. ದಂಡದಲ್ಲಿ 10 ಸಾವಿರ ರೂಗಳನ್ನು ಆಕೆಯನ್ನು ಕರೆಸಿಕೊಂಡು ಪರಿಹಾರ ಮೊತ್ತ ವಿತರಿಸಬೇಕು ಎಂದು ವಿಚಾರಣಾ ನ್ಯಾಯಾಲಯಕ್ಕೆ ಹೈಕೋರ್ಟ್ ನಿರ್ದೇಶಿಸಿದೆ.

ಕೂಲಿಗೆ ಬಂದಾಗ ಮದುವೆ ಆಮಿಷ: 2009ರಲ್ಲಿ ತಮ್ಮ ಜಮೀನಿನಲ್ಲಿ ಕೂಲಿ ಕೆಲಸಕ್ಕೆ ಬಂದ 19 ವರ್ಷದ ಸಂತ್ರಸ್ತೆಯನ್ನು ಪರಿಚಯ ಮಾಡಿಕೊಂಡಿದ್ದ ಸಣ್ಣೇಗೌಡ ಮದುವೆಯಾಗುವುದಾಗಿ ನಂಬಿಸಿ ಲೈಂಗಿಕ ಸಂಪರ್ಕ ಬೆಳೆಸಿದ್ದ. ಈ ಘಟನೆ ಬಳಿಕ ಕೆಲ ಸಮಯ ಸಂತ್ರಸ್ತೆ ಕಣ್ಮರೆಯಾಗಿದ್ದರು. 2009ರ ಮಾ.6ರಂದು ಮತ್ತೆ ಕೂಲಿ ಕೆಲಸಕ್ಕೆ ಬಂದಾಗಲೂ ಸಣ್ಣೇಗೌಡ ಮದುವೆಯಾಗುವುದಾಗಿ ದೇವರ ಮೇಲೆ ಆಣೆ ಮಾಡಿ ಸಂತ್ರಸ್ತೆಯ ಇಚ್ಛೆಗೆ ವಿರುದ್ಧ ಬಲವಂತವಾಗಿ ಸಂಭೋಗ ನಡೆಸಿದ್ದ. ಇದರಿಂದ ಸಂತ್ರಸ್ತೆ ಗರ್ಭಿಣಿಯಾಗಿದ್ದರು. ಈ ವಿಷಯ ತಿಳಿಸಿದಾಗ ತನಗೂ ಗರ್ಭಕ್ಕೂ ಸಂಬಂಧವಿಲ್ಲ ಎಂದಿದ್ದ ಸಣ್ಣೇಗೌಡ ಸಂತ್ರಸ್ತೆಯನ್ನು ಮದುವೆಯಾಗುವುದಿಲ್ಲ ಎಂದು ನಿರಾಕರಿಸಿದ್ದ.

ಗ್ರಾಮದ ಹಿರಿಯರು ನಡೆಸಿದ ಪಂಚಾಯಿತಿ ವಿಫಲವಾಗಿದ್ದರಿಂದ ಸಂತ್ರಸ್ತೆ ಪೊಲೀಸರಿಗೆ ದೂರು ದಾಖಲಿಸಿದ್ದರು. ಪೊಲೀಸರು ತನಿಖೆ ನಡೆಸಿ ದೋಷಾರೋಪ ಪಟ್ಟಿ ಸಲ್ಲಿಸಿದ್ದರು. ಮೈಸೂರು 2ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯವು ಸಣ್ಣೇಗೌಡನನ್ನು ದೋಷಿಯಾಗಿ ತೀರ್ಮಾನಿಸಿ, ಶಿಕ್ಷೆ ವಿಧಿಸಿತ್ತು. ಇದರಿಂದ ಹೈಕೋರ್ಟ್‌ಗೆ ಕ್ರಿಮಿನಲ್ ಮೇಲ್ಮನವಿ ಸಲ್ಲಿಸಿದ್ದ ಸಣ್ಣೇಗೌಡ, ಸಂತ್ರಸ್ತೆ ಹಾಗೂ ಆಕೆಯ ಪುತ್ರನ ಜೊತೆಗೆ ಮಾಡಿಕೊಂಡ ಒಪ್ಪಂದ ಪರಿಗಣಿಸಿ ಶಿಕ್ಷಾವಧಿಯನ್ನು ಕಡಿತಗೊಳಿಸಬೇಕು ಎಂದು ಕೋರಿದ್ದ. ಈ ಮನವಿಯನ್ನು ಹೈಕೋರ್ಟ್ ಪುರಸ್ಕರಿಸಿದೆ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಇಂಡಿಯನ್ 2 (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಮಹಾರಾಜ (ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಕಿಲ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ನಾಟ್‌ಔಟ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಕಲ್ಕಿ (ಕ)	4 ಪ್ರದರ್ಶನಗಳು
ರಾಜಕಮಲ್	
ಟ್ವಿಸ್ಟರ್ (ಇಂ)	4 ಪ್ರದರ್ಶನಗಳು
ಸಂಗಂ	
ಹೆಜ್ಜಾರು (ಕ)	2 ಪ್ರದರ್ಶನಗಳು
ಇಂಡಿಯನ್ 2 (ತ)	2 ಪ್ರದರ್ಶನಗಳು
ಲಿಡೋ	
ಶಾಸ್ತ್ರಿ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಇಂಡಿಯನ್ 2 (ತ)	4 ಪ್ರದರ್ಶನಗಳು
ಪ್ರಭಾ	
ನಾಟ್‌ಔಟ್ (ಕ)	2 ಪ್ರದರ್ಶನಗಳು
ಹಿರಣ್ಯ (ಕ)	2 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10.10ಕ್ಕೆ, ಮ.1ಕ್ಕೆ, ಆಕ್ಸಿಡೆಂಡ್ ಆರ್ ಕಾನ್ಸ್ಪಿರೆಸಿ ಗೋದ್ರಾ (ಹಿಂ): ಮ.3.45ಕ್ಕೆ, ಸಂ.4.35ಕ್ಕೆ, ಕಲ್ಕಿ 2898 ಎಡಿ (ಕ): ಸಂ.6.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.10ಕ್ಕೆ
ಸ್ಕ್ರೀನ್ 2	ಟ್ವಿಸ್ಟರ್ಸ್ (ಇಂ): ಬೆ.10.30ಕ್ಕೆ, ಹೆಜ್ಜಾರು (ಕ): ಮ.1.10ಕ್ಕೆ, ಕಲ್ಕಿ 2898 ಎಡಿ(3ಡಿ) (ತೆ): ಮ.3.40ಕ್ಕೆ, ಆಕ್ಸಿಡೆಂಡ್ ಆರ್ ಕಾನ್ಸ್ಪಿರೆಸಿ ಗೋದ್ರಾ (ಹಿಂ): ರಾ.7.05ಕ್ಕೆ, ಕಲ್ಕಿ 2898 ಎಡಿ(3ಡಿ) (ಹಿಂ): ರಾ.10.05ಕ್ಕೆ
ಸ್ಕ್ರೀನ್ 3	ನಾಟ್‌ಔಟ್ 2024 (ಕ): ಬೆ.10.15ಕ್ಕೆ, ಕಲ್ಕಿ 2898 ಎಡಿ (ಕ): ಮ.1ಕ್ಕೆ, ಬ್ಯಾಡ್ ನ್ಯೂಸ್ (ಹಿಂ): ಸಂ.4.30ಕ್ಕೆ, ಟ್ವಿಸ್ಟರ್ಸ್ (ಇಂ): ರಾ.7.25ಕ್ಕೆ, ರಾ.10ಕ್ಕೆ.
ಸ್ಕ್ರೀನ್ 4	ಇನ್‌ಸೈಡ್ ಔಟ್ 2 (3ಡಿ) (ಇಂ): ಬೆ.10.55ಕ್ಕೆ, ಬ್ಯಾಕ್ ಬೆಂಚರ್ಸ್ (ಕ): ಮ.1ಕ್ಕೆ, ಇಂಡಿಯನ್ 2 (ತ): ಮ.3.30ಕ್ಕೆ, ಬ್ಯಾಡ್ ನ್ಯೂಸ್ (ಹಿಂ): ರಾ.7ಕ್ಕೆ, ರಾ.9.55ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಕಲ್ಕಿ 2898 ಎಡಿ (ಕ): ಬೆ.10.30ಕ್ಕೆ, ಸಂ.6ಕ್ಕೆ, ಲವ್ ಲಿ (ಕ): ಮ.1.55ಕ್ಕೆ.
ಸ್ಕ್ರೀನ್ 2	ಇಂಡಿಯನ್ 2 (ತ): ಮ.1ಕ್ಕೆ, ಸಂ.4.25ಕ್ಕೆ, ರಾ.7.50ಕ್ಕೆ.
ಸ್ಕ್ರೀನ್ 3	ಕಲ್ಕಿ 2898 ಎಡಿ (3ಡಿ)(ತೆ): ಬೆ.11.10ಕ್ಕೆ, ಮ.2.40ಕ್ಕೆ, ಇಂಡಿಯನ್ 2 (ತ): ಸಂ.6.05ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	ಇಂಡಿಯನ್ 2 (ತ): ಬೆ.10ಕ್ಕೆ, ಕಲ್ಕಿ 2898 ಎಡಿ (ಕ): ಮ.1.25ಕ್ಕೆ, ರಾ.7.45ಕ್ಕೆ, ಖಾಲಿ ಕುಡುಕರು (ಕ): ಸಂ.4.50ಕ್ಕೆ

ಪಿವಿಆರ್ ಸಿನಿಮಾಸ್
PVR CINEMAS
ನೆಕ್ಸಸ್ ಸೆಂಟರ್‌ಸಿಟಿ ಮಾಲ್,
2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಮೈಸೂರು ಬೇಸಿಗೆ ರೇಸ್

3ನೇ ದಿನ, ಗುರುವಾರ, 25–7–2024

ಇಂದಿನ ರೇಸ್‌ಗೆ ನಮ್ಮ ಆಯ್ಕೆ

ಮೊದಲನೇ ರೇಸ್ ಮಧ್ಯಾಹ್ನ 2.00 ಗಂಟೆಗೆ

I. ಕೋಲಾರ ಪ್ಲೇಟ್–1100 ಮೀ. 3 ವರ್ಷದ (ಟರ್ಮ್ಸ್). ಮಧ್ಯಾಹ್ನ 2.00ಕ್ಕೆ
1. ಶೆರೂಕ್ 2. ಹ್ಯಾಂಡ್ ಆಫ್ ಗಾಡ್ 3. NRI ವಿಕ್ಟರಿ

II. ಕೊಳ್ಳೇಗಾಲ ಪ್ಲೇಟ್ ಡಿII–1200 ಮೀ. ರೇಟೆಡ್ 00 ರಿಂದ 25. ಮ.2.30ಕ್ಕೆ
1. ಪೋಲಾರ್ ಕ್ವೀನ್ 2. ಡಿ.ಯುನೈಟೆಡ್ 3. ಡಿ ಗೋಲ್ಡ್‌ಕಪ್

III. ಪ್ರಿನ್ಸ್ ರೀಜೆಂಟ್ ಪ್ಲೇಟ್ ಡಿII –1200 ಮೀ. ರೇಟೆಡ್ 20 ರಿಂದ 45. ಮ.3.00ಕ್ಕೆ
1. ರನ್ನಿಂಗ್ ಬೋಲ್ಟ್ 2. NRI ಟಚ್ 3. ವರದಾನ್

IV. ಕೊಳ್ಳೇಗಾಲ ಪ್ಲೇಟ್ ಡಿI–1200 ಮೀ. ರೇಟೆಡ್ 00 ರಿಂದ 45. ಮ.3.30ಕ್ಕೆ
1. ರೀಪ್ ದಿ ಬೌಂಟಿ 2. ಒನ್ಲಿ ಎ ಸ್ಟಾರ್ 3. ನಿಶಾಕ್

V. ಡಾ. ಎನ್.ಎಂ.ಶ್ರೀನಿವಾಸ್ ಮೆಮೋರಿಯಲ್ ಕಪ್–1400 ಮೀ. ರೇಟೆಡ್ 40 ರಿಂದ 65. ಸಂಜೆ 4.00ಕ್ಕೆ
1. ಮಿಸ್ಟಿಕ್ ಡಿವೈನ್ 2. ಹಿಸ್ ಎಮಿನೆನ್ಸ್ 3. ಲಕ್ಕಿ ಪಾಯಿಂಟ್

VI. ಪ್ರಿನ್ಸ್ ರೀಜೆಂಟ್ ಪ್ಲೇಟ್ ಡಿI –1200 ಮೀ. ರೇಟೆಡ್ 20 ರಿಂದ 45. ಸಂ.4.30ಕ್ಕೆ
1. ಸಿರಾ 2. ಎಮರಾಲ್ಡ್ ಕ್ವೀನ್ 3. NRI ಸೀಕ್ರೆಟ್

VII. ಬಲಮುರಿ ಪ್ಲೇಟ್–1400 ಮೀ. ರೇಟೆಡ್ 20 ರಿಂದ 45. ಸಂ.5.00ಕ್ಕೆ
1. ರಿಯಲ್ ಶೋ 2. ಫ್ಲಾಮಿಂಗೊ ಡ್ಯಾನ್ಸರ್ 3. ಸಿಯೋಲ್

ದಿನದ ಅತ್ಯುತ್ತಮ	ಶೆರೂಕ್
ಡಬ್ಬಲ್	ರನ್ನಿಂಗ್ ಬೋಲ್ಟ್, ಸಿರಾ
ಜಾಕ್‌ಪಾಟ್	3, 4, 5, 6 ಮತ್ತು 7
ಮಿನಿ ಜಾಕ್‌ಪಾಟ್	4, 5, 6 ಮತ್ತು 7
I ಟ್ರಿಬಲ್	2, 3 ಮತ್ತು 4
II ಟ್ರಿಬಲ್	5, 6 ಮತ್ತು 7
ಎಕ್ಸ್‌ಆಕ್ಟ್	1 ರಿಂದ 7

ಟಿಪ್‌ಸ್ಟರ್ ಪಿಜಿಸಿ

ನೇಮಕ



ಕೆ.ಆರ್.ನಗರ, ಜು.24– ಕ್ಷೇತ್ರದ ಬಗರ್‌ಹುಕುಂ ಸಾಗುವಳಿ ಸಕ್ರಮೀಕರಣ ಸಮಿತಿ ಸದಸ್ಯರನ್ನಾಗಿ ತಾಲೂಕಿನ ಮಾರಿಗುಡಿ ಕೊಪ್ಪಲು ಗ್ರಾಮದ ಎಂ.ಅಪ್ಪಾಜಿಗೌಡ ಅವರನ್ನು ಶಾಸಕ ಡಿ.ರವಿಶಂಕರ್ ಶಿಫಾರಸ್ಸಿನ ಮೇರೆಗೆ ಕಂದಾಯ ಇಲಾಖೆ ಭೂ ಮಂಜೂರಾತಿ ವಿಭಾಗದ ಪೀಠಾಧಿಕಾರಿ ಎಂ.ಎಸ್.ಮುತ್ತುರಾಜು ನೇಮಕ ಮಾಡಿ ಆದೇಶ ಹೊರಡಿಸಿದ್ದಾರೆ.





ಪ್ಲಾಸ್ಟಿಕ್ ಬಳಕೆ ನಿಷೇಧಿಸಿ
ಪರಿಸರವನ್ನು ಕಾಪಾಡಿ

ಬೇಕಾಗಿದ್ದಾರೆ

ಸೆಂಥಿಲ್‌ಕುಮಾರ್ ಟೆಕ್ಸ್‌ಟೈಲ್ಸ್

ದಾಸಪ್ರಕಾಶ್ ಹೋಟೆಲ್ ಹತ್ತಿರ, ಗಾಂಧಿ ಚೌಕ, ಹಳೆ ಬ್ಯಾಂಕ್ ರಸ್ತೆ, ಮೈಸೂರು – 570001

ಖಾಲಿ ಇರುವ ಕೆಲಸಗಳು

- ಸೇಲ್ಸ್ ಮ್ಯಾನ್ ಮತ್ತು ಸೇಲ್ಸ್‌ಗರ್ಲ್ಸ್ ಅನುಭವವುಳ್ಳವರು ಮತ್ತು ಹೊಸಬರು
- ಸೂಪರ್ ವೈಸರ್ (ಅನುಭವವುಳ್ಳವರು)
- ಕಸ್ಟಮರ್ ಕೇರ್

ಆಸಕ್ತಿ ಉಳ್ಳವರು ಆಧಾರ್ ಕಾರ್ಡ್, ಫೋಟೋ, ಬಯೋಡಾಟಾ ತರತಕ್ಕದ್ದು, ಪಿಎಫ್ ಮತ್ತು ಇಎಸ್ಐ ಸೌಲಭ್ಯವಿದೆ. ಅನುಭವಕ್ಕೆ ತಕ್ಕಂತೆ ಉತ್ತಮ ವೇತನ ನೀಡಲಾಗುತ್ತದೆ

ಸಂದರ್ಶನದ ದಿನಾಂಕ ಮತ್ತು ವೇಳೆ

26.07.2024 ರಿಂದ 31.07.2024 ರವರೆಗೆ, ಬೆಳಗ್ಗೆ 11 ರಿಂದ ಸಂಜೆ 4.00ರವರೆಗೆ

ಸಂಪರ್ಕಿಸಿ: **8884450015**

CHANGE OF NAME

I, Hema Jat, D/o Ananda Kumar, W/o Kailash Choudhary M, hereby announce that I have changed my name to Hema Choudhary after my marriage on 20th November 2021. My age is 27 years, and my address is #815/2, 1st floor, Garadi Road, behind co-operative bank, lashkar mohalla, Mysuru - 570001. Affidavit dated 22/7/2024. Notary by S Pavithra.

Sd/ HEMA CHOUDHARY.

10ನೇ ವರ್ಷದ ಚಿರಸ್ಮರಣೆ

ಶ್ರೀ ಎನ್.ಎಸ್. ಶ್ರೀನಿವಾಸ್‌ರವರು

(ನ್ಯಾಯಬೆಲೆ ಅಂಗಡಿ ಮಾಲೀಕರು)



ನೀವು ನಮ್ಮನ್ನಗಲಿ ಇಂದಿಗೆ 10 ವರ್ಷ ಕಳೆದರೂ ನಿಮ್ಮ ನೆನಪು ನಮ್ಮ ಮನದಲ್ಲಿ ಹಚ್ಚಹಸಿರಾಗಿದೆ. ಸದಾ ನಿಮ್ಮ ನೆನಪಿನಲ್ಲಿರುವ

ಎಸ್. ನಟರಾಜ್ ಮತ್ತು ಕುಟುಂಬವರ್ಗದವರು

ಹಾಗೂ ಹೆಣ್ಣುಮಕ್ಕಳು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು

ಸಾರ್ವಜನಿಕರ ಗಮನಕ್ಕಾಗಿ

ಏನೆಂದರೆ, ನನ್ನ ಕಕ್ಷಿದಾರರಾದ ಮೈಸೂರು ನಗರ, 570 012 ಚಾಮರಾಜ ಮೊಹಲ್ಲಾ, ವಿನಾಯಕ ನಗರ, 3ನೇ ರಸ್ತೆ, 4ನೇ ಕ್ರಾಸ್, ಮೊದಲನೇ ಮಹಡಿಯ ಕಛೇರಿ ಸಂಖ್ಯೆ 2471 ರಲ್ಲಿರುವ ಎಸ್.ಪಿ. ವೇಂಚರ್ಸ್" ನೊಂದಾಯಿತ ಪಾಲುದಾರಿಕೆ ಸಂಸ್ಥೆಯ ವ್ಯವಸ್ಥಾಪಕ ಪಾಲುದಾರರಾದ **ಶ್ರೀ ಸಂತೋಷ್ ಕೆ.ಎನ್. ಹಾಗೂ ಶ್ರೀ ಪ್ರದೀಪ್ ಆರ್.** ರವರ ಇರಾದೆಯ ಮೇರೆಗೆ, ಏನೆಂದರೆ, ಮೇಲ್ಕಂಡ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತಿನ ಸಂಬಂಧ ಮೈಸೂರು ನಗರ, ಕೆ.ಜಿ. ಕೊಪ್ಪಲು, ಕಾಂತರಾಜ್ ಅರಸ್ ರಸ್ತೆಯ ಮನೆ ನಂ.2392 ರಲ್ಲಿವಾಸವಾಗಿರುವ ಲೇಟ್ ಬಸವಯ್ಯ @ ಬೋರಯ್ಯ ರವರ ಧರ್ಮ ಪತ್ನಿ ಸುಮಾರು 73 ವರ್ಷ ವಯಸ್ಸಿನ **ಶ್ರೀಮತಿ ರೇವಮ್ಮ** ಹಾಗೂ ಲೇಟ್ ಬಸವಯ್ಯ @ ಬೋರಯ್ಯ ರವರ ಮಗ ಸುಮಾರು 43 ವರ್ಷ ವಯಸ್ಸಿನ **ಶ್ರೀ ರಾಮಚಂದ್ರ** ಹಾಗೂ ಇವರ ಧರ್ಮಪತ್ನಿ ಸುಮಾರು 37 ವರ್ಷ ವಯಸ್ಸಿನ **ಶ್ರೀಮತಿ ಭಾಗ್ಯ** ಹಾಗೂ ಇವರ ಮಕ್ಕಳಾದ ಸುಮಾರು 14 ವರ್ಷ ವಯಸ್ಸಿನ **ಕುಮಾರಿ ಸಿಂಚನ ಆರ್.** (ಇವರ ತಾಯಿ ಶ್ರೀಮತಿ ಭಾಗ್ಯ ಇವರನ್ನು ನ್ಯಾಚುರಲ್ ಗಾರ್ಡಿಯನ್ ಆಗಿ) ಹಾಗೂ ರೇವಮ್ಮ ಮತ್ತು ಲೇಟ್ ಬಸವಯ್ಯ @ ಬೋರಯ್ಯ ನವರ ಮಗಳಾದ ಮೈಸೂರು ತಾಲ್ಲೂಕು, ನಾಗವಾಲ ಬೊಮ್ಮೇನಹಳ್ಳಿಯ ಮನೆ.ನಂ.55/1 ರಲ್ಲಿ ವಾಸವಾಗಿರುವ ಲೇಟ್ ಬಿ.ಎಂ.ನಾಗರಾಜ್ ರವರ ಧರ್ಮಪತ್ನಿಯಾದ ಸುಮಾರು 60 ವರ್ಷ ವಯಸ್ಸಿನ **ಶ್ರೀಮತಿ ವಿಜಯಲಕ್ಷ್ಮೀ ರವರಿಗೂ.** ಕೆಳಕಂಡ ಜಮೀನಿನ ಸಂಬಂದ ದಿನಾಂಕ 30/1/2021 ರ ನೊಂದಾಯಿತ ಜಂಟಿ ಅಭಿವೃದ್ಧಿ ಕರಾರು ಹಾಗು ಸಾಮಾನ್ಯ ಅಧಿಕಾರ ಪತ್ರಗಳು ಆಗಿದ್ದು ಹಾಗೂ ಆ ಬಗ್ಗೆ ಒಡಂಬಡಿಕೆಯಾಗಿದ್ದು, ಸದರಿ ಜಮೀನನ್ನು ನನ್ನ ಕಕ್ಷಿದಾರರು ಈಗಾಗಲೇ ಬಡಾವಣೆ ನಿರ್ಮಿಸುವ ಬಗ್ಗೆ ಕಾರ್ಯ ಪ್ರವೃತ್ತರಾಗಿದ್ದು, ಈಗಾಗಲೇ ಆ ಸಂಬಂಧ ನನ್ನ ಕಕ್ಷಿದಾರರಿಗೆ ಕೆಲವು ದಾಖಲಾತಿಗಳನ್ನು ಹಾಜರು ಮಾಡಿದ್ದು ನನ್ನ ಕಕ್ಷಿದಾರರು ಸದರಿ ಜಮೀನಿನ ಸಂಬಂಧ ಈಗಾಗಲೇ ಸಂಬಂಧ ಪಟ್ಟ ಇಲಾಖೆಯಲ್ಲಿ ಭೂ ಪರಿವರ್ತನೆಗಾಗಿ ಕಾರ್ಯ ಪ್ರವೃತ್ತರಾಗಿರುತ್ತಾರೆ. ಆದರೆ, ಇತ್ತೀಚಿಗೆ ಕೆಲವು ಸಂಬಂಧ ಪಡದ ವ್ಯಕ್ತಿಗಳು ಅನವಶ್ಯಕವಾಗಿ ಷೆಡ್ಯೂಲ್ ಸ್ವತ್ತಿನ ಹತ್ತಿರ ಬಂದು ಸದರಿ ಸ್ವತ್ತು ಜೆ.ಡಿ.ಎ. ಹಾಗೂ ಮಾರಾಟಕ್ಕೆ ಇದೆ ಎಂದು ಬೇರೆಯವರಿಗೆ ಜಮೀನನ್ನು ತೋರಿಸುತ್ತಿರುವ ಬಗ್ಗೆ ನನ್ನ ಕಕ್ಷಿದಾರರ ಗಮನಕ್ಕೆ ಬಂದಿದ್ದು ಆ ಬಗ್ಗೆ ಈಗಾಗಲೇ ಹಲವಾರು ವ್ಯಕ್ತಿಗಳಿಗೆ ನನ್ನ ಕಕ್ಷಿದಾರರು ಮೇಲ್ಕಂಡ ಜಂಟಿ ಅಭಿವೃದ್ಧಿ ಬಗ್ಗೆ ತಿಳಿಸಿರುತ್ತಾರೆ. ಆದರೆ ನನ್ನ ಕಕ್ಷಿದಾರರು ಇಲ್ಲದಿದ್ದಾಗ ಕೆಲವು ವ್ಯಕ್ತಿಗಳೂ ಹಾಗೂ ಅಪರಿಚಿತರು ಆಗಿಂದಾಗ್ಗೆ ನನ್ನ ಜಮೀನಿನ ಹತ್ತಿರ ಬಂದು ಬೇರೆಯವರಿಗೆ ತೋರಿಸುತ್ತಿದ್ದು ಆದ್ದರಿಂದ ಸದರಿ ಜಮೀನಿನ ಸಂಬಂಧ ಯಾರಾದರೂ ವ್ಯವಹರಿಸಿದರೆ ಮೇಲ್ಕಂಡ ನನ್ನ ಕಕ್ಷಿದಾರರಿಗೆ ಬದ್ಧಪಡಿಸುವುದಿಲ್ಲವೆಂದು ಈ ಮೂಲಕ ತಿಳಿಯತಕ್ಕದ್ದು.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಇಲವಾಲ ಹೋಬಳಿ, ಬೊಮ್ಮನಹಳ್ಳಿ ಗ್ರಾಮದಲ್ಲಿರುವ ಸರ್ವೆ.ನಂ.35 ರಲ್ಲಿ ಒಟ್ಟು 8 ಎಕರೆ 17 ಗುಂಟೆ (3 ಗುಂಟೆ ಖರಾಬು ಸೇರಿ 8 ಎಕರೆ 20 ಗುಂಟೆ) ಸ್ವತ್ತಿನ ಜಮೀನಿಗೆ **ಚೆಕ್ಕುಬಂದಿ: ಪೂರ್ವಕ್ಕೆ:** ಹುಯಿಲಾಳು ಗ್ರಾಮದ ಎಲ್ಲೆ, **ಪಶ್ಚಿಮಕ್ಕೆ:** ಮಲ್ಲೇಗೌಡ ಮತ್ತು ನಿಂಗನ ಜಮೀನು, **ಉತ್ತರಕ್ಕೆ:** ಕೆಂಪಲಿಂಗಯ್ಯನ ಜಮೀನು, **ದಕ್ಷಿಣಕ್ಕೆ:** ಕೋಳಿ ಮಲ್ಲಯ್ಯನ ಜಮೀನು.

ಕಕ್ಷಿದಾರರ ಪರ ವಕೀಲರು

ಸಹಿ/– ಶ್ರೀ ಪಾಲಾಕ್ಷ, ನಂ.645, ಮೊದಲನೇ ಮಹಡಿ, 'ನಾರಾಯಣ ಶಾಸ್ತ್ರಿ ರಸ್ತೆ, ಸೀತಾವಿಲಾಸ ಕಲ್ಯಾಣ ಮಂಟಪ ಹಿಂಭಾಗ, ಮೈಸೂರು,

ಮೊ ನಂ. 9448075718, ಫೋನ್: 0821–2523218